ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಕನ್ನಡ ಸಾಮರಸ್ಯದ ನೆಲೆಗಳು-೩

ಹಾಸನ ಜಿಲ್ಲೆಯ ಸಾಮರಸ್ಯದ ನೆಲೆಗಳು

ಪ್ರಸಾದ್ ರಕ್ಷಿದಿ
ಚಲಂ ಹಾಡ್ಲಹಳ್ಳಿ

ಪ್ರಸಾದ್ ರಕ್ಷಿದಿ

ಪ್ರಸಾದ್ ರಕ್ಷಿದಿ: ಊರು ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ರಕ್ಷಿದಿ. ರಂಗ ಕರ್ಮಿ, ನಾಟಕಕಾರ, ರಂಗ ನಿರ್ದೇಶಕ. ಐದು ದಶಕಗಳಿಂದ ಸಾಮಾಜಿಕ, ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿರುವ ಜೈ ಕರ್ನಾಟಕ ಸಂಘ ಬೆಳ್ಳೇಕೆರೆಯ ಸ್ಥಾಪಕ ಸದಸ್ಯ. ಇವರು ಬರೆದಿರುವ ಪುಸ್ತಕಗಳು, "ಬೆಳ್ಳೇಕೆರೆ ಹಳ್ಳಿ ಥೇಟರ್", "ನಮ್ಮ ನಡುವಿನ ತೇಜಸ್ವಿ", "ನಾವರಿಯದ ದೇರಾಜೆ", "ಕಳೆದು ಹೋದ ದಿನಗಳು", "ನಮ್ಮೂರಿನ ಯೆತ್ನಳ್ಳ ಹೊಳೆಯಾದದ್ದು" ಮುಂತಾದವು. ರಚಿಸಿದ ನಾಟಕಗಳು, "ಆನೆ ದಾರಿಯಲ್ಲಿ ಅಲ್ಲೋಲ ಕಲ್ಲೋಲ", "ಚಂದ್ರಮಂಡಲ", "ಇಂಡಿಯಾ ೧೯೯೧", "ಮಾಯಾಮೃಗ" ಇತ್ಯಾದಿ.

ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ಸಿಜಿಕೆ ರಂಗ ಪ್ರಶಸ್ತಿ ಹಾಸನ ಜಿಲ್ಲಾ ಪಂಚಾಯತ್ನ ಬಾಬಾ ಸಾಹೇಬ ಅಂಬೇಡ್ಕರ್ ಪ್ರಶಸ್ತಿ ಸಂದಿವೆ.

ಚಲಂ ಹಾಡ್ಲಹಳ್ಳಿ

ಚಲಂ ಹಾಡ್ಲಹಳ್ಳಿ: ಹಾಸನದಲ್ಲಿ ವಾಸವಿರುವ ಚಲಂ ಹಾಡ್ಲಹಳ್ಳಿ ಸಕಲೇಶಪುರ ತಾಲೂಕಿನವರು. ತಂದೆ ಹಾಡ್ಲಹಳ್ಳಿ ನಾಗರಾಜ್, ನಾಡಿನ ಹಿರಿಯ ಸಾಹಿತಿಗಳು. ಚಲಂ ಹಾಡ್ಲಹಳ್ಳಿ "ಅವಳ ಪಾದಗಳು" ಹಾಗೂ "ಈ ಮಳೆಗಾಲ ನಮ್ಮದಲ್ಲ" ಎಂಬ ಕವನ ಸಂಕಲನಗಳನ್ನು ಮತ್ತು "ಪುನರಪಿ" ಹಾಗು "ಎಲ್ಲಾ ಮೀನುಗಳು ಗಾಳಕ್ಕೆ ಸಿಕ್ಕುವುದಿಲ್ಲ" ಎಂಬ ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ, "ವಿಶೇಷ ಸೂಚನೆ" ಇವರ ಪ್ರಬಂಧ ಸಂಕಲನ. ೧೯೯೭ ರಿಂದ ಪತ್ರಕರ್ತರಾಗಿ ಕೆಲಸ ಮಾಡುತ್ತಿರುವ ಇವರು ಅಗ್ನಿ ವಾರಪತ್ರಿಕೆ, ಲಂಕೇಶ್ ಪತ್ರಿಕೆ, ಜಾಣಗೆರೆ ಪತ್ರಿಕೆ ಸೇರಿದಂತೆ ಹಲವಾರು ರಾಜ್ಯಮಟ್ಟದ ಪತ್ರಿಕೆಗಳಿಗೆ ವರದಿಗಾರರಾಗಿ ಕಾರ್ಯ ನಿರ್ವಹಿಸಿದ್ದಾರೆ. ೨೦೧೮ರಿಂದ ಅವರದ್ದೇ ಮಾಲೀಕತ್ವದ "ಜೇನುಗಿರಿ" ಎಂಬ ದಿನಪತ್ರಿಕೆಯಲ್ಲಿ ಸಂಪಾದಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ರಾಜ್ಯೋತ್ಸವ ಪ್ರಶಸ್ತಿ, ಕನ್ನಡ ಸಾಹಿತ್ಯ ಅಕಾಡೆಮಿಯ ಸಾಹಿತ್ಯಶ್ರೀ ಪ್ರಶಸ್ತಿ ಸೇರಿದಂತೆ ಹಲವಾರು ಗೌರವಗಳಿಗೆ ಇವರು ಭಾಜನರಾಗಿದ್ದಾರೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರ
ಎರಡನೇ ಮಹಡಿ, ವಿಧಾನಸೌಧ, ಬೆಂಗಳೂರು-೫೬೦ ೦೦೧

ಕನ್ನಡ ಸಾಮರಸ್ಯದ ನೆಲೆಗಳು-೩

ಹಾಸನ ಜಿಲ್ಲೆಯ ಸಾಮರಸ್ಯದ ನೆಲೆಗಳು

ಲೇಖಕರು
ಪ್ರಸಾದ್ ರಕ್ಷಿದಿ
ಚಲಂ ಹಾಡ್ಲಹಳ್ಳಿ

ಹಾಸನ ಜಿಲ್ಲೆಯ ಸಾಮರಸ್ಯದ ನೆಲೆಗಳು, ಲೇಖಕರು: ಪ್ರಸಾದ್ ರಕ್ಷಿದಿ ಮತ್ತು ಚಲಂ ಹಾಡ್ಲಹಳ್ಳಿ, ಪ್ರಧಾನ ಸಂಪಾದಕರು: ಡಾ ಪುರುಷೋತ್ತಮ ಬಿಳಿಮಲೆ, ವ್ಯವಸ್ಥಾಪಕ ಸಂಪಾದಕರು: ಡಾ. ಸಂತೋಷ ಹಾನಗಲ್ಲ, ಸಂಪಾದಕರು: ಶ್ರೀ ಬೊಳುವಾರು ಮಹಮದ್ ಕುಂಞಿ, ಯೋಜನಾ ಸಂಚಾಲಕರು: ಡಾ. ರವಿಕುಮಾರ್ ನೀಹ, ಪ್ರಕಾಶಕರು: ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು-೫೬೦ ೦೦೧.

Hasana Jilleya Samarasyada Nelegalu, Written by: Prasad Rakshidi and Chalam Hadlahalli, Chief Editor: Dr. Purushothama Bilimale, Managing Editor: Dr. Santhosh Hangal, Editor: Shri Bolwar Mahamad Kunhi, Project Coordinator: Dr. Ravikumar Neeha, Published by: Secretary, Kannada Development Authority, Govt. of Karnataka, Vidhana Soudha, Bengaluru-560001

ಕೃತಿಸ್ವಾಮ್ಯ: ಕಾಯ್ದಿರಿಸಿದೆ, ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ
© : Reserved, Secretary, Kannada Development Authority

ಮೊದಲ ಮುದ್ರಣ: ೨೦೨೫
ಪುಟಗಳು: xxii + ೯೪= ೧೧೬
ಕಾಗದ: ೮೦ ಜಿ.ಎಸ್.ಎಂ. ಎನ್ಎಸ್ ಮ್ಯಾಪ್ಲಿಥೊ
ಬೆಲೆ: ೧೦೦/-
ಪ್ರತಿಗಳು: ೨೦೦೦
ಮುಖಪುಟ: ಕೆ. ಪ್ರಭಾಕರ, ಬೆಂಗಳೂರು
ಅಕ್ಷರ ಜೋಡಣೆ: ಬ್ರಹ್ಮಣೀಪುರ ಹರೀಶ, ಚನ್ನಪಟ್ಟಣ
ಮುದ್ರಣ: ಶ್ರೀ ಐಶ್ವರ್ಯ ಪ್ರಿಂಟರ್ಸ್, ಬೆಂಗಳೂರು-೫೬೦೦೮೫

First Edition: 2025
Pages:xxii + 94= 116
Paper: 80 GSM NS Mapllitho
Price: 100/-
Copies: 2000
Cover Page: K. Prabhakara, Bengaluru
Page Layout: Brahmanipura Hareesha, Channapattana
Printer: Shree Aishwarya Printers, Bengaluru-560085

ಸಂಪಾದಕೀಯ ಸಮಿತಿ

ಪ್ರಧಾನ ಸಂಪಾದಕರು
ಡಾ. ಪುರುಷೋತ್ತಮ ಬಿಳಿಮಲೆ

ವ್ಯವಸ್ಥಾಪಕ ಸಂಪಾದಕರು
ಡಾ. ಸಂತೋಷ ಹಾನಗಲ್ಲ

ಸಂಪಾದಕರು
ಶ್ರೀ ಬೊಳುವಾರು ಮಹಮದ್ ಕುಂಞಿ

ಯೋಜನಾ ಸಂಚಾಲಕರು
ಡಾ. ರವಿಕುಮಾರ್ ನೀಹ

ಸದಸ್ಯರು
ಡಾ. ಕಲ್ಯಾಣರಾವ ಜಿ ಪಾಟೀಲ, ಕಲಬುರಗಿ
ಶ್ರೀ ಅರವಿಂದ ಚೊಕ್ಕಾಡಿ, ದಕ್ಷಿಣ ಕನ್ನಡ
ಡಾ. ಕೆ. ಷರೀಫಾ, ಬೆಂಗಳೂರು
ಡಾ. ರಾಜಶೇಖರ ಹತಗುಂದಿ, ಕಲಬುರಗಿ
ಡಾ. ಸಬಿತಾ ಬನ್ನಾಡಿ, ಶಿವಮೊಗ್ಗ
ಶ್ರೀ ನಾ. ದಿವಾಕರ, ಮೈಸೂರು
ಡಾ. ಗುರುಲಿಂಗಪ್ಪ ಧಬಾಲೆ, ಅಕ್ಕಲಕೋಟೆ (ಮಹಾರಾಷ್ಟ್ರ)
ಡಾ. ಉಷಾದೇವಿ ಉ. ಹಿರೇಮಠ, ವಿಜಯಪುರ
ಡಾ. ಡಿ. ಡೊಮಿನಿಕ್, ಬೆಂಗಳೂರು
ಪ್ರೊ ಬಿ.ಎಂ. ಪುಟ್ಟಯ್ಯ, ವಿಜಯನಗರ

ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಆಡಳಿತ ಮಂಡಳಿ

ಅಧ್ಯಕ್ಷರು

ಪುರುಷೋತ್ತಮ ಬಿಳಿಮಲೆ

ಸದಸ್ಯರು

ಎ.ಬಿ. ರಾಮಚಂದ್ರಪ್ಪ

ವಿ.ಪಿ. ನಿರಂಜನಾರಾಧ್ಯ

ಟಿ. ಗುರುರಾಜ್

ರವಿಕುಮಾರ್ ನೀಹ

ದಾಕ್ಷಾಯಿಣಿ ವೀ. ಹುಡೇದ

ಯಾಕೂಬ್ ಖಾದರ್ ಗುಲ್ವಾಡಿ

ವಿರೂಪಣ್ಣ ಕಲ್ಲೂರು

ಟಿ. ತಿಮ್ಮೇಶ್

ಕಾರ್ಯದರ್ಶಿ

ಸಂತೋಷ ಹಾನಗಲ್ಲ

ಕನ್ನಡ ಭಾಷೆಯ ಸಮನ್ವಯದ ನೆಲೆಗಳು

ಒಂದು ನಿರ್ದಿಷ್ಟ ಸಮಾಜದಲ್ಲಿ ಬದುಕುತ್ತಿರುವ ನಮಗೆಲ್ಲರಿಗೂ ನಮ್ಮದೇ ಆದ ಕೆಲವು 'ಗುರುತುಗಳು' ಇರುತ್ತವೆ. ಈ ಗುರುತುಗಳು, ಸಮುದಾಯ, ಜಾತಿ, ಭಾಷೆ, ಪ್ರದೇಶ, ಕಾಲ ಮತ್ತಿತರ ಅಂಶಗಳನ್ನು ಅವಲಂಬಿಸಿಕೊಂಡು ಸಂಕೀರ್ಣವಾಗಿರುತ್ತವೆ ಈ ಇಡೀ ಪ್ರಕ್ರಿಯೆಯು ಕ್ರಿಯಾಶೀಲವಾಗುವುದು ಭಾಷೆಯ ಮೂಲಕವೇ ಆದುದರಿಂದ ಇಲ್ಲಿ ಭಾಷೆಯೇ ಅಂತಿಮ. ಹೀಗಾಗಿ ಭಾರತದಲ್ಲಿ ವಿಶ್ವವನ್ನು ಅರಿಯಲೆತ್ನಿಸಿದ ತತ್ವಶಾಸ್ತ್ರಜ್ಞರೆಲ್ಲರೂ ಭಾಷೆಯನ್ನೂ ಆಳವಾಗಿ ಅಭ್ಯಸಿಸಿದ್ದರು. 'ಭಾಷೆಯಲ್ಲಿರುವ ಪದಗಳ ಮೂಲಕವೇ ಪ್ರಪಂಚವನ್ನು ಅರಿಯಲು ಸಾಧ್ಯ' ಎಂಬ ಮಾತನ್ನು ಒಪ್ಪಿಕೊಂಡೇ ಭರ್ತೃಹರಿ, ವಾತ್ಸಾಯನ, ಪತಂಜಲಿ, ಕುಮಾರಿಲ, ಪಾಣಿನಿ, ಯಾಸ್ಕ, ಶಾಕಟಾಯನ, ಕೇಶಿರಾಜ ಮೊದಲಾದವರು ತಮ್ಮ ತಮ್ಮ ಹಾದಿಯಲ್ಲಿ ಮುಂದೆ ಸಾಗಿದರು. ಮಾತಿನ ಮೂಲವು ಶಬ್ದವಷ್ಟೇ ಅಲ್ಲ, ನಿಶ್ಯಬ್ದವೂ ಹೌದೆಂಬುದನ್ನು ಅವರೆಲ್ಲ ಒಪ್ಪಿಕೊಂಡದ್ದನ್ನು ಗಮನಿಸಿದರೆ ಭಾಷೆಯ ಕುರಿತಾದ ಚಿಂತನೆಗಳು

ತಲುಪಿದ ಎತ್ತರದ ಪರಿಚಯ ನಮಗಾಗಬಹುದು. ೧೨ನೇ ಶತಮಾನದ ಕೊನೆಯ ಭಾಗದಲ್ಲಿ ಜೀವಿಸಿದ್ದ ಕನ್ನಡದ ಕವಿ ನೇಮಿಚಂದ್ರ ಹೇಳಿದ ವಿವೇಕದ ಮಾತೊಂದು ಈ ಮುಂದಿನಂತಿದೆ- 'ವಾನರ ಸೈನ್ಯವು ಸಮುದ್ರಕ್ಕೆ ಸೇತುವೆಯನ್ನು ಕಟ್ಟಲಿ ಕಟ್ಟದಿರಲಿ. ವಾಮನಾವತಾರದಲ್ಲಿ ವಾಮನನು ಆಕಾಶವನ್ನು ತನ್ನ ಕಾಲಿನಿಂದ ಮುಟ್ಟಲಿ ಮುಟ್ಟದಿರಲಿ, ಅರ್ಜುನನು ಶಿವನ ಗಂಟಲನ್ನು ಒತ್ತಿ ಮೆಟ್ಟಲಿ ಮೆಟ್ಟದಿರಲಿ. ಆದರೆ ಕವಿಗಳು ತಮ್ಮ ಕೃತಿಗಳಲ್ಲಿ ಕಟ್ಟಿದರಲ್ಲವೇ?'. ಈ ಮಾತು ಭಾಷೆಯ ಅಪಾರ ಸಾಧ್ಯತೆಗಳನ್ನು ಸುಂದರವಾಗಿ ಕಟ್ಟಿಕೊಡುತ್ತದೆ.

ಇಲ್ಲಿ ಬಹಳ ಎಚ್ಚರದಿಂದ ಗಮನಿಸಬೇಕಾದ ಅಂಶವೆಂದರೆ, ಬಹುಭಾಷಾ ಪರಿಸರದಲ್ಲಿ ಮೂಡುವ ಭಾಷಾ ಗುರುತುಗಳು ಅಥವಾ ಅಸ್ಮಿತೆಯ ಸ್ವರೂಪ ಯಾವ ಬಗೆಯದು ಎಂಬುದನ್ನು ಅರಿಯುವುದು. ಅದು ಕಾಲ ಕಾಲಕ್ಕೆ ಬದಲಾಗುತ್ತಾ ಹೋಗುತ್ತದೆಯೋ? ಅಥವಾ ಸ್ಥಾಯಿಯಾಗಿ ಒಂದು ಭಾಷೆ ಇದ್ದು ಉಳಿದ ಭಾಷೆಗಳು ಸಂಚಾರೀ ರೂಪದಲ್ಲಿ ಬಂದು ಹೋಗುತ್ತಿರುತ್ತವೆಯೋ? ಈ ಕುರಿತು ಇನ್ನಷ್ಟು ಅಧ್ಯಯನಗಳು ನಡೆಯಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕನ್ನಡ ಭಾಷೆಯ ಗುರುತುಗಳನ್ನು ಅರ್ಥ ಮಾಡಿಕೊಳ್ಳಲು ಯೋಜನೆಯೊಂದನ್ನು ಹಮ್ಮಿಕೊಂಡಿದ್ದು, ಅದರ ಭಾಗವಾಗಿ ಹೊಸ ಓದುಗರಿಗಾಗಿ ಕನಿಷ್ಠ ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಭಾಷೆ ಮತ್ತು ಸಂಸ್ಕೃತಿ ಒಂದರೊಳಗೊಂದು ಬೆಸೆದು ಕೊಂಡಿರುತ್ತವೆ. ಕನ್ನಡ ಭಾಷೆ ಅಂದರೆ ಕನ್ನಡ ಸಂಸ್ಕೃತಿಯೂ ಹೌದು, ಕನ್ನಡ ಸಂಸ್ಕೃತಿ ಅಂದರೆ ಕನ್ನಡ ಭಾಷೆಯೂ ಹೌದು. ಕನ್ನಡ ಭಾಷೆಯು ಅದರ ಉಗಮದಿಂದ ಇಂದಿನವರೆಗೆ

ಬಹುಮುಖಿಯಾಗಿ ಬೆಳೆಯುತ್ತಲೇ ಬಂದಿದೆ. ಕವಿರಾಜಮಾರ್ಗವನ್ನು ಬರೆದ ಶ್ರೀವಿಜಯನು (ಕ್ರಿಸ್ತಶಕ ೮೫೦) 'ಕನ್ನಡಂಗಳ್' ಎಂಬ ಪದವನ್ನು ಬಳಸಿ, 'ಕನ್ನಡದ ಬಹುತ್ವವನ್ನು ಅರಿಯಲು ಸಾವಿರ ನಾಲಗೆಯ ಆದಿಶೇಷನಿಗೂ ಅಸಾಧ್ಯ' (ಕರಾಮಾ ಆ.೧ ಪ.೪೬) ಎನ್ನುತ್ತಾನೆ. ಆ ಕಾಲದಿಂದಲೂ ಅಸಂಖ್ಯ ಪ್ರಾದೇಶಿಕ ಮತ್ತು ಸಾಮಾಜಿಕ ಪ್ರಭೇದಗಳನ್ನು ತೋರಿಸುತ್ತಾ ಬಂದಿರುವ ಕನ್ನಡ ಭಾಷೆಯು, ನಮ್ಮ ಸಂಸ್ಕೃತಿಯು ಎಷ್ಟೊಂದು ವೈವಿಧ್ಯಮಯವಾಗಿದೆ ಎಂಬುದನ್ನು ಬೇರೆ ಬೇರೆ ಆಯಾಮಗಳಲ್ಲಿ ಪ್ರಕಟಿಸುತ್ತಲೇ ಬಂದಿದೆ. ಒಂದು ಕಾಲಕ್ಕೆ 'ಕಾವೇರಿಯಿಂದ ಗೋದಾವರಿವರೆಗೆ' ವಿಸ್ತಾರವಾಗಿ ಹರಡಿಕೊಂಡಿದ್ದ ಕನ್ನಡ ನಾಡಿಗೆ ಎಲ್ಲ ದಿಕ್ಕುಗಳಿಂದ ವಿಭಿನ್ನ ಸಂಸ್ಕೃತಿಗಳು ಮುಕ್ತವಾಗಿ ಪ್ರವೇಶಿಸಿ, ಕಾಲಾಂತರದಲ್ಲಿ ಅವೆಲ್ಲವೂ ಕನ್ನಡವಾಗಿವೆ. ಉತ್ತರದ ಬಿಹಾರದಿಂದ ನಮ್ಮ ನೆಲಕ್ಕೆ ಆಗಮಿಸಿದ ಜೈನ ಧರ್ಮವು ನಮಗೆ ಪಂಪ, ರನ್ನ, ನಾಗಚಂದ್ರನೇ ಮೊದಲಾದ ಮಹಾಕವಿಗಳನ್ನು ಕೊಟ್ಟಿತು. ತಮಿಳುನಾಡಿನಿಂದ ಕರ್ನಾಟಕ ಪ್ರವೇಶಿಸಿದ ವಿಶಿಷ್ಟಾದ್ವೈತವು ಮೇಲುಕೋಟೆಯನ್ನು ಸಂಪನ್ನಗೊಳಿಸಿತು. ಕಡಲಾಚೆಯಿಂದ ಬಂದ ಇಸ್ಲಾಂ ಧರ್ಮವು ಕರ್ನಾಟಕದ ವಾಸ್ತು ಶಿಲ್ಪಕ್ಕೆ ಹೊಸ ತಿರುವು ನೀಡಿತು. ಕ್ರಿಶ್ಚಿಯನ್ ಧರ್ಮವು ಕನ್ನಡಕ್ಕೆ ಆಧುನಿಕತೆಯ ಸ್ಪರ್ಶ ನೀಡಿತು. ಇದೇ ರೀತಿಯಲ್ಲಿ ಕನ್ನಡ ನಾಡಿಗೆ ಅನೇಕ ಸಮುದಾಯಗಳು ವಲಸೆ ಬಂದು ನೆಲೆಸಿವೆ. ಯಾವುದನ್ನೂ ತಿರಸ್ಕರಿಸದೆ, ಎಲ್ಲವನ್ನೂ ತನ್ನೊಳಗೆ ಸೇರಿಸಿಕೊಂಡು ವಿಭಿನ್ನವಾಗಿ ಬೆಳೆದಿರುವ ಕನ್ನಡ ನಾಡಿನ ಈ ಗುಣವು ಬಹಳ ಮಾನವೀಯವೂ ಉದಾರವೂ ಆಗಿದೆ.

ಕಾರಣಾಂತರಗಳಿಂದ, ಕನ್ನಡದ ಈ ಗುಣ ಇವತ್ತು ಕೆಲವು ಬಿಕ್ಕಟ್ಟುಗಳನ್ನು ಇದಿರಿಸುತ್ತಿದೆ. ೧೯೯೦ರ ದಶಕದ ಆನಂತರದ

ಕೆಲವು ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಬೆಳವಣಿಗೆಗಳು ಕನ್ನಡವನ್ನು ಏಕಮುಖವಾಗಿ ಬೆಳೆಸುತ್ತಿದೆ. ಭಾಷೆಯು ಮಾರುಕಟ್ಟೆ ಕೇಂದ್ರಿತವಾದಾಗ ಹೀಗಾಗುತ್ತದೆ. ಇಂಥ ಸಂದರ್ಭದಲ್ಲಿ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ನಾವೆಲ್ಲರೂ ಹೊಣೆಯರಿತು ಕೆಲಸ ಮಾಡಬೇಕಾಗಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಈ ನಿಟ್ಟಿನಲ್ಲಿ ಈಗಾಗಲೇ ಹಲವು ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿದೆ. ಅದರಲ್ಲಿ ಮುಖ್ಯವಾದುದೆಂದರೆ, ಹೊಸತಲೆಮಾರಿನ ಕನ್ನಡಿಗರಿಗೆ, ಅದರಲ್ಲೂ ಮುಖ್ಯವಾಗಿ ವಿದ್ಯಾರ್ಥಿಗಳಿಗೆ, ಕನ್ನಡ ಭಾಷೆಯ ಸಮನ್ವಯದ ನೆಲೆಗಳ ಕುರಿತು ಸರಳವಾಗಿ ತಿಳಿಸಿಕೊಡುವಂಥ ಸುಮಾರು ೧೦೦ ಪುಸ್ತಕಗಳ ಪ್ರಕಟಣೆ. ಈ ಪುಸ್ತಕಗಳನ್ನು ಓದುವವರಿಗೆ ನಮ್ಮ ಭಾಷೆ ಮತ್ತು ಸಂಸ್ಕೃತಿಯ ಮೇಲೆ ಪ್ರೀತಿ ಹುಟ್ಟಬೇಕು. ಅಭಿವೃದ್ಧಿ ಪ್ರಾಧಿಕಾರದ ಸದಸ್ಯರೂ, ಹೊಸ ತಲೆಮಾರಿನ ಪ್ರಖರ ವಿಮರ್ಶಕರೂ ಆಗಿರುವ ಡಾ. ರವಿಕುಮಾರ್ ನೀಹ ಈ ಯೋಜನೆಯ ಸಂಚಾಲಕರು. ಈ ಯೋಜನೆಯ ಸಂಪಾದಕರಾದ ಮತ್ತು ಹಿರಿಯ ಲೇಖಕರಾದ ಶ್ರೀ ಬೊಳುವಾರು ಮಹಮದ್ ಕುಂಞ ಅವರು ಮುಖ್ಯ ಸಂಪಾದಕರು. ಹತ್ತು ಜನ ವಿದ್ವಾಂಸರ ಸಂಪಾದಕೀಯ ತಂಡವು ಯೋಜನೆಯನ್ನು ಕಾರ್ಯಗತಗೊಳಿಸಲು ಶ್ರಮವಹಿಸಿದೆ. ಯೋಜನೆಯಲ್ಲಿ ಹೊಸ ಬರಹಗಾರರಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ.

ಈ ಯೋಜನೆಯ ಭಾಗವಾಗಿ, ಪ್ರಸಾದ್ ರಕ್ಷಿದಿ ಮತ್ತು ಚಲಂ ಹಾಡ್ಲಹಳ್ಳಿಯವರು ಮಲೆನಾಡಿನ ಚೆಲುವನ್ನು ಹಾಸಿ ಹೊದ್ದ ಹಾಸನ ಜಿಲ್ಲೆಯ ಸಾಮರಸ್ಯದ ನೆಲೆಗಳ ಕುರಿತು ಹೊಸದು ಅನ್ನಬಹುದಾದ ಅನೇಕ ಮಾಹಿತಿಗಳನ್ನು ಕಲೆಹಾಕಿ ಸೊಗಸಾಗಿ ಪ್ರಸ್ತುತಪಡಿಸಿದ್ದಾರೆ. ಜಿಲ್ಲೆಯ ಸಾಂಸ್ಕೃತಿಕ ಲೋಕವನ್ನು

ಅನಾವರಣಗೊಳಿಸಿದ್ದಾರೆ.

ಈ ಯೋಜನೆಗೆ ಅನುದಾನ ನೀಡಿದ ಕರ್ನಾಟಕ ಸರಕಾರಕ್ಕೆ, ಪ್ರಾಧಿಕಾರದ ಎಲ್ಲ ಗೌರವಾನ್ವಿತ ಸದಸ್ಯರಿಗೆ, ಸಂಪಾದಕ ಮಂಡಳಿಗೆ, ಲೇಖಕರಿಗೆ ಮತ್ತು ಸಹಕರಿಸಿದ ಎಲ್ಲ ಮಹನೀಯರಿಗೆ ಪ್ರಾಧಿಕಾರ ಕೃತಜ್ಞವಾಗಿದೆ.

ಜೂನ್ ೩೦, ೨೦೨೫

ಪುರುಷೋತ್ತಮ ಬಿಳಿಮಲೆ
ಅಧ್ಯಕ್ಷ,
ಕನ್ನಡ ಅಭಿವೃದ್ಧಿ ಪ್ರಾಧಿಕಾರ.

ಎರಡು ಮಾತು

'ಕರ್ನಾಟಕ ಸಂಸ್ಕೃತಿ'ಯ ಬಹುಮುಖೀ ಪರಂಪರೆ ಮತ್ತು ಅವುಗಳು ಒಟ್ಟಿಗೆ ಬಾಳಿದ ರೀತಿಯನ್ನು ಸರಳವಾಗಿ ವಿದ್ಯಾರ್ಥಿಗಳಿಗೆ ತಿಳಿಸಿ ಹೇಳುವ ಉದ್ದೇಶದಿಂದ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಈ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಇಲ್ಲಿಯ ಬಹುಭಾಷಾ ಪರಿಸರ, ಸೌಹಾರ್ದತೆಗೆ ಹೆಸರಾದ ಪ್ರಸಿದ್ಧ ಸ್ಥಳಗಳು, ಜಾನಪದ, ವಿವಿಧ ಮತಧರ್ಮಗಳ ಅಸ್ತಿತ್ವ, ನಾಡು ಕಟ್ಟಿದ ಧೀಮಂತರು, ಭೌಗೋಳಿಕ ಭಿನ್ನತೆಗಳೇ ಮೊದಲಾದ ವಿಷಯಗಳ ಬಗ್ಗೆ ಪರಿಚಯಾತ್ಮಕವಾಗಿ ಈ ಕೃತಿಗಳನ್ನು ನಾಡಿನ ಹೊಸ ಪೀಳಿಗೆಯ ಚಿಂತಕರು ಬರೆದುಕೊಟ್ಟಿದ್ದಾರೆ. ಮಕ್ಕಳ ಮನಸ್ಸು ಅರಳಬೇಕು ಮತ್ತು ಅವರೆಲ್ಲ ನಮ್ಮ ನಾಡು, ನುಡಿಗಳನ್ನು ಆಳವಾಗಿ ಪ್ರೀತಿಸುವಂತಾಗಬೇಕು. ಕಳೆದು ಹೋಗುತ್ತಿರುವ ಅವರ ಸಾಂಸ್ಕೃತಿಕ ಬೇರುಗಳು ಮತ್ತೆ ಚಿಗುರಿಕೊಳ್ಳಬೇಕು ಎನ್ನುವ ಮಹತ್ವದ ಉದ್ದೇಶ ಈ ಪುಸ್ತಕಗಳ ಮುದ್ರಣದ ಹಿಂದಿದೆ.

ಚಾರಿತ್ರಿಕವಾಗಿ ಕನ್ನಡದ ಮಣ್ಣು ಅನೇಕ ಜನ ಸಮುದಾಯಗಳನ್ನು ತನ್ನೊಳಗೆ ಬರಮಾಡಿಕೊಂಡಿದೆ. ಬೇರೆ

ರಾಜ್ಯಗಳಿಂದ ಅಷ್ಟೇ ಅಲ್ಲ, ಅನ್ಯ ದೇಶಗಳಿಂದಲೂ ಅಸಂಖ್ಯ ಸಮುದಾಯಗಳು ಕರ್ನಾಟಕವನ್ನು ತಮ್ಮ ನೆಲೆಯಾಗಿಸಿಕೊಂಡು ಕನ್ನಡ ಸಂಸ್ಕೃತಿಯ ಭಾಗವಾಗಿ ಬೆಳೆದಿವೆ. ಯಾರನ್ನೂ ತಿರಸ್ಕರಿಸದೇ ಸೌಹಾರ್ದ ಪರಂಪರೆಯನ್ನು ಕಾಪಾಡಿಕೊಂಡು ಬಂದ ಕರ್ನಾಟಕ ಇಂದಿಗೂ ತನ್ನ ಸಾಮರಸ್ಯದ ಅಸ್ಮಿತೆಯನ್ನು ಉಳಿಸಿಕೊಂಡಿದೆ. ಹಾಗಾಗಿ ನಾವು ಬೇರೆಲ್ಲಾ ರಾಜ್ಯಗಳಿಗಿಂತಲೂ ಎಲ್ಲರನ್ನು ಒಳಗೊಳ್ಳುವರಾಗಿದ್ದೇವೆ. ಎಲ್ಲರಿಂದಲೂ ಕಲಿತಿದ್ದೇವೆ. ಈ ಕಾರಣಕ್ಕೆ ಭಾಷಾ ಮತಾಂಧತೆಗೆ ನಮ್ಮಲ್ಲಿ ಹೆಚ್ಚಿನ ಆಸ್ಪದವಿಲ್ಲ.

ಈ ಕೃತಿ ಶೀರ್ಷಿಕೆಗಳನ್ನು ಹೊರತರುವಲ್ಲಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಪುರುಷೋತ್ತಮ ಬಿಳಿಮಲೆ ಅವರ ಆಶಯ ಹಿರಿದು. ಈ ಯೋಜನೆಯಲ್ಲಿ ಒಟ್ಟು ೧೦೦ ಪುಸ್ತಕಗಳು ಪ್ರಕಟವಾಗಬೇಕಿದ್ದು ಅದರಲ್ಲಿ ಮೊದಲ ಹಂತವಾಗಿ ಇದೀಗ ೪೧ ಪುಸ್ತಕಗಳು ಹೊರಬರುತ್ತಿವೆ. ಉಳಿದವು ಎರಡನೇ ಹಂತದಲ್ಲಿ ಪ್ರಕಟವಾಗಲಿವೆ. ಅಧ್ಯಕ್ಷರ ಸಮರ್ಥ ನೇತೃತ್ವದ ಹಿನ್ನೆಲೆಯಲ್ಲಿ ಈ ಅರ್ಥಪೂರ್ಣ ಕೃತಿಗಳನ್ನು ಪ್ರಾಧಿಕಾರ ಹೊರತರಲು ಸಾಧ್ಯವಾಗಿದೆ. ಪ್ರತಿಯೊಂದು ಪುಸ್ತಕವನ್ನು ಅವರೇ ಖುದ್ದಾಗಿ ಪರಿಶೀಲಿಸಿ ಕರಡು ತಿದ್ದಿದ್ದಾರೆ. ಯೋಜನೆಯ ಸಂಪಾದಕರಾದ ಶ್ರೀ ಬೊಳುವಾರು ಮಹಮದ್ ಕುಂಞಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರು ಹಾಗೂ ಯೋಜನೆಯ ಸಂಚಾಲಕರು ಆಗಿರುವ ಡಾ. ರವಿಕುಮಾರ್ ನೀಹ, ಹತ್ತು ಜನ ವಿದ್ವಾಂಸರ ಸಂಪಾದಕೀಯ ತಂಡ ಹಾಗೂ ಎಲ್ಲ ಲೇಖಕರ ಕೊಡುಗೆ ದೊಡ್ಡದಿದೆ. ಅವರೆಲ್ಲರಿಗೆ ನಾನು ಧನ್ಯವಾದಗಳನ್ನು ಸಲ್ಲಿಸ ಬಯಸುತ್ತೇನೆ.

ಜುಲೈ ೦೨, ೨೦೨೫ **ಡಾ. ಸಂತೋಷ ಹಾನಗಲ್ಲ**

ಕಾರ್ಯದರ್ಶಿ

ಸಂಪಾದಕರ ಮಾತು

ಈ ಬರವಣಿಗೆಯ ಹಿಂದಿರುವ ನನ್ನಾಸೆ ಬಹಳ ಸಣ್ಣದು. ಹೋಟೆಲೊಂದರೊಳಗೆ ಪಕ್ಕದ ನಲ್ಲಿಯಲ್ಲಿ ಕೈ ತೊಳೆಯುತ್ತಿದ್ದವರು, ನಮ್ಮ ಉಡುಪಿನ ಮೇಲೆ ಅಕಸ್ಮಾತ್ ನೀರು ಚೆಲ್ಲಿದರೆ, ಅವರು ಅಪರಿಚಿತರಾಗಿದ್ದರೆ ಮುನಿಸಿಕೊಳ್ಳುತ್ತೇವೆ. ಪರಿಚಿತರಾಗಿದ್ದರೆ 'ಪರವಾಗಿಲ್ಲ ಬಿಡಿ' ಎಂದು ನಕ್ಕು ಸುಮ್ಮನಾಗುತ್ತೇವೆ. ಕನ್ನಡದ ಓದುಗರಾದ ನಾವೆಲ್ಲ ಪರಸ್ಪರ ಓದಿನ ಮೂಲಕವಾದರೂ ಪರಿಚಿತರಾದರೆ, ನಮ್ಮೆಲ್ಲರ ಸಣ್ಣ ಪುಟ್ಟ ದೋಷಗಳಾದರೂ ಮನ್ನಿಸಲ್ಪಡಬಹುದೇನೋ ಎಂಬುದು ನನ್ನ ಬಹುಕಾಲದ ಆಸೆ. ನನ್ನ ಈ ಆಸೆಗೆ ಪೂರಕವಾಗಿರುವಂತಹ, ಸುಮಾರು ನೂರರಷ್ಟು ಕನ್ನಡ ಪುಸ್ತಕಗಳನ್ನು ಸಂಪಾದಿಸಿ ಪ್ರಕಟಿಸುವ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಪುರುಷೋತ್ತಮ ಬಿಳಿಮಲೆಯವರು, ತಮ್ಮ ಸಾಹಸದಲ್ಲಿ ಪಾಲುಗೊಳ್ಳಲು ನನಗೂ ಒಂದು ಅವಕಾಶ ಕೊಟ್ಟಿದ್ದರು. ಅವರಿಗೆ ನನ್ನ ಎದೆಯಾಳದ ಕೃತಜ್ಞತೆಗಳು ಮೊತ್ತ ಮೊದಲು ಸಲ್ಲುತ್ತವೆ.

ಭೂಮಿಯ ಮೇಲೆ ಬದುಕುತ್ತಿರುವ ಎಲ್ಲ ಪಂಗಡಗಳ ಮುಸ್ಲಿಮರೂ ಪ್ರಶ್ನಾತೀತವಾಗಿ ಅಂತ್ಯಪ್ರವಾದಿಯೆಂದು ನಂಬುವ

ಮುಹಮ್ಮದರ ಬದುಕಿನ ಬಗ್ಗೆ, ಇತಿಹಾಸದಲ್ಲಿ ದಾಖಲೆಗೊಂಡಿರುವ ಮಾಹಿತಿಗಳನ್ನು ಬಳಸಿಕೊಂಡು ಕನ್ನಡದಲ್ಲಿ ರೂಪಿಸಲಾದ ಮೊತ್ತ ಮೊದಲ ಐತಿಹಾಸಿಕ ಕಾದಂಬರಿ 'ಓದಿರಿ' ರಚಿಸುವ ದಿನಗಳಲ್ಲಿ (೨೦೧೫), ಸುಮಾರು ಒಂದು ತಿಂಗಳ ಕಾಲ ಯೋಚಿಸಿ ಆರಿಸಿದ ಹಿರಿಕಿರಿಯ ಕನ್ನಡ ಸಾಹಿತಿಗಳು, ಸಂಗೀತ, ನಾಟಕ, ಚಲನಚಿತ್ರ ಕಲಾವಿದರು ಹಾಗೂ ಓದುಗ ಮಿತ್ರರನ್ನು ತಮಾಷೆಯಾಗಿ ಮಾತನಾಡಿಸುತ್ತಾ, ನಾಲ್ಕೈದು ಪ್ರಶ್ನೆಗಳನ್ನು ಕೇಳಿದ್ದೆ.

ಬ್ರಹ್ಮನಿಗೆ ಮುಖಗಳೆಷ್ಟು?

ಶಿವನಿಗೆ ಕಣ್ಣುಗಳೆಷ್ಟು?

ದಶರಥನಿಗೆ ಮಕ್ಕಳೆಷ್ಟು?

ಶ್ರೀರಾಮನ ಹೆಂಡತಿಯ ಹೆಸರೇನು?

ದೇವದೂತ ಯೇಸು ತಾಯಿಯ ಹೆಸರೇನು?

ಪ್ರವಾದಿ ಮುಹಮ್ಮದ್‌ನ ತಂದೆಯ ಹೆಸರೇನು?

ಹಲವರು ತಟ್ಟನೆ, ಕೆಲವರು ಗಲಿಬಿಲಿಯಿಂದ, ಒಟ್ಟಿನಲ್ಲಿ ಎಲ್ಲರೂ ಮೊದಲ ಐದು ಪ್ರಶ್ನೆಗಳಿಗೆ ನೂರಕ್ಕೆ ನೂರು ಸರಿಯಾಗಿ ಉತ್ತರಿಸಿದ್ದರು. ಕೊನೆಯ ಪ್ರಶ್ನೆಗೆ ಮಾತ್ರ, ಅವರೆಲ್ಲರೂ ಉತ್ತರಿಸಿದ್ದು ಒಂದೇ ಬಗೆಯಲ್ಲಿ. 'ಅದೂ.. ಅದೂ. ಹೆ..., ಹ್ಞೇ.. ಗೊತ್ತಿಲ್ಲ.' ಪಟ್ಟುಬಿಡದ ನಾನು 'ಯಾಕೆ ಸ್ವಾಮೀ ಗೊತ್ತಿಲ್ಲ?' ಎಂದು ಮರುಪ್ರಶ್ನಿಸಿದರೆ, ಗಲಿಬಿಲಿಗೊಂಡು ಎಲ್ಲರೂ ಉತ್ತರಿಸಿದ್ದು, 'ಯಾಕೆಂದರೇ...., ಯಾಕೆಂದರೇ..., ಯಾಕೋ.., ಗೊತ್ತಿಲ್ಲ.' ಬ್ರಹ್ಮನ ತಲೆ, ಶಿವನ ಕಣ್ಣು, ದಶರಥನ ಕುಟುಂಬ, ಶ್ರೀರಾಮನ ದಾಂಪತ್ಯಗಳ ಜೊತೆಗೆ ಕ್ರೈಸ್ತ ಪ್ರವಾದಿಯ ತಾಯಿಯ ಹೆಸರನ್ನೂ ಸ್ವಲ್ಪ ತಡವರಿಸಿದರೂ ನೆನಪಿಸಿಕೊಂಡು ಹೇಳಬಲ್ಲ ಕನ್ನಡದ

ಓದುಗರಿಗೆ, ಮುಸ್ಲಿಮ್ ಪ್ರವಾದಿಯ ತಂದೆಯ ಹೆಸರು ಯಾಕೆ ಗೊತ್ತಿರುವುದಿಲ್ಲ? ಆದರೂ, ಯಾವುದನ್ನೂ ಓದಿರದವರಿಗೂ ಮುಸ್ಲಿಮರೆಂದ ಕೂಡಲೇ ಭಯೋತ್ಪಾದನೆ, ಲವ್ ಜಿಹಾದ್, ಬುರ್ಖಾ, ನಾಲ್ಕು ಮದುವೆ, ನಲವತ್ತು ಮಕ್ಕಳು ಇತ್ಯಾದಿಗಳೆಲ್ಲ ಯಾಕೆ ನೆನಪಾಗುತ್ತವೇ?

ಕಾರಣಗಳು ಇರಲೇಬೇಕಲ್ಲವೇ? ಖಂಡಿತಾ ಇವೆ.

ದಕ್ಷಿಣ ಕನ್ನಡದಲ್ಲಿ ಹುಟ್ಟಿ ಬೆಳೆದ ನಮಗೆ, ಹರಿ-ಹರ-ಬ್ರಹ್ಮಾದಿಗಳೆಲ್ಲರ ನಿಕಟ ಪರಿಚಯವಿರುತ್ತದೆ. ಈ ಎಲ್ಲ ದೇವಾನುದೇವತೆಗಳು ಯಾವುದೇ ಹೊತ್ತಿನಲ್ಲಿ, ಯಾವುದೇ ಜಾಗದಲ್ಲಿ, ಯಾವುದೇ ವೇಷಗಳಲ್ಲಿ ಅವತರಿಸಿದರೂ ತಟ್ಟನೆ ಗುರುತಿಸಬಲ್ಲವರು ನಾವು. ಶ್ರೀಕೃಷ್ಣನ ಚಕ್ರ, ಇಂದ್ರನ ವಜ್ರಾಯುಧ, ಅರ್ಜುನನ ಗಾಂಢೀವ, ಹನುಮಂತನ ಬಾಲ, ಪರಶುರಾಮನ ಕೊಡಲಿ ಇತ್ಯಾದಿಗಳನ್ನೆಲ್ಲ, ಚೌಕಿಗಳಲ್ಲಿ ತಟ್ಟಿ ಮುಟ್ಟಿ ನೋಡಿದವರು ನಾವು. ಶ್ರೀರಾಮ, ಶ್ರೀಕೃಷ್ಣ, ಇಂದ್ರ-ಚಂದ್ರರ ನಡುವಿನ ಎಲ್ಲ ಕತೆಗಳೂ ನಮಗೆ ಗೊತ್ತಿವೆ. ಬಕಾಸುರ, ಕುಂಭಕರ್ಣ, ರಾಮಬಾಣ, ನಳಪಾಕ, ಇಚ್ಚಾಮರಣ, ತೊಟ್ಟ ಬಾಣವನ್ನು ತೊಡದಿರುವುದು, ನಿನ್ನ ರಾಮಾಯಣ ಬೇಡ, ಮತ್ತೊಂದು ಕುರುಕ್ಷೇತ್ರವಾದೀತು ಇತ್ಯಾದಿ ಬಗೆಬಗೆಯ ಸಂಕೇತ-ರೂಪಕ-ನುಡಿಗಟ್ಟುಗಳು, ನಮ್ಮನ್ನೆಂದೂ ಅರ್ಥವಾಗದ ಯಕ್ಷಪಶ್ನೆಗಳಾಗಿ ಕಾಡಿದ್ದಿಲ್ಲ.

ಈ ಬಗೆಯ ಬ್ರಹ್ಮಸೂಕ್ತಗಳ ಪರಿಚಯವಿಲ್ಲದಿದ್ದರೆ ತರಗತಿಗಳಲ್ಲಿ ಅಥವಾ ಸಭಾ ಕಾರ್ಯಕ್ರಮಗಳಲ್ಲಿ ಕಿವಿಗೆ ಬೀಳುವ ಪಾಠ-ಪ್ರವಚನಗಳನ್ನು ಗ್ರಹಿಸಲಸಾಧ್ಯ ಎಂಬ ಅಂತಿಮ ಸತ್ಯವನ್ನರಿತು, ಎಳೆಯಲಾಗಿದ್ದ ಎಲ್ಲ ಲಕ್ಷ್ಮಣ ರೇಖೆಗಳನ್ನೂ ಪುಷ್ಪಕ ವಿಮಾನವೇರಿ ದಾಟಿದ್ದ ಜಾಣರು ನಾವು. ಪೌರಾಣಿಕ

ಹಾಗೂ ಐತಿಹಾಸಿಕ ಘಟನೆಗಳೆಲ್ಲ ಚಿತ್ರ–ರೂಪಕಗಳಾಗಿ ಪ್ರದರ್ಶನಗೊಂಡಿರುವ ಹಿಂದೂ ಮಂದಿರಗಳಲ್ಲಿ, ಕ್ರೈಸ್ತರ ಆರಾಧನಾಲಯಗಳಲ್ಲಿ, ಅಜಂತಾ, ಎಲ್ಲೋರಾ, ಖಜುರಾಹೋ, ಬೇಲೂರು ಹಳೆಬೀಡುಗಳಂತಹ ಪ್ರೇಕ್ಷಣೀಯ ಸ್ಥಳಗಳಲ್ಲಿ, ಚಿತ್ರ, ಫೋಟೋ ಗ್ಯಾಲರಿಗಳಲ್ಲಿ ದೇವಾಸುರ ಸುಂದರ–ಸುಂದರಿಯರನ್ನು ಕಣ್ಣು ತುಂಬಿಸಿಕೊಂಡಿದ್ದವರು ನಾವು. ಭಕ್ತಿ ಪ್ರಧಾನ ಚಲನಚಿತ್ರಗಳಲ್ಲಿ ದೇವ ದೇವತೆಗಳು ಪ್ರತ್ಯಕ್ಷರಾಗುವ ವಿಸ್ಮಯವನ್ನೂ, ವ್ಯಾಪಾರೀ ಸಿನಿಮಾಗಳಲ್ಲಿ ಶತಃದಡ್ಡರಂತೆ ವರ್ತಿಸುವ ತಮಾಷೆಗಳನ್ನೂ ಕಂಡು ನಕ್ಕಿದ್ದವರು ನಾವು.

ಕಾರಣಗಳು ಯಾವುದೇ ಇರಲಿ, ಪ್ರವಾದಿ ಮುಹಮ್ಮದರಿಗಿಂತ ಮೊದಲು ಬಂದಿದ್ದರು ಎಂದು ಮುಸ್ಲಿಮರೂ ವಿಶ್ವಾಸವಿರಿಸುವ ಪ್ರವಾದಿ ಯೇಸುವಿನ ಚಿತ್ರಗಳನ್ನು ಕಾಣುತ್ತಿರುವ ಮುಸ್ಲಿಮರಿಗೆ, ತಮ್ಮ ಪುರಾತನರ ರೂಪಗಳನ್ನು ಚಿತ್ರಿಸುವುದು ಇಂದಿಗೂ ನಿಷಿದ್ಧವಾಗಿದೆ. ಮೊನ್ನೆ ಮೊನ್ನೆ ಮನೆ–ಮನೆಗಳಲ್ಲಿ ಟೀವಿ ಬೆಳಗುವವರೆಗೆ ಸಿನಿಮಾ ನೋಡುವುದೂ, ಬೀಡಿ ಕಾರ್ಮಿಕರಿಗೆ ಬೋನಸ್ ಪ್ರಕಟವಾಗುವವರೆಗೆ, ಫೋಟೋ ತೆಗೆಸಿಕೊಳ್ಳುವುದೂ ಹರಾಮ್ ಆಗಿದ್ದದ್ದು ಚಾರಿತ್ರಿಕ ಸತ್ಯಗಳು. ಹಾಗಿಲ್ಲದಿರುತ್ತಿದ್ದರೆ, ಇದೇ ಸಂಕಲನದಲ್ಲಿ ಕಾಣಿಸಿಕೊಂಡಿರುವ ಹತ್ತಾರು ಹಿಂದೂ ದೇವಾನುದೇವತೆಗಳಿಗೆ ಬಣ್ಣ ತುಂಬಿದ ರವಿವರ್ಮನಂತೆ, ಕ್ರೈಸ್ತ ಕತೆಗಳಿಗೆ ಜೀವಕೊಟ್ಟ ಮೈಕಲ್ ಏಂಜೆಲೋನಂತೆ, ಇಸ್ಲಾಮ್ ಧರ್ಮದಲ್ಲೂ ಚಿತ್ರಕಲಾವಿದರು ಜನಿಸುತ್ತಿದ್ದರೇನೋ? ತಿಂತಿಣಿ ಮೌನೇಶ, ಸಾವಳಗಿ ಶಿವಲಿಂಗೇಶ್ವರ, ಕೊಡೇಕಲ್ ಬಸವಣ್ಣ, ಕಾರ್ಕಳದ ಸಾಂತ್ ಮಾರಿ, ಉಡುಪಿಯ ಹಾಜಿ ಅಬ್ದುಲ್ಲಾ, ದಕ್ಷಿಣ ಕನ್ನಡದ ಮೂಲ್ಕಿಯ ಬಪ್ಪಬ್ಯಾರಿ, ಕಲಬುರಗಿಯ ಖ್ವಾಜಾ ಬಂದೇ ನವಾಜ್, ಶಿರಹಟ್ಟಿಯ ಫಕೀರೇಶ್ವರ, ಇಲಕಲ್ಲ ಮಠ,

ಇಂಚಗೇರಿ ಮಠ, ಮಹಮೂದ್ ಗವಾನ್..., ಹೀಗೆ ನೂರಾರು ಸೂಫಿಗಳ ಬೆನ್ನಿಗೆ ಕಟ್ಟಿಕೊಂಡಿರುವ ಕತೆಗಳಿಗೆ ಹೊಸಹೊಸ ರೆಕ್ಕೆಪುಕ್ಕಗಳು ಜೋತು ಬೀಳುತ್ತಿದ್ದವೇನೋ..?

ಯಾವುದೇ ಒಂದು ಧರ್ಮವನ್ನು ಅಥವಾ ದಂತಕತೆಯನ್ನು ಸಮರ್ಥಿಸುವ ಅಥವಾ ಅಲ್ಲಗಳೆಯುವ ಮೊದಲು, ಕನಿಷ್ಠ ಒಮ್ಮೆಯಾದರೂ ಓದಿಕೊಳ್ಳುವುದು ಒಳಿತು ಎಂಬುದು ನನ್ನ ಹಳೆಯ ನಂಬಿಕೆ. ಹೀಗೆ ಓದಿಕೊಂಡು, ನಾವೆಲ್ಲರೂ ಪರಸ್ಪರ ಪರಿಚಿತರಾದರೆ, ನಮ್ಮೆಲ್ಲರ ಸಣ್ಣ ಪುಟ್ಟ ದೋಷಗಳು ಅಲ್ಪಸ್ವಲ್ಪವಾದರೂ ಮನ್ನಿಸಲ್ಪಡಬಹುದೇನೋ ಎಂಬುದು ನನ್ನಾಸೆ. ನಮ್ಮ ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಬಹುಮಾನ್ಯ ಶ್ರೀ ಸಿದ್ಧರಾಮಯ್ಯನವರು ಉತ್ಸಾಹದಿಂದ ಆರಂಭಿಸಿದ್ದ ಪ್ರಸಕ್ತ 'ಕನ್ನಡ ಸಾಮರಸ್ಯದ ನೆಲೆಗಳು' ಯೋಜನೆಯಲ್ಲಿ ಪ್ರಕಟವಾಗುತ್ತಿರುವ ಈ ಎಲ್ಲ ಕೃತಿಗಳ ಮೂಲ ಆಶಯವೂ ಇದುವೆ.

ಈ ಯೋಜನೆಯನ್ನು ಅರ್ಥಪೂರ್ಣಗೊಳಿಸಲು ವಿವಿಧ ಕ್ಷೇತ್ರದ ವಿದ್ವಾಂಸರುಗಳನ್ನು ಸಂಪರ್ಕಿಸಿ, ಲೇಖನಗಳನ್ನು ಬರೆಯಿಸಿ ಜೋಡಿಸಿದ್ದ ಎಲ್ಲ ಸಂಪಾದಕರುಗಳಿಗೆ, ಲೇಖನಗಳನ್ನು ಸಿದ್ಧಪಡಿಸಿ ಒದಗಿಸಿದ ಎಲ್ಲ ವಿದ್ವಾಂಸರುಗಳಿಗೆ ಹಾಗೂ ತಮ್ಮ ಜೊತೆಗೆ ಕೆಲಸ ಮಾಡಲು ನನಗೂ ಒಂದು ಅವಕಾಶ ನೀಡಿದ ತಮಗೆಲ್ಲ ನಾನು ಎದೆತುಂಬಿ ವಂದಿಸುತ್ತಿರುವೆ.

ಬೊಳುವಾರು ಮಹಮದ್ ಕುಂಞಿ

ಸಂಪಾದಕರು

ಯೋಜನಾ ಸಂಚಾಲಕರ ಮಾತು

ಕನ್ನಡ ನಮ್ಮೆಲ್ಲರ ಬದುಕು-ಭಾವುಣಿಕೆ. ವಿಭಿನ್ನ ಸನ್ನಿವೇಶಗಳು, ರಾಜಕೀಯ ವಿಪ್ಲವಗಳು, ಆಡಳಿತ/ರಾಜರು/ ರಾಜಮನೆತನಗಳು ಬದಲಾಗಿದ್ದರೂ ಅವುಗಳನ್ನು ನಿರಂತರವಾಗಿ ಎದುರಿಸುತ್ತಲೇ ಕನ್ನಡ 'ಕೂಡು'ಗುಣವನ್ನು ಸಂಗೋಪನೆ ಮಾಡಿಕೊಂಡು ಬರುತ್ತಿದೆ.

ಈಗ ದೇಶ, ಆಡಳಿತ, ಭಾಷೆಗಳನ್ನು 'ಏಕ'ವಾಗಿಸುತ್ತಿರುವುದಕ್ಕೆ ಪ್ರತಿರೋಧಿಯಾಗಿ ಕೂಡುಗುಣದ ಕನ್ನಡ ಲಾಗಾಯ್ತಿನಿಂದಲೇ 'ಕನ್ನಡಂಗಳ್' ಆಗಿ ಮೂಡಿದೆ. ಇದನ್ನು ಭಾಷಾ ವೈವಿಧ್ಯಕ್ಕಷ್ಟೇ ಹೇಳಿದ್ದಲ್ಲ. 'ಏಕ'ವನ್ನು ಒಡೆದು 'ಅನೇಕ'ತ್ವದ ಕನ್ನಡ ಪ್ರಜ್ಞೆಯನ್ನು ಧ್ಯಾನಿಸುವಂತಹದ್ದು.

ಕನ್ನಡ ವಿವಿಧ ಸಮುದಾಯಗಳ ಬದುಕು-ಸಂಸ್ಕೃತಿ-ಆವರ್ತನಗಳು, ಆಚರಣೆ-ಹಬ್ಬ, ಪರುಸೆ, ಹುಟ್ಟು-ಸಾವು, ಧಾರ್ಮಿಕ-ಸಾಮಾಜಿಕ ಸಂಕಥನಗಳು, ಆಡಳಿತ-ರಾಜಕೀಯ ವೈಶಿಷ್ಟ್ಯಗಳಲ್ಲೆಲ್ಲಾ ಸಾಮರಸ್ಯಗಳನ್ನು ಧರಿಸಿ ನಿಂತಿದೆ. ಇದನ್ನು ಕೇವಲ ಹಿಂದೂ-ಮುಸ್ಲಿಮರ ಭಾಗವಾಗಿಯಷ್ಟೇ ನೋಡುವ

ಸಾಂಪ್ರದಾಯಿಕ ಕಣ್ಣಿಗಿದು ಕಾಣದು. ಜನಸಮುದಾಯ ಮತ್ತವರ ಬದುಕಿನೊಳಗೆ ಕಾಪಿಟ್ಟುಕೊಂಡು ಬಂದಿರುವ 'ಕೂಡು'ಗುಣವನ್ನು ಕಾಣಿಸುವುದೇ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಈ ಯೋಜನೆಯ ಉದ್ದೇಶ. ಮುಂದುವರಿದು ಸಮುದಾಯಗಳೊಳಗಿನ ಕೂಡುಕೊಳ್ಳುವಿಕೆಯನ್ನು ಈ ಕಾಲದ್ದಾಗಿಸುವುದು; ಕನ್ನಡದ ಸತುವನ್ನು, ಕನ್ನಡ ಪ್ರಜ್ಞೆಯನ್ನು ಯುವತಲೆಮಾರಿಗೂ ವಿಸ್ತರಿಸುವುದು.

ಈ ಯೋಜನೆಯ ಕೃತಿಗಳಲ್ಲಿ ಕನ್ನಡವನ್ನು ಭಾಷೆಯಾಗಿಯಷ್ಟೇ ನೋಡದೆ ಅದನ್ನು ಬದುಕಾಗಿ, ಸಂಭ್ರಮವಾಗಿ, ಆಚರಣೆ, ಆಲೋಚನೆಯಾಗಿ ಸಾಗಿಬಂದಿರುವ ಚಾರಿತ್ರಿಕ, ಸಾಂಸ್ಕೃತಿಕ, ಭಾಷಿಕ ನೋಟಕ್ರಮವಿದೆ. ಇಡೀ ಕರ್ನಾಟಕದ ಬಹುಮುಖ್ಯ 'ಸಾಂಸ್ಕೃತಿಕ ಸಂಗತಿ'ಗಳು, ವ್ಯಕ್ತಿಗಳು, ಜಾತ್ರೆ-ಜಾನುವಾರುಗಳೆಲ್ಲ ಇಲ್ಲಿ ಸಾಮರಸ್ಯ ರೂಪವನ್ನು ಪಡೆದಿವೆ. ಈ ಯೋಜನೆ ವಿದ್ಯಾರ್ಥಿಗಳನ್ನು ಗಮನದಲ್ಲಿರಿಸಿಕೊಂಡು ರಚನೆಯಾಗಿದ್ದರೂ ಕೆಲವು ಗಂಭೀರ ಶಿಸ್ತಿಗೂ ಒಳಗಾಗಿವೆ. ಯುವಜನರು ಕನ್ನಡ ಜಗತ್ತಿಗೆ ಗಂಭೀರವಾಗಿ ತೆರೆದುಕೊಳ್ಳಲಿ ಎಂಬಾಶಯ ನಮ್ಮದು.

ಯೋಜನೆಯನ್ನು ಆಗುಮಾಡಿದ ಅಧ್ಯಕ್ಷರಾದ ಪ್ರೊ. ಪುರುಷೋತ್ತಮ ಬಿಳಿಮಲೆಯವರಿಗೆ, ಕಾರ್ಯದರ್ಶಿಗಳಾದ ಡಾ. ಸಂತೋಷ ಹಾನಗಲ್ಲ ಅವರಿಗೆ, ನನ್ನೆಲ್ಲಾ ಸದಸ್ಯಮಿತ್ರರಿಗೆ, ಬೋಳುವಾರರಿಗೆ, ಸಂಪಾದಕ ಮಂಡಳಿಗೆ, ಲೇಖಕರಿಗೆ, ನಮ್ಮ ಸಿಬ್ಬಂದಿಯವರಿಗೆ ವಂದನೆಗಳು.

ಡಾ. ರವಿಕುಮಾರ್ ನೀಹ

ಯೋಜನಾ ಸಂಚಾಲಕರು

ಹಾಸನ ಜಿಲ್ಲೆಯ ಸಾಮರಸ್ಯದ ನೆಲೆಗಳು

ಪ್ರವೇಶ

ಒಂದಾಗಿ ಬಾಳುವುದು ಮನುಷ್ಯನ ಮೂಲಗುಣ. ಒಂಟಿಯಾಗಿ ಬದುಕಲಾರದ ಪ್ರಾಣಿಗಳಲ್ಲಿ, ಅಂದರೆ ಗುಂಪು ಗುಂಪಾಗಿ ಬದುಕುವ ಅಭ್ಯಾಸ ಹೊಂದಿರುವ ಪ್ರಾಣಿಗಳ ಪಂಗಡಕ್ಕೆ ಮನುಷ್ಯರು ಸೇರುತ್ತಾರೆ ಎಂದು ಸಮಾಜಶಾಸ್ತ್ರ ಹೇಳುತ್ತದೆ. ಮಾನವ ಸಂಘ ಜೀವಿ ಎಂದು ನಾವು ಕಲಿತಿದ್ದೇವೆ. ಅದು ನಿಜವೇ ಎಂದು ಗಮನಿಸಿದಾಗ ಆ ವಿಚಾರ ಅಕ್ಷರಶಃ ಸತ್ಯವೆಂದು ಅರಿವಾಗುತ್ತದೆ. ಕುಟುಂಬ ಎಂಬ ಪ್ರಾಥಮಿಕ ಸಂಸ್ಥೆಯನ್ನು ಕಟ್ಟಿದ ಮನುಷ್ಯ ಊರುಗಳೆಂಬ ವ್ಯವಸ್ಥೆಯನ್ನು ರೂಪಿಸಿಕೊಂಡ. ಇದೇ ಮುಂದುವರಿದು ರಾಜ್ಯ, ದೇಶ ಮತ್ತು ಪ್ರಪಂಚ ಎಂಬ ಬೃಹತ್ ಸಂಘಗಳಲ್ಲಿ ತನ್ನನ್ನು ಗುರುತಿಸಿಕೊಂಡಿದ್ದಾನೆ. ನಾವು ಪ್ರಪಂಚದ ಯಾವ ಪ್ರದೇಶಕ್ಕೆ ಹೋದರೂ ಮನುಷ್ಯ ಇದೇ ರೀತಿಯಲ್ಲಿ ಬದುಕುವುದನ್ನು ಕಾಣುತ್ತೇವೆ.

ಹೀಗೆ ಬದುಕುವುದಕ್ಕೆ ಕೆಲವು ಮೂಲ ಗುಣಗಳು ಇರಬೇಕಾಗುತ್ತವೆ. ಅವುಗಳ ಪೈಕಿ ಕಂಡುಬರುವ ಮೊದಲನೇ ಅಂಶವೇ 'ಸಾಮರಸ್ಯ'.

ಸಾಮರಸ್ಯ ಎಂದರೆ ಸಮನಾಗಿ ಬದುಕುವುದು. ಸೌಹಾರ್ದಯುತವಾಗಿ ಬದುಕುವುದು. ಸಾಮರಸ್ಯ ಹಾಗೂ

ಸೌಹಾರ್ದಗಳ ಮೂಲಗುಣ ಪರಸ್ಪರ ಗೌರವ ಕೊಡುವುದು. ಒಬ್ಬರನ್ನೊಬ್ಬರು ಗೌರವಿಸದ ಹೊರತು ಸಾಮರಸ್ಯ ಸಾಧ್ಯವಾಗುವುದಿಲ್ಲ. ನಾಗರಿಕತೆ ಪ್ರಾರಂಭವಾದ ನಂತರ ಮನುಷ್ಯ ಈ ರೀತಿ ಬದುಕಲು ಪ್ರಯತ್ನ ಮಾಡಿದ್ದಾನೆ. ತನ್ನೊಂದಿಗೆ ಬದುಕುವ ಸಹಜೀವಿಗಳೊಂದಿಗೆ ಗೌರವಯುತವಾಗಿಯೇ ನಡೆದುಕೊಂಡಿದ್ದಾನೆ. ಪರಸ್ಪರ ಗೌರವ ಕೊಡುವುದು ಮನುಷ್ಯನ ಜೀವನ ಕ್ರಮಕ್ಕೆ ಅತ್ಯಂತ ಅಗತ್ಯ ಕ್ರಮವೂ ಹೌದು.

ಇದಕ್ಕೆಲ್ಲಾ ನಮಗೆ ಆಯಾ ಕಾಲಘಟ್ಟದಲ್ಲಿ ಸಾಕ್ಷಿಗಳು ಸಿಗುತ್ತವೆ. ಅಷ್ಟರ ಮಟ್ಟಿಗೆ ಸಾಮರಸ್ಯ ಎನ್ನುವುದು ಮನುಷ್ಯನ ಸ್ವಭಾವವೂ ಆಗಿದೆ.

ಅದಕ್ಕೆ ಪೂರಕವಾದ ಸಂಗತಿಗಳನ್ನು ಈ ಕಾಲಘಟ್ಟದಲ್ಲಿ ನಾವು ನೋಡುವ ಪ್ರಯತ್ನ ಮಾಡುತ್ತಿದ್ದೇವೆ. ಈ ಅಗತ್ಯ ಯಾಕೆಂದು ಬಿಡಿಸಿ ಹೇಳಬೇಕಾಗಿಲ್ಲ. ಇಡೀ ಊರು ಗೌರವದಿಂದ ಬದುಕು ನಡೆಸುವಾಗ ಒಂದೆರಡು ಜನ ಅಗೌರವದಿಂದ ಅಥವಾ ಸೌಹಾರ್ದವನ್ನು ಬಿಟ್ಟು ನಡೆದದ್ದೇ ದೊಡ್ಡ ಮಾತಾಗುತ್ತದೆ. ಅದನ್ನೇ ಮುಂದೆ ಇತಿಹಾಸವಾಗಿ ಓದುತ್ತೇವೆ. ಸಂಘರ್ಷಗಳ ಬಗ್ಗೆ ಓದಿದ್ದೇವೆ, ಯುದ್ಧಗಳ ಬಗ್ಗೆ ಓದಿದ್ದೇವೆ. ಕುಟುಂಬ ಎಂಬ ಸಣ್ಣ ಸಂಸ್ಥೆಯ ಒಡಕಿನ ಬಗ್ಗೆ ಓದಿದ್ದೇವೆ.

ಸಮಾಜ ಶಾಸ್ತ್ರೀಯ ಅಧ್ಯಯನದಲ್ಲಿ ಇರಲೇಬೇಕಾದ ಒಂದು ಕ್ಷೇತ್ರದ ಬಗ್ಗೆ ಪ್ರಸ್ತಾಪ ಮಾಡಲಾಗುತ್ತದೆ. ಸಮಾಜದಲ್ಲಿ ಅಂದರೆ ಮನುಷ್ಯ ಬದುಕುವ ಒಂದು ವಲಯದಲ್ಲಿ ಒಂದು 'ಕಪ್ಪು ವಲಯ' ಇರುತ್ತದೆ. ಅದು ಇರಬೇಕು ಎಂದು ಸಮಾಜಶಾಸ್ತ್ರ ಹೇಳುತ್ತದೆ.

ಅದು ಮನುಷ್ಯನ ಒಳಗಿರುವ ಒಂದು ಸಂಗತಿಯನ್ನು ಪರಿಚಯಿಸುತ್ತದೆ. ಸಭ್ಯ ಮನುಷ್ಯ ಕೂಡಾ ಒಂದು ಸಣ್ಣ ಸುಳ್ಳು

ಹೇಳುತ್ತಾನೆ. ಪ್ರಾಮಾಣಿಕ ವ್ಯಕ್ತಿ ಕೂಡಾ ಒಂದು ಸಹಿಸಬಹುದಾದ ತಪ್ಪು ಮಾಡುತ್ತಾನೆ. ಅದೆಲ್ಲಾ ಮನುಷ್ಯನ ಸಹಜ ಗುಣ ಎಂದು ಸಮಾಜ ಶಾಸ್ತ್ರ ಹೇಳುತ್ತದೆ. ಹೀಗೆ ನಾವು ಗುರುತಿಸುವ ಕಪ್ಪು ವಲಯದ್ದು ಸಣ್ಣಜಾಗ. ಅದನ್ನು ಮೀರಿ ಮನುಷ್ಯ ಕಪ್ಪು ವಲಯದಿಂದಾಚೆ ಹೆಚ್ಚು ಬದುಕುತ್ತಾನೆ. ಆ ಬದುಕು ಸಮಾಜವನ್ನು ಚಂದಗೊಳಿಸುತ್ತದೆ.

ದುರಾದೃಷ್ಟವೆಂದರೆ ನಾವು ಕಪ್ಪು ವಲಯದ ಬಗ್ಗೆ ಮಾತಾಡಿದಷ್ಟು ಪರಸ್ಪರ ಗೌರವ ಕೊಡುವ ಸಾಮರಸ್ಯದ ಬಗ್ಗೆ ಮಾತಾಡುವುದಿಲ್ಲ. ಕಪ್ಪು ವಲಯ ಎಂದರೆ 'ಡಾರ್ಕ್ ಸ್ಪೇಸಿ'ನ ತಪ್ಪು ನಡೆಗಳ ಬಗ್ಗೆ ಹೆಚ್ಚು ಮಾತಾಡುತ್ತೇವೆ. ಎಷ್ಟೆಂದರೆ ಮನುಷ್ಯರ ನಡುವೆ ಸಾಮರಸ್ಯವೇ ಇಲ್ಲ ಪರಸ್ಪರ ಗೌರವವೇ ಇಲ್ಲವೆಂದು ತೀರ್ಮಾನಕ್ಕೆ ಬರುವಷ್ಟರ ಮಟ್ಟಿಗೆ ಮಾತನಾಡುತ್ತೇವೆ.

ಅದು ಸಮಾಜದ ಬಗ್ಗೆ ನಾವು ನೀಡುವ ತಪ್ಪು ನಿರೂಪಣೆ. ಆ ನಿರೂಪಣೆಯನ್ನು ಸರಿ ಮಾಡಬೇಕಾದರೆ ನಾವು ಮನುಷ್ಯನ ಮೂಲ ಗುಣವಾದ ಸಾಮರಸ್ಯ, ಸೌಹಾರ್ದ, ಪರಸ್ಪರ ಕೊಡು ಕೊಳ್ಳುವಿಕೆಯ ಗೌರವದ ಬಗ್ಗೆ ಮಾತಾಡಬೇಕಾಗಿದೆ. ಆ ಕಾರಣಕ್ಕೆ ಈ ಬರಹಗಳು, ಪುಸ್ತಕಗಳು ಸಹಕಾರಿಯಾಗಲಿವೆ.

ಹಾಸನ: ಹಾಸನ ಜಿಲ್ಲೆಯು ಕರ್ನಾಟಕ ರಾಜ್ಯದ ೩೧ ಜಿಲ್ಲೆಗಳ ಪೈಕಿ, ಕರ್ನಾಟಕದ ನೈರುತ್ಯ ದಿಕ್ಕಿನಲ್ಲಿರುವ ಒಂದು ಜಿಲ್ಲೆ. ಜಿಲ್ಲೆಯು ಶ್ರೀಮಂತ ಇತಿಹಾಸದಿಂದ ಹಾಗೂ ಸ್ಮರಣೀಯ ಘಟನೆಗಳಿಂದ ಕೂಡಿದೆ. ಶ್ರವಣಬೆಳಗೊಳ, ಬೇಲೂರು, ಹಳೇಬೀಡಿನಂಥ ಆಕರ್ಷಕ ಮತ್ತು ಇತಿಹಾಸ ಪ್ರಸಿದ್ಧ ಊರುಗಳಿರುವ ಹಾಸನವನ್ನು ಬಹಳ ಕಾಲ ಆಳಿದವರು ಹೊಯ್ಸಳರು. ಹೊಯ್ಸಳರ ರಾಜಧಾನಿಯ ಹೆಸರು ದ್ವಾರಸಮುದ್ರ.

ಅದುವೇ ಇಂದಿನ ಹಳೇಬೀಡು. ಹೊಯ್ಸಳ ಚಕ್ರವರ್ತಿಗಳ ಅಧಿಕಾರಾವಧಿಯಲ್ಲಿ ಈ ಜಿಲ್ಲೆಯು ತನ್ನ ವೈಭವದ ಉತ್ತುಂಗವನ್ನು ತಲುಪಿತ್ತು. ಕಣ್ಮನ ಸೆಳೆಯುವ ಪ್ರಾಕೃತಿಕ ಸೌಂದರ್ಯಕ್ಕೆ ಹೆಸರುವಾಸಿಯಾದ ಈ ಜಿಲ್ಲೆಯು ಬೇಲೂರು ಮತ್ತು ಹಳೇಬೀಡಿನಲ್ಲಿರುವ ಹೊಯ್ಸಳ ಶೈಲಿಯ ವಾಸ್ತು ಹಾಗೂ ಶಿಲ್ಪಕಲೆಯಿಂದಾಗಿ ವಿಶ್ವ ಪ್ರಸಿದ್ಧಿ ಪಡೆದಿದೆ. ಜೈನ ಸ್ಮಾರಕಗಳಿಂದ ಕೂಡಿರುವ ಚನ್ನರಾಯಪಟ್ಟಣ ತಾಲ್ಲೂಕಿನ ಶ್ರವಣಬೆಳಗೊಳವು ಜೈನರ ಸುಪ್ರಸಿದ್ಧ ಯಾತ್ರಾಸ್ಥಳವಾಗಿದ್ದು ಹಾಸನಕ್ಕೆ ಅನತಿ ದೂರದಲ್ಲಿದೆ.

ಹಾಸನ ಹೆಸರಿನ ಮೂಲ: ಹಾಸನ ಹೆಸರು ಹೇಗೆ ಬಂದಿರಬೇಕೆಂಬುದರ ಬಗ್ಗೆ ಬಹಳ ಚರ್ಚೆಗಳಾಗಿವೆ. ಸ್ಥಳಪುರಾಣದ ಪ್ರಕಾರ "ಹಾಸನ"ವು "ಸಿಂಹಾಸನಪುರ"ದ ಸಂಕ್ಷಿಪ್ತ ಹೆಸರು. ಪಾಂಡವರ ಪೈಕಿ ಅರ್ಜುನನ ಮರಿಮೊಮ್ಮಗನಾದ ಜನಮೇಜಯನ ಹೆಸರಿನೊಂದಿಗೂ ಈ ಊರು ತಳುಕು ಹಾಕಿಕೊಂಡಿದೆ. ಆದರೆ ಬಹಳ ಜನಗಳ ನಂಬಿಕೆಯ ಪ್ರಕಾರ ಇಲ್ಲಿಯ ಅಧಿದೇವತೆಯಾದ ಹಾಸನಮ್ಮ ಅಥವಾ ಹಾಸನಾಂಬೆ ಅಂದರೆ ಕನ್ನಡದಲ್ಲಿ 'ನಗೆಮೊಗದ' (ಹಸನ್ಮುಖಿ) ತಾಯಿ ಅಥವಾ ದೇವತೆಯಿಂದ "ಹಾಸನ" ಎಂಬ ಹೆಸರು ಬಂದಿದೆ. ಹಾಸನಾಂಬೆ ದೇವತೆಯು ಈ ಸ್ಥಳಕ್ಕೆ ಹೇಗೆ ಬಂದಳೆನ್ನುವುದಕ್ಕೆ ಒಂದು ಸಾಂಪ್ರದಾಯಿಕ ಕಥೆ ಇಂತಿದೆ – ಒಮ್ಮೆ ಸಪ್ತ ಮಾತೃಕೆಯರು ವಾರಣಾಸಿ(ಕಾಶಿ)ಯಿಂದ ದಕ್ಷಿಣ ದಿಕ್ಕಿಗೆ ಪ್ರಯಾಣಿಸುತ್ತಿರುವಾಗ, ಈ ಪ್ರದೇಶದ ರಮಣೀಯತೆಗೆ ಮಾರುಹೋಗಿ ಇಲ್ಲೇ ನೆಲೆಸುವ ನಿರ್ಧಾರ ಮಾಡಿದರು. ಆ ಪ್ರಕಾರ, ಸಹೋದರಿಯರಾದ ಸಪ್ತಮಾತೃಕೆಯರಲ್ಲಿ ಮೂವರು ಹಾಸನದಲ್ಲಿ ನೆಲೆಸಿದರು. ಇನ್ನು ಮೂವರು ಹಾಸನ ನಗರದಲ್ಲೇ ಇರುವ ದೇವಿಗೆರೆ(ಕೆರೆ)ಯಲ್ಲಿ

ನೆಲೆಸಿದರು. ಅವರನ್ನು ಹಾಸನಾಂಬಾ ಎಂದು ಕರೆಯಲಾಗುತ್ತದೆ. ಇನ್ನೊಬ್ಬರು ಕೆಂಚಾಂಬಾ ಎಂಬ ಹೆಸರಿನಿಂದ, ಆಲೂರು ತಾಲ್ಲೂಕಿನ ಕೆಂಚಮ್ಮನ ಹೊಸಕೋಟೆ ಎಂಬಲ್ಲಿ ಅರಣ್ಯದಲ್ಲಿ ನೆಲೆಸಿದರು. ಇಷ್ಟಿದ್ದರೂ ಹಾಸನ ಎಂಬ ಹೆಸರು ಹೇಗೆ ಹುಟ್ಟಿಕೊಂಡಿತು ಎಂಬ ಬಗ್ಗೆ ನಮಗೆ ಸರಿಯಾಗಿ ಗೊತ್ತಿಲ್ಲ. ಈ ಜಿಲ್ಲೆಯಲ್ಲಿ ಒಟ್ಟು ೮ ತಾಲ್ಲೂಕುಗಳು, ೩೮ ಹೋಬಳಿಗಳು, ಹಾಗೂ ೨೩೬೯ ಗ್ರಾಮಗಳಿವೆ. ಈ ಜಿಲ್ಲೆಯಲ್ಲಿ ಕಾಫಿ, ಕರಿಮೆಣಸು, ಆಲೂಗೆಡ್ಡೆ, ಭತ್ತ ಮತ್ತು ಕಬ್ಬು ಬೆಳೆಯುತ್ತವೆ. ಹಾಸನ ಜಿಲ್ಲೆಯು ಭಾಗಶಃ ಮಲೆನಾಡು ಹಾಗೂ ಭಾಗಶಃ ಬಯಲುಸೀಮೆಯ ಭಾಗಗಳನ್ನು ಹೊಂದಿದೆ.

ಸಾಮರಸ್ಯದ ಬಾಳು: ಇಂಥ ಸುಂದರ ಜಿಲ್ಲೆಯ ಬಗ್ಗೆ ಮಾತನಾಡಲು ಹೊರಟಾಗ ಸಾಮರಸ್ಯದ ನೂರಾರು ಘಟನೆಗಳು, ಸಂಗತಿಗಳು ಕಾಣುತ್ತವೆ. ಪುರಾತನ ಕಾಲದಿಂದ ಇಂದಿನವರೆಗೆ ಜನಗಳ ನಡುವೆ ಕಾಣ ಸಿಗುವುದು ಮತ್ತು ಮನುಕುಲವನ್ನು ಉಳಿಸಿದ್ದು ಸಾಮರಸ್ಯವೇ ಆಗಿದೆ.

ಅವುಗಳ ನೆಲೆಯನ್ನು ನಾವು ಹಾಸನ ಜಿಲ್ಲೆಯಲ್ಲಿ ಹುಡುಕುತ್ತಾ ಹೋದಂತೆ ಒಂದು ವಿಚಾರ ಗಮನಕ್ಕೆ ಬರುತ್ತದೆ. ಸಾಮರಸ್ಯವನ್ನು ಜಿಲ್ಲೆಯಾದ್ಯಂತ ಹುಡುಕುವ ಅಗತ್ಯ ಇಲ್ಲ. ಅದು ಆಕಾಶದಂತೆ, ಎಲ್ಲೆಡೆ ಕಾಣುವ ಸೂರ್ಯ ಚಂದ್ರರಂತೆ ಎಲ್ಲೆಲ್ಲೂ ಗೋಚರಿಸುತ್ತದೆ.

ಸಾಮರಸ್ಯ ಎಂದಾಗ ನಮಗೆ ಮೊದಲಿಗೆ ನೆನಪಿಗೆ ಬರುವುದು ಮತೀಯ ಸಾಮರಸ್ಯ, ಜಾತಿಗಳ ನಡುವಿನ ಸಾಮರಸ್ಯ ಇಂತಹ ವಿಚಾರಗಳು. ಹೌದು ಸಮಾಜದಲ್ಲಿ ಇವು ಬಹಳ ಮುಖ್ಯವಾದದ್ದೇ. ಆದರೆ ಎಲ್ಲ ಸಾಮರಸ್ಯಗಳ ಒಟ್ಟು ಪರಿಣಾಮ ಸಾಮಾನ್ಯರ ಬದುಕಿನಲ್ಲಿ ಕಾಣಬೇಕು ಇಲ್ಲವಾದಲ್ಲಿ ಯಾವುದೇ ಸಾಮರಸ್ಯ

ಎನ್ನುವುದು ಬರಿಯ ತೋರಿಕೆಯದ್ದಾಗುತ್ತದೆ. ಪ್ರಚಾರದ ವಿಷಯವಾಗುತ್ತದೆ. ಸಾಮಾನ್ಯ ಜನರಿಗೆ ಧರ್ಮ, ಜಾತಿಗಳಿಗಿಂತ ಕಷ್ಟ ಸುಖಗಳಿಗೆ ಒದಗಿ ಬರುವ ಪಕ್ಕದ ಮನೆಯವನೇ ನಿಜವಾದ ನೆಂಟನಾಗಿರುತ್ತಾನೆ. ಆದ್ದರಿಂದ ಸಾಮಾನ್ಯ ಜನರಲ್ಲಿ ಇರುವ ಸ್ನೇಹ ಸೌಹಾರ್ದಗಳೇ ನಿಜವಾದ ಸಾಮಾಜಿಕ ಸಾಮರಸ್ಯದ ಅಳತೆಗೋಲಾಗಿರುತ್ತದೆ. ಆ ಕಾರಣಕ್ಕಾಗಿಯೇ ಅಂತಹ ಕೆಲವು ಸಂಗತಿಗಳನ್ನು ಕೂಡಾ ಇಲ್ಲಿ ಚಿತ್ರಿಸಲಾಗಿದೆ.

ಇಲ್ಲಿನ ಸೌಹಾರ್ದ ಪರಂಪರೆಗೆ ಬಲ ನೀಡಿದ ಇನ್ನೂ ಹಲವು ಸಂಗತಿಗಳಿವೆ.

ಸ್ವಾತಂತ್ರ್ಯ ಹೋರಾಟದಲ್ಲಿ ಹಾಸನ ಜಿಲ್ಲೆಯ ಜನ ದೊಡ್ಡ ರೀತಿಯಲ್ಲಿಯೇ ಭಾಗವಹಿಸಿದ್ದಾರೆ. ಸ್ವಾತಂತ್ರ್ಯಾನಂತರದಲ್ಲಿ ಈ ಜಿಲ್ಲೆಯಲ್ಲಿ ಸಮಾಜವಾದಿ ಸಿದ್ಧಾಂತ ನೆಲೆಯನ್ನು ವಿಸ್ತರಿಸಿಕೊಂಡಿತು. ಎಡಪಂಥೀಯರೂ ನಿರಂತರ ಜನಪರ ಹೋರಾಟಗಳಲ್ಲಿ ತೊಡಗಿಕೊಂಡರು ರೈತ ಹೋರಾಟಗಳಲ್ಲಿ ದಲಿತ ಹೋರಾಟ ಗಳಲ್ಲಿಯೂ ಹಾಸನ ಜಿಲ್ಲೆ ಮುಂಚೂಣಿಯಲ್ಲಿತ್ತು. ಸಾಕ್ಷರತಾ ಆಂದೋಲನ ನಡೆದಾಗಲೂ ಈ ಜಿಲ್ಲೆಯಲ್ಲಿ ಎಡ ಮತ್ತು ದಲಿತ ಹೋರಾಟಗಾರರೇ ಮುಂದಾಳತ್ವ ವಹಿಸಿದ್ದರು. ಇವೆಲ್ಲವೂ ಸೇರಿ ಈ ಜಿಲ್ಲೆಗೆ ಒಂದು ವೈಚಾರಿಕ ನೆಲೆಯನ್ನು ಒದಗಿಸಿವೆ. ಅವುಗಳಲ್ಲಿ ಈ ಜಿಲ್ಲೆಯ ಪತ್ರಿಕೆಗಳಿವೆ. ಇಲ್ಲಿನ ಸಾಹಿತಿಗಳು, ರಂಗಕರ್ಮಿಗಳು, ಕಲಾವಿದರು ಇದ್ದಾರೆ. ಸಾಮಾಜಿಕ ಕಾರ್ಯಕರ್ತರಿದ್ದಾರೆ. ಕೆಲವರು ರಾಜಕಾರಣಿಗಳೂ ಇದ್ದಾರೆ. ಇವೆಲ್ಲ ಸಂಗತಿಗಳು ಸೇರಿಯೇ ಹಾಸನ ಜಿಲ್ಲೆಯ ಸಾಮರಸ್ಯದ ಚಿತ್ತಾರ ಮೂಡಿದೆ.

ಈ ನಿಟ್ಟಿನಲ್ಲಿ ಹಲವಾರು ಇತಿಹಾಸದ ಘಟನೆಗಳನ್ನು, ಸಂಸ್ಥೆಗಳನ್ನು, ವ್ಯಕ್ತಿಗಳನ್ನು ಜನ ಸಮೂಹಗಳನ್ನು, ಊರುಗಳನ್ನು

ಉಲ್ಲೇಖಿಸುತ್ತಾ ಹೋಗಬಹುದು. ನಾವು ಎಷ್ಟು ಸಂಗತಿಗಳನ್ನು ಹೇಳಿದರೂ ಮತ್ತಷ್ಟು ಸಂಗತಿಗಳು ಉಳಿದುಕೊಳ್ಳುತ್ತವೆ. ಹಾಗಾಗಿ ಈ ಬರಹಗಳಲ್ಲಿ ಹೇಳಲಾದ ಎಲ್ಲ ವಿಚಾರಗಳು ಪ್ರಾತಿನಿಧಿಕ ವಾದವುಗಳು ಅಷ್ಟೆ. ಇವು ಇಷ್ಟೇ ಎಂದಲ್ಲ ಉದಾಹರಣೆಗಳು ಮಾತ್ರ. ಪ್ರತಿ ಊರಿನಲ್ಲಿ, ಗ್ರಾಮದಲ್ಲಿ, ಹೋಬಳಿ, ತಾಲ್ಲೂಕುಗಳಲ್ಲಿ ಇಂಥ ಹಲವಾರು ಸಂಗತಿಗಳು ಸಿಗುತ್ತವೆ. ಇವೆಲ್ಲವೂ ಸೇರಿಯೇ ಹಾಸನ ಜಿಲ್ಲೆಯ ಪರಂಪರೆ ನಡೆದು ಬಂದಿದೆ. ಅದು ಸೌಹಾರ್ದ ಮತ್ತು ಸಾಮರಸ್ಯದ ಪರಂಪರೆಯೇ ಆಗಿದೆಯೆಂದು ಬೇರೆ ಹೇಳಬೇಕಿಲ್ಲ.

ಚಾರಿತ್ರಿಕ ಹಿನ್ನೆಲೆಯ ಮಾದರಿಗಳು

ಹೊಯ್ಸಳರ ಕಾಲ ಸೌಹಾರ್ದದ ಮಾದರಿ: ಹೊಯ್ಸಳರು ಮೂಲತಃ ಬೇಡ ಕುಲದವರು. ಸಳ ಎಂಬ ಬೇಡ ಕುಲದ ವೀರ, ಸುದತ್ತ ಎಂಬ ಜೈನ ಮುನಿಯ ಶಿಷ್ಯನಾಗಿದ್ದ. ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನಲ್ಲಿ ಅಂಗಡಿ ಎಂಬ ಗ್ರಾಮವಿದೆ. ಅಲ್ಲಿ ಸುದತ್ತ ಮುನಿಯ ಆಶ್ರಮವಿತ್ತು. ಒಮ್ಮೆ ಆ ಆಶ್ರಮದೊಳಕ್ಕೆ ಒಂದು ಹುಲಿ ನುಗ್ಗಿತು. ಆಗ ಮುನಿ ಶಿಷ್ಯನಿಗೆ 'ಪೊಯ್ ಸಳ' ಎಂದು ಹೇಳಿದ. ಪೊಯ್ ಎಂದರೆ ಹೊಡೆ ಎಂದರ್ಥ. ಆಗ ಸಳ ಏಕಾಂಗಿಯಾಗಿ ಹೋರಾಡಿ ಹುಲಿಯನ್ನು ಕೊಂದ.

ಆ ನಂತರ ಸುದತ್ತ ಮುನಿ, ಸಳನನ್ನು 'ಇಂತಹ ವೀರ ರಾಜನಲ್ಲಿರುವುದೇ ಸರಿ ಎಂದುಕೊಂಡು ಅಂದು ರಾಜ್ಯವಾಳುತ್ತಿದ್ದ ಕದಂಬರಲ್ಲಿಗೆ ಕರೆದೊಯ್ದು ಒಪ್ಪಿಸಿದ. ಕದಂಬರ ಸೇನೆಯನ್ನು ಸೇರಿದ ಸಳ ಮುಂದೆ ಅವರ ಸೇನಾಧಿಪತಿಯಾದ. ನಂತರದ

ದಿನಗಳಲ್ಲಿ ಸಳನ ವಂಶದವರು ಕದಂಬರ ಮಾಂಡಲಿಕರಾದರು. ತಮ್ಮ ಮೂಲ ಪುರುಷನಾದ ಸಳನ ನೆನಪಿಗೆ ತಮ್ಮದು ಹೊಯ್ಸಳ ವಂಶವೆಂದು ಕರೆದುಕೊಂಡರು. ಈ ರೀತಿಯ ಕಥೆಯೊಂದು ಜನರ ನಡುವೆ ಪ್ರಚಲಿತದಲ್ಲಿದೆ. ಇದರ ಐತಿಹಾಸಿಕ ಸತ್ಯತೆ ನಿರ್ಧಾರವಾಗಿಲ್ಲ.

ಆದರೆ ಮೂಲತಃ ಬೇಡರಾದ ಹೊಯ್ಸಳರು ಜೈನ ಮತಾವಲಂಬಿಗಳಾದರು. ಕದಂಬರಿಂದ ಸ್ವತಂತ್ರರಾಗಿ ತಾವೇ ರಾಜರಾದರು.

ಹೊಯ್ಸಳರಲ್ಲಿ ಹೆಚ್ಚು ಪ್ರಖ್ಯಾತನಾದ ರಾಜ ಬಿಟ್ಟಿದೇವ. ಈತ ರಾಮಾನುಜಾಚಾರ್ಯರ ಅನುಯಾಯಿಯಾಗಿ ವೈಷ್ಣವ ಪಂಥಕ್ಕೆ ಮತಾಂತರ ಹೊಂದಿದ.

ಅಂದಿನ ವೈಷ್ಣವ ಪಂಥವೂ ಒಂದು ರೀತಿಯಲ್ಲಿ ಸಮಾಜ ಸುಧಾರಕ ಪಂಥವಾಗಿತ್ತು. ಅದು ರಾಮಾನುಜಾಚಾರ್ಯರು ತಮಿಳುನಾಡಿನಲ್ಲಿ ಜಾತಿ ಪದ್ಧತಿಯ ವಿರುದ್ಧ ಕಟ್ಟಿದ ಪಂಥವಾಗಿತ್ತು. ಆದ್ದರಿಂದ ಅವರ ಮೊದಲ ಶಿಷ್ಯರೆಲ್ಲರೂ ಕೆಳವರ್ಗದವರೇ ಆಗಿದ್ದರು. ಇದರಿಂದ ವರ್ಣ ಸಂಕರವಾಯಿತೆಂದು ವೈದಿಕರು ಕೋಪಗೊಂಡರು. ಅವರು ತಮಿಳುನಾಡಿನ ಅರಸರಾದ ಚೋಳರಲ್ಲಿ ದೂರಿತ್ತರು. ಚೋಳ ಅರಸರಿಂದ ತಪ್ಪಿಸಿಕೊಂಡು ರಾಮಾನುಜರು ತಮ್ಮ ಶಿಷ್ಯರೊಡನೆ ಅಲ್ಲಿಂದ ಓಡಿಬಂದು ಹೊಯ್ಸಳರಲ್ಲಿ ಆಶ್ರಯ ಪಡೆದರು.

ಅದು ಹೊಯ್ಸಳರ ಬಿಟ್ಟಿದೇವನ ಕಾಲ. ಬಿಟ್ಟಿದೇವ ಜೈನ ಮತಾವಲಂಬಿಯಾಗಿದ್ದ. ರಾಮಾನುಜಾಚಾರ್ಯರು ಮೊದಲಿಗೆ ಇಂದಿನ ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ನೆಲೆ ನಿಂತರು. ಆನಂತರ ಬಿಟ್ಟಿದೇವನ ಆಹ್ವಾನದಂತೆ ಬೇಲೂರಿಗೆ ಬಂದು

ನೆಲೆಸಿದರು. ರಾಜಾ ಬಿಟ್ಟಿದೇವ ರಾಮಾನುಜರ ಶಿಷ್ಯನಾಗಿ ವೈಷ್ಣವ ಪಂಥವನ್ನು ಸ್ವೀಕರಿಸಿದ. ನಂತರ ಆತ 'ವಿಷ್ಣುವರ್ಧನ' ಎಂಬ ಹೆಸರಿನಿಂದ ಗುರುತಿಸಿಕೊಂಡ. ಆ ಕಾಲದಲ್ಲಿ ಸಾವಿರಾರು ಜನರು ವೈಷ್ಣವರಾಗಿ ಮತಾಂತರ ಹೊಂದಿದರು.

ರಾಜಾ ವಿಷ್ಣುವರ್ಧನ ಜನಾನುರಾಗಿಯೂ, ಧರ್ಮಸಹಿಷ್ಣುವೂ ಆಗಿದ್ದ. ಪ್ರಜೆಗಳ ಮೇಲೆ ಮತಾಂತರವಾಗಲು ಯಾವುದೇ ಒತ್ತಡ ಹೇರಲಿಲ್ಲ. ಆತನ ರಾಣಿ ಶಾಂತಲೆಯೇ ಜೈನಧರ್ಮದಲ್ಲಿ ಮುಂದುವರೆದಳು. ಕಾಲಾನಂತರ ಶಿವಗಂಗೆಯಲ್ಲಿ ಪ್ರಾಣಾರ್ಪಣೆ ಮಾಡಿದಳು.

ವಿಷ್ಣುವರ್ಧನ ಮತ್ತು ಶಾಂತಲೆಯರ ದಾಂಪತ್ಯ ಆ ಕಾಲದ ರಾಜಕಾರಣ ಮತ್ತು ಧಾರ್ಮಿಕ ಸಾಮರಸ್ಯಗಳಿಗೆ ಅತ್ಯುತ್ತಮ ಉದಾಹರಣೆಯಾಗಿದೆ. ಆ ಕಾಲದಲ್ಲಿ ಒಂದೇ ಕುಟಂಬದ ಸದಸ್ಯರು ಬೇರೆ ಬೇರೆ ಧರ್ಮಾವಲಂಬಿಗಳಾಗಿರುವ ಹಲವು ಉದಾಹರಣೆಗಳು ದೊರೆಯುತ್ತವೆ. ಆದ್ದರಿಂದಲೇ ಹೊಯ್ಸಳ ಸಾಮಾಜ್ಯದಲ್ಲಿ ಒಂದೇ ಕಾಲದಲ್ಲಿ ಕಟ್ಟಿದ ಜಿನ ಮಂದಿರಗಳು, ಶೈವ ಹಾಗೂ ವೈಷ್ಣವ ದೇವಾಲಯಗಳು ಕಾಣಸಿಗುತ್ತವೆ.

ಹೊಯ್ಸಳರ ಇನ್ನೊಂದು ಬಹುಮುಖ್ಯ ಸಾಧನೆ ಜಾತಿ ಸಾಮರಸ್ಯ. ಹೊಯ್ಸಳರು ಮೂಲತಃ ಬೇಡ ಕುಲದವರು. ರಾಮಾನುಜರ ಶಿಷ್ಯರಲ್ಲಿ ಅನೇಕರು ಬೇಡರು ಮತ್ತು ದಲಿತ ಕುಲದವರಿದ್ದರು. ಇದರ ಪರಿಣಾಮವಾಗಿ ಹೊಯ್ಸಳರ ಆಡಳಿತದಲ್ಲಿ ಅನೇಕ ಬದಲಾವಣೆಗಳಾದವು. ದಲಿತರಿಗೆ ಬೇಲೂರು ಕೋಟೆಯಲ್ಲಿ ಪ್ರವೇಶ ದೊರೆಯಿತು. ಸ್ವಲ್ಪಮಟ್ಟಿಗೆ ಜಮೀನಿನ ಹಕ್ಕು ಕೂಡಾ ದೊರೆಯಿತು. ಆ ಕಾಲದಲ್ಲಿ ಭೂಮಿಯ ಒಡೆತನ ಸಿಕ್ಕಿದವರ ಕುಟುಂಬದವರೆಂದು ಹೇಳಿಕೊಳ್ಳುವ ಹಲವು ದಲಿತ ಕುಟುಂಬಗಳು

ಈಗಲೂ ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಇವೆ.

ಹೊಯ್ಸಳರು ಬಹಳ ದೂರದೃಷ್ಟಿಯ ಆಡಳಿತಗಾರರು. ಮಂಗಳೂರು ಇವರ ಸಮುದ್ರ ವ್ಯಾಪಾರದ ಹೆಬ್ಬಾಗಿಲಾಗಿತ್ತು. ಸಾಂಬಾರ ಪದಾರ್ಥಗಳು, ಚಿನ್ನ, ವಜ್ರ ವೈಢೂರ್ಯ, ಆಭರಣಗಳು, ಸುಗಂಧ ವಸ್ತುಗಳು, ಹಗ್ಗಗಳು ಮತ್ತು ಬಟ್ಟೆ. ಮಣ್ಣಿನ ಮಡಕೆ ಪಾತ್ರೆಗಳು, ಕರ ಕುಶಲ ವಸ್ತುಗಳು, ಬೆಲ್ಲ, ಸಕ್ಕರೆ ವ್ಯಾಪಾರದ ಮುಖ್ಯ ಸರಕಾಗಿದ್ದವು. ಈಜಿಪ್ಟ್‌ನಿಂದ ಹಿಡಿದು ಚೀನಾ ಮತ್ತು ಪೂರ್ವದಲ್ಲಿ ಮಲಯದವರೆಗೆ ಇವರಿಗೆ ವ್ಯಾಪಾರೀ ಸಂಬಂಧಗಳಿದ್ದವು.

ಇಂದು ನಾವು ಆಧುನಿಕ ಭಾರತದಲ್ಲಿ ಕಾಣುವ 'ಉದ್ಯೋಗ ಖಾತ್ರಿ ಯೋಜನೆ'ಯ ಪ್ರಾರಂಭಿಕ ರೂಪವನ್ನು ಹೊಯ್ಸಳರ ಆಡಳಿತದಲ್ಲಿ ಕಾಣಬಹುದು. ಹೊಯ್ಸಳರಲ್ಲಿ ಎರಡು ಮುಖ್ಯ ಯೋಜನೆಗಳು ಇದ್ದವು. ಒಂದು ಕೆರೆಗಳ ನಿರ್ಮಾಣ, ಎರಡನೆಯದು ದೇವಾಲಯಗಳ ನಿರ್ಮಾಣ. ಪ್ರತಿ ಗ್ರಾಮದಲ್ಲಿಯೂ ಆಯಾ ಗ್ರಾಮದವರೇ ಸೇರಿ ಕೆರೆಗಳನ್ನು ನಿರ್ಮಾಣ ಮಾಡಬೇಕಿತ್ತು, ಅದಕ್ಕಾಗಿ ತೆರಿಗೆ ರಿಯಾಯಿತಿ ದೊರೆಯುತ್ತಿತ್ತು. ಒಂದು ದೊಡ್ಡ ಕೆರೆ ನಿರ್ಮಾಣವಾಗಲು ನೂರಾರು ಜನರು ಕೆಲವು ವರ್ಷಗಳ ಕಾಲ ದುಡಿಯುತ್ತಿದ್ದರು. ಇಂತಹ ಹಲವು ಕೆರೆಗಳ ನಿರ್ಮಾಣದಿಂದ ರಾಜ್ಯದಲ್ಲಿ ಸಾವಿರಾರು ಜನರಿಗೆ ಕೆಲಸ ದೊರೆಯುತ್ತಿತ್ತು. ನಂತರ ನೀರಾವರಿ ಸೌಲಭ್ಯ ದೊರೆತು ಇನ್ನಷ್ಟು ಭೂಮಿಯಲ್ಲಿ ಕೃಷಿಯಾಗುತ್ತಿತ್ತು. ಗ್ರಾಮಗಳ ಆರ್ಥಿಕ ಅಭಿವೃದ್ಧಿಯಾಗುತ್ತಿತ್ತು.

ಕಲೆ ಮತ್ತು ವಾಸ್ತುಶಿಲ್ಪ: ಹೊಯ್ಸಳರು ಕಲೆ ಮತ್ತು ವಾಸ್ತುಶಿಲ್ಪದಲ್ಲಿ ಅದ್ವಿತೀಯ ಸಾಧನೆ ಮಾಡಿದ್ದಾರೆ. ಅವರು ಸಂಗೀತ, ನೃತ್ಯ,

ವರ್ಣಚಿತ್ರ ಮೂರ್ತಿಶಿಲ್ಪಗಳಲ್ಲಿ ತೋರಿದ ಅಭಿರುಚಿ ಅಪಾರವಾದುದು. ಅವರ ಆಳ್ವಿಕೆಯು ಕಾಲದಲ್ಲಿ ಕಟ್ಟಲಾದ ದೇವಾಲಯಗಳಲ್ಲಿ ಬೇಲೂರಿನ ಚೆನ್ನಕೇಶವ, ಮತ್ತು ಕಪ್ಪೆ ಚೆನ್ನಿಗರಾಯ, ಹಳೇಬೀಡಿನ ಹೊಯ್ಸಳೇಶ್ವರ, ಸೋಮನಾಥಪುರದ ಕೇಶವ ದೇವಾಲಯ, ತಲಕಾಡಿನ ಕೀರ್ತಿನಾರಾಯಣ, ಬೆಳವಾಡಿಯ ವೀರನಾರಾಯಣ, ದೊಡ್ಡಗದ್ದವಳ್ಳಿಯ ಮಹಾಲಕ್ಷ್ಮಿ ದೇವಳ, ಅಮೃತಾಪುರದ ಅಮೃತೇಶ್ವರ ದೇವಾಲಯಗಳು, ಬಸದಿಹಳ್ಳಿಯ ಜಿನಾಲಯಗಳು ಅತ್ಯಂತ ಪ್ರಸಿದ್ಧವಾಗಿವೆ. ಈ ದೇವಾಲಯಗಳು ಮತ್ತು ಜಿನಾಲಯಗಳು ಹೊಯ್ಸಳರ ಆಳ್ವಿಕೆಯ ವೈಭವದ ಪ್ರತೀಕವಾಗಿ ಇಂದಿಗೂ ಅವರ ಕಲಾನೈಪುಣ್ಯವನ್ನು ಸಾರುವ ಅಮೂಲ್ಯ ಶಿಲ್ಪ ಕೇಂದ್ರಗಳಾಗಿವೆ. ಇಷ್ಟು ದೇವಾಲಯಗಳಲ್ಲಿ ಬೇಲೂರಿನ ಚನ್ನಕೇಶವ ದೇವಾಲಯವು ವಿಶ್ವ ಪ್ರಸಿದ್ಧಿಯನ್ನು ಪಡೆದಿದೆ.

ಕ್ರಿ.ಶ.೧೧೧೬ರಲ್ಲಿ ಹೊಯ್ಸಳ ರಾಜ ವಿಷ್ಣುವರ್ಧನನು ಚೋಳರ ವಿರುದ್ಧ ಸಾಧಿಸಿದ ವಿಜಯದ ದ್ಯೋತಕವಾಗಿ ಈ ದೇಗುಲವನ್ನು ನಿರ್ಮಿಸಿ, ವಿಜಯ ನಾರಾಯಣ ಎಂದು ಕರೆದನು. ಅತ್ಯಂತ ಸೂಕ್ಷ್ಮವಾದ ಕೆತ್ತನೆಗಳಿಗಾಗಿ ಕಟ್ಟಡಗಳಿಗೆ ಹೊಯ್ಸಳರು ಮೃದು ಬಳಪದ ಕಲ್ಲನ್ನು ಬಳಸಿದ್ದರು. ಚೆನ್ನಕೇಶವ ದೇವಸ್ಥಾನವು ಕಲ್ಲಿನಲ್ಲಿ ಮಾಡಬಹುದಾದ ಅತ್ಯಂತ ಸೂಕ್ಷ್ಮ ಕೆತ್ತನೆಗಳಿಗೆ ಕಲಾ ನೈಪುಣ್ಯತೆಗೆ ಉತ್ತಮ ಉದಾಹರಣೆಯಾಗಿದೆ. ಈ ದೇವಸ್ಥಾನದಲ್ಲಿ ೮೦ಕ್ಕೂ ಹೆಚ್ಚು ಸುಂದರವಾದ ಮದನಿಕೆಯರ ಶಿಲ್ಪಗಳಿವೆ. ಹಳೆಬೀಡಿನಲ್ಲಿರುವ ಹೊಯ್ಸಳೇಶ್ವರ ದೇವಾಲಯವನ್ನು ಐದು ಅಡಿ ಎತ್ತರದ ನಕ್ಷತ್ರಾಕಾರದ ಜಗಲಿಯ ಮೇಲೆ ಪೂರ್ವಾಭಿಮುಖವಾಗಿ ಕಟ್ಟಲಾಗಿದೆ. ಈ ದೇವಾಲಯದಲ್ಲಿ ಬೇಲೂರಿಗಿಂತಲೂ ಶಿಲ್ಪಸಮೃದ್ಧಿ ಹೆಚ್ಚು. ಈ ದೇವಳಗಳ ಕುರಿತು

ಫರ್ಗ್ಯೂಸನ್ ಎಂಬ ವಿದ್ವಾಂಸನು, "ಸೂಕ್ಷ್ಮ ಕೌಶಲ್ಯದ ಕೆತ್ತನೆಯ ಕೆಲಸದಲ್ಲಿ ಇಡೀ ಜಗತ್ತಿನ ಶಿಲ್ಪವನ್ನೇ ಮೀರಿಸಿದ ಅನೇಕ ಕಟ್ಟಡಗಳು ಭಾರತದಲ್ಲಿವೆ. ಆದರೆ ಬೇಲೂರು ಹಳೇಬೀಡುಗಳ ದೇವಾಲಯಗಳು ಅವುಗಳೆಲ್ಲವನ್ನು ಮೀರಿಸಿವೆ" ಎಂದಿದ್ದಾರೆ. ಸೋಮನಾಥಪುರದ ಕೇಶವ ದೇವಾಲಯವನ್ನು ಕ್ರಿ.ಶ. ೧೨೭೦ರ ಸುಮಾರಿನಲ್ಲಿ ಕಟ್ಟಲಾಗಿದೆ. ಮೂರು ಅಡಿ ಎತ್ತರದ ನಕ್ಷತ್ರಾಕಾರದ ಜಗಲಿಯ ಮೇಲೆ ಈ ದೇವಾಲಯ ಪೂರ್ವಾಭಿಮುಖವಾಗಿ ನಿಂತಿದೆ. ಬೇಲೂರು ಹಳೇಬೀಡು ದೇವಾಲಯಗಳಲ್ಲಿ ಕಂಡುಬರುವಂತೆ ಆನೆ ಮತ್ತು ಕುದುರೆಗಳ ಸಾಲು ಇಲ್ಲೂ ಸಹ ಕಂಡುಬರುತ್ತದೆ.

ಹೊಯ್ಸಳರ ಕಾಲದ ದೇವಾಲಯಗಳಲ್ಲಿ ಸಾಮಾನ್ಯವಾಗಿ ಸಳನು ಹುಲಿಯನ್ನು ಕೊಲ್ಲುತ್ತಿರುವ ಅಂದವಾದ ಶಿಲ್ಪವಿರುತ್ತದೆ. ದೇವಾಲಯಗಳ ತಳ ವಿನ್ಯಾಸವು ನಕ್ಷತ್ರಾಕಾರದಿಂದ ಕೂಡಿದ್ದು. ಮೂರರಿಂದ ನಾಲ್ಕು ಅಡಿಗಳಷ್ಟು ಎತ್ತರವಾಗಿದೆ. ತಳ ವಿನ್ಯಾಸದ ಜಗಲಿಯ ಮೇಲೆ ಪ್ರದಕ್ಷಿಣೆಗೆ ಅವಕಾಶವನ್ನು ಕಲ್ಪಿಸಲಾಗಿದೆ. ನಕ್ಷತ್ರಾಕಾರದ ತಳವಿನ್ಯಾಸವನ್ನನುಸರಿಸಿ ದೇವಾಲಯದ ಗೋಡೆಗಳನ್ನು ನಿರ್ಮಿಸಲಾಗಿದೆ. ಗೋಡೆಗಳ ಸುತ್ತಲೂ ಪ್ರಾರಂಭದ ಮೊದಲನೆಯ ಸಾಲಿನಲ್ಲಿ ಆನೆಗಳ ಚಿತ್ರವನ್ನು ಕೊಡಲಾಗಿದೆ. ಅನಂತರ ಬರುವ ಚಿತ್ರಪಟ್ಟಿಕೆಗಳಲ್ಲಿ ಲತೆಗಳು, ಹೂಗಳು, ಹಂಸ, ಆನೆ, ಕುದುರೆಗಳ ಸಾಲನ್ನು ಕೆತ್ತಿದ್ದಾರೆ. ಶಿಲಾಪಟ್ಟಿಕೆಗಳಲ್ಲಿ ರಾಮಾಯಣ, ಮಹಾಭಾರತದ ಘಟನಾವಳಿಗಳನ್ನು ಕೆತ್ತಲಾಗಿದೆ. ಹೊಯ್ಸಳರ ದೇವಾಲಯಗಳು ಮುಖಮಂಟಪ, ಸಭಾಮಂಟಪ ಮತ್ತು ಗರ್ಭಗೃಹಗಳನ್ನೊಳಗೊಂಡಿದೆ. ಮಹಾದ್ವಾರದ ಇಕ್ಕೆಲಗಳಲ್ಲಿ ಮತ್ತು ಗರ್ಭಗೃಹದ ಬಾಗಿಲ ಬಳಿಯಲ್ಲಿ ದ್ವಾರಪಾಲಕರನ್ನು ಕೆತ್ತಲಾಗಿದೆ. ದೇವಾಲಯದ ಕಂಬಗಳು ಅತ್ಯಂತ ನಯವಾಗಿ ನುಣುಪಾಗಿ ಕೆತ್ತಲ್ಪಟ್ಟಿವೆ. ಹಲವು ಕಂಬಗಳಲ್ಲಿ ಅತಿ ಸೂಕ್ಷ್ಮವಾದ

ಶಿಲ್ಪಗಳನ್ನು ಕೆತ್ತಲಾಗಿದೆ. ಹೊಯ್ಸಳ ದೇವಾಲಯಗಳು ಸೂಕ್ಷ್ಮ ಕೆತ್ತನೆ ಕೆಲಸಕ್ಕೂ, ಸೌಂದರ್ಯಕ್ಕೂ ಜಗತ್ಪ್ರಸಿದ್ಧವಾಗಿದೆ.

ಹೊಯ್ಸಳರ ಕಾಲ ಕಲೆ ಮತ್ತು ವಾಸ್ತುಶಿಲ್ಪದಲ್ಲಿ ಸ್ಮರಣೀಯವಾದಂತೆ ಸಂಗೀತ ನೃತ್ಯದಲ್ಲೂ ತನ್ನ ವಿಶಿಷ್ಟತೆಯನ್ನು ಉಳಿಸಿಕೊಂಡಿದೆ. ಅರಸರು ಸಂಗೀತ, ನೃತ್ಯಕ್ಕೆ ವಿಶೇಷ ಪ್ರೋತ್ಸಾಹ ನೀಡುತ್ತಿದ್ದರು. ನರ್ತನದಲ್ಲಿ ರಾಣಿಯರೂ ಪರಿಣಿತಿ ಉಳ್ಳವರಾಗಿದ್ದರು. ಅವರಲ್ಲಿ ಪದ್ಮಲಾ, ಚಂದ್ರಲಾ, ಶಾಂತಲೆ, ಬೊಪ್ಪಲದೇವಿ, ಚಾಮಲದೇವಿ ಪ್ರಮುಖರು. ವಿಷ್ಣುವರ್ಧನನ ಪಟ್ಟದರಸಿ ಶಾಂತಲೆ ನೃತ್ಯ ಶಾರದೆ ಎಂಬ ಬಿರುದಿಗೆ ಪಾತ್ರಳಾಗಿದ್ದಳು. ಶಾಂತಲೆಯನ್ನು "ನಾಟ್ಯಕ್ಕಾಗಿಯೇ ಮೈತಳೆದು ಅವತರಿಸಿದಳೇನೋ" ಎಂಬುದಾಗಿ ಶ್ರವಣಬೆಳಗೊಳದ ಶಾಸನವೊಂದು ಕೊಂಡಾಡಿದೆ. ಹೊಯ್ಸಳರ ದೇವಾಲಯಗಳಲ್ಲಿರುವ ವಿವಿಧ ಭಂಗಿಗಳಲ್ಲಿರುವ ಮದನಿಕಾ ವಿಗ್ರಹಗಳನ್ನು ವರ್ಣಿಸುವುದು ಅಸದಳ. ವಾಸ್ತುಶಿಲ್ಪದಲ್ಲಿ ನರ್ತಕರನ್ನೂ, ವಾದ್ಯಗಳನ್ನೂ ಹಿಮ್ಮೇಳದವರನ್ನೂ ಕಾಣಬಹುದು. ಅವೆಲ್ಲವುಗಳು ರಸಭಾವಗಳಿಂದ ಕೂಡಿವೆ. ಪ್ರಮಾಣಬದ್ಧವಾಗಿಯೂ, ಕಾಲಿನಿಂದ ತಲೆಯವರೆಗೂ ಅಲಂಕೃತವಾಗಿವೆ.

ಹೊಯ್ಸಳರ ಕಾಲದ ದೇವಾಲಯಗಳನ್ನು ನಾವೆಲ್ಲ ನೋಡಿದ್ದೇವೆ. ಅವುಗಳಲ್ಲಿ ಅದ್ಭುತವಾದ ಶಿಲ್ಪಕಲೆ ಇದೆ. ಎಲ್ಲ ರೀತಿಯ ಪುರಾಣ ಇತಿಹಾಸಗಳ ಕಥೆಗಳ ಕೆತ್ತನೆಯಿದೆ. ಜನ ಜೀವನದ ವಿವರಗಳಿವೆ. ಆ ಕಾಲದ ಸ್ತ್ರೀ ಪುರುಷರ ಉಡುಗೆ ತೊಡುಗೆಗಳ, ಕೇಶಾಲಂಕಾರ, ಆಭರಣ ವೈವಿಧ್ಯಗಳ ಶಿಲ್ಪಗಳಿವೆ.

ದೊಡ್ಡ ದೇವಾಲಯಗಳಿಗೆ ಸಾವಿರಾರು ಶಿಲ್ಪಿಗಳು, ಸಹಾಯಕರು, ನೂರು ವರ್ಷಕ್ಕೂ ಹೆಚ್ಚು ಕಾಲ ಕೆಲಸ ಮಾಡಿದ್ದಾರೆ. ಅವರಿಗೆಲ್ಲ ದೀರ್ಘಕಾಲದ ಉದ್ಯೋಗ ಲಭಿಸಿದೆ. ಹೊಯ್ಸಳ

ದೇವಾಲಯದ ಮುಖ್ಯ ಲಕ್ಷಣವೆಂದರೆ ನಕ್ಷತ್ರಾಕಾರದ ತಳಪಾಯಗಳ ಮೇಲೆ ಕಟ್ಟಿರುವುದು. ಮುಂದೆ ೧೮ನೆಯ ಶತಮಾನದಲ್ಲಿ ಟಿಪ್ಪು ಸುಲ್ತಾನ್ ಕಟ್ಟಿದ ಮಂಜರಾಬಾದ್ ಕೋಟೆಯೂ ನಕ್ಷತ್ರಾಕಾರದಲ್ಲಿದ್ದು ಇದಕ್ಕೆ ಹೊಯ್ಸಳ ವಾಸ್ತು ಶಿಲ್ಪದ ಪ್ರೇರಣೆ ಇರಬಹುದೆಂದು ಕೆಲವು ಇತಿಹಾಸಕಾರರ ಅಭಿಪ್ರಾಯವಾಗಿದೆ.

ದಕ್ಷಿಣ ಕರ್ನಾಟಕ ಮತ್ತು ತಮಿಳುನಾಡಿನ ಕೆಲವು ಭಾಗಗಳು ಹೊಯ್ಸಳ ಸಾಮ್ರಾಜ್ಯವಾಗಿತ್ತು. ಇವರು ಸುಮಾರು ಮುನ್ನೂರ ಹದಿನಾರು ವರ್ಷಗಳ ಕಾಲ ಆಳಿದರು. ಆ ಕಾಲದಲ್ಲಿ ಇವರು ನಿರ್ಮಾಣ ಮಾಡಿದ ಕೆರೆಗಳ ಸಂಖ್ಯೆ ಅರುವತ್ತು ಸಾವಿರಕ್ಕೂ ಹೆಚ್ಚು, ಹಾಗೆಯೇ ಕಟ್ಟಿದ ದೇವಾಲಯಗಳ ಸಂಖ್ಯೆ ನೂರಕ್ಕೂ ಹೆಚ್ಚು.

ದೇಶ ಸುಭಿಕ್ಷವಾಗಿ ಶ್ರೀಮಂತಿಕೆ ಇದ್ದರೂ, ಹೊಯ್ಸಳ ದೇವಾಲಯಗಳಲ್ಲಿ ಚಿನ್ನ ಬೆಳ್ಳಿಗಳ ವೈಭವ ಇಲ್ಲ. ವಜ್ರ ವೈಢೂರ್ಯಗಳ ಸಿರಿವಂತಿಕೆ ಇಲ್ಲ. ಆದರೆ ಅವೆಲ್ಲವೂ ಶಿಲ್ಪಕಲೆಯ ಸೌಂದರ್ಯದಿಂದ ತುಂಬಿದ್ದವು.

ಹೊಯ್ಸಳರ ಆಸ್ಥಾನದಲ್ಲಿ ಜೈನ, ಬ್ರಾಹ್ಮಣ, ಹಾಗೂ ಶೈವ ಕವಿಗಳು ಇದ್ದರು. ಇವರ ಆಡಳಿತದ ಕಾಲದ ಮೊದಲ ಹಂತದಲ್ಲಿ ಸಂಸ್ಕೃತದ ಪ್ರಭಾವ ಹೆಚ್ಚಾಗಿದ್ದರೂ ನಂತರ ಜನ ಭಾಷೆಯಾದ ಕನ್ನಡಕ್ಕೆ ಹೆಚ್ಚು ಮನ್ನಣೆ ದೊರೆತು ಕೊನೆಗೆ ಹೊಯ್ಸಳರ ರಾಜ್ಯ ಸಂಪೂರ್ಣ ಕನ್ನಡದ ನೆಲವಾಯಿತು. ಹೀಗೆ ಕನ್ನಡ ಭಾಷೆಯ ಉಳಿವು ಮತ್ತು ಅಭಿವೃದ್ದಿಗೆ ಹೊಯ್ಸಳರ ಕೊಡುಗೆಯೂ ದೊಡ್ಡದು.

ಮುಂದೆ ಉತ್ತರ ಭಾರತದಿಂದ ಅಲ್ಲಾವುದ್ದೀನ್ ಖಿಲ್ಜಿಯ ಸೇನಾಧಿಪತಿ ಮಲ್ಲಿಕಾಫರನ ದಾಳಿಯಾಯಿತು. ಆದರೆ ಇಲ್ಲಿನ

ದೇವಾಲಯಗಳಲ್ಲಿ ಅವರಿಗೆ ಯಾವುದೇ ಸಂಪತ್ತು ದೊರೆಯಲಿಲ್ಲ. ಆಗ ದೇವಾಲಯಗಳ ಕೆಲ ಭಾಗಗಳಿಗೆ ಹಾನಿಯಾಯಿತು. ಕೆಲವು ಜೈನ ಬಸದಿಗಳೂ ನಾಶವಾದವು. ಈ ದಾಳಿಯಿಂದ ಸ್ಥಳೀಯ ಮುಸ್ಲಿಮರು ಬೇಸರಗೊಂಡಿದ್ದರು. ಇದರಿಂದಾಗಿ ಇಲ್ಲಿನ ಮುಸ್ಲಿಮರು ಪ್ರಾಯಶ್ಚಿತ್ತ ರೂಪವಾಗಿ ನಿರಂತರವಾಗಿ ಬೇಲೂರಿನ ಚೆನ್ನಕೇಶವ ದೇವಾಲಯಕ್ಕೆ ಕಾಣಿಕೆ ಸಲ್ಲಿಸುತ್ತಾ ಬಂದರೆಂದು ಹೇಳುವ ಲಾವಣಿಗಳಿವೆ.

ಹೀಗೆಯೇ ಮುಂದೊಂದು ದಿನ ಈ ಪ್ರದೇಶದಲ್ಲಿ ಭೀಕರ ಕ್ಷಾಮವುಂಟಾಗಿ ಜನ ಜೀವನ ಕಷ್ಟವಾಯಿತು. ಆಗ ಇಲ್ಲಿನ ವೈದಿಕ ಜ್ಯೋತಿಷಿಗಳು, ಮುಸ್ಲಿಂ ಕುಟುಂಬವೊಂದಕ್ಕೆ ಭೂಮಿ ದಾನ ನೀಡಲು ಸಲಹೆ ನೀಡಿದರು. ಅದರಂತೆ ಅವರಿಗೆ ಜಮೀನು ದಾನ ನೀಡಲಾಯಿತು. ಇದರಿಂದ ಕ್ಷಾಮ ದೂರಾಯಿತೆಂದೂ ಆ ನಂತರ ಆ ಕುಟುಂಬ ಪ್ರತಿವರ್ಷ ಚೆನ್ನಕೇಶವನ ಜಾತ್ರೆಯಲ್ಲಿ ಖುರಾನ್ ಓದುವ ಪದ್ಧತಿ ಬಂತೆಂದೂ ಹೇಳುತ್ತಾರೆ.

ಒಮ್ಮೆ ಬೇಲೂರಿನಲ್ಲಿ ರಥೋತ್ಸವ ನಡೆಯುತ್ತಿರುವಾಗಲೇ ತೇರಿನ ಚಕ್ರವೊಂದು ಮುರಿದು ಹೋಯಿತು. ಆಗ ಅಲ್ಲಿನ ಮುಸ್ಲಿಂ ಬಡಗಿಗಳು ಯುದ್ಧೋಪಾದಿಯಲ್ಲಿ ಕೆಲಸ ಮಾಡಿ ತೇರಿನ ಚಕ್ರವನ್ನು ಸರಿಪಡಿಸಿಕೊಟ್ಟು ಉತ್ಸವ ಮುಂದುವರಿಯುವಂತೆ ಮಾಡಿದರು.

ಬೇಲೂರು ದೇವಾಲಯದಲ್ಲಿ ಕುರಾನ್ ಓದುವ ಬಗೆಗಿನ ಎರಡು ಕಥೆಗಳಾಗಲೀ, ರಥದ ಚಕ್ರವನ್ನು ಸರಿಪಡಿಸಿದ ವಿಚಾರವಿರಲಿ ಈ ಎಲ್ಲ ಸಂಗತಿಗಳು, ಕಥೆಗಳು ಹಿಂದೂ ಮುಸ್ಲಿಂ ಸೌಹಾರ್ದವನ್ನು ಹೇಳುತ್ತವೆ.

ಹೊಯ್ಸಳರ ಕಾಲದಿಂದ ನಮಗೆ ದೊರೆಯುವ ಈ ಎಲ್ಲ ಪ್ರದೇಶಗಳ ಹಲವಾರು ಸಂಗತಿಗಳು. ಸುಮಾರು ಒಂದು

ಸಹಸ್ರಮಾನದಿಂದ ಇಲ್ಲಿನ ಸಾಂಸ್ಕೃತಿಕ ಹಿನ್ನೆಲೆ ಮತ್ತು ಭದ್ರವಾದ ಸಾಮರಸ್ಯದ ನೆಲೆಗಟ್ಟಿನ ಕಥೆಗಳನ್ನು ಹೇಳುತ್ತವೆ.

ಮೈಸೂರು ಸಂಸ್ಥಾನ, ಐಗೂರು ಪಾಳೇಗಾರರು, ಟಿಪ್ಪು ಸುಲ್ತಾನ, ಮಂಜ್ರಾಬಾದ್ ಕೋಟೆ: ಐಗೂರಿನ ಪಾಳೇಗಾರರ ಇತಿಹಾಸ ವಿಜಯನಗರ ಸಾಮ್ರಾಜ್ಯದ ಕಾಲದವರೆಗೆ ಹೋಗುತ್ತದೆ. ಹದಿನಾರನೇ ಶತಮಾನದ ಮೊದಲಿಗೆ ಇವರು ವಿಜಯನಗರ ಅರಸರಿಂದ ಇಂದಿನ ಹಾಸನ ಜಿಲ್ಲೆ ಮತ್ತು ಕೊಡಗಿನ ಕೆಲವು ಭಾಗಗಳ ಪ್ರದೇಶದ ಪಾಳೇಗಾರಿಕೆಯನ್ನು ಪಡೆದರು. ಈ ಪ್ರದೇಶವನ್ನು ಆ ಕಾಲದಲ್ಲಿ ಬಲಂ ನಾಡೆಂದು ಕರೆಯಲಾಗುತ್ತಿತ್ತು.

ಐಗೂರಿನ ಪಾಳೇಗಾರರು ಈ ಭಾಗದಲ್ಲಿ ಇಂದಿನ ಮಂಜರಾಬಾದ್ ಪ್ರದೇಶದಲ್ಲಿ ಕಾಡುಗಲ್ಲಿನ ಕೋಟೆಯೊಂದನ್ನು ಕಟ್ಟಿದ್ದರು. ಆ ಕಾಲದಲ್ಲಿ ಆ ಪ್ರದೇಶಕ್ಕೆ ಮಂಜಪ್ಪ ನಾಯಕನ ಪಾಳ್ಯವೆಂಬ ಹೆಸರಿತ್ತು. ಸುಮಾರು ನೂರಾ ಅರುವತ್ತು ವರ್ಷಗಳ ಕಾಲ ಐಗೂರು ಪಾಳೇಗಾರರು ಈ ಪ್ರದೇಶವನ್ನು ಆಳಿದರು. ವಿಜಯನಗರದಿಂದ ಆಡಳಿತ ಮೈಸೂರು ಅರಸರಿಗೆ ಬಂದಿತು. ಆ ನಂತರ ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಸಮಯದಲ್ಲೂ ಐಗೂರು ಸಂಸ್ಥಾನವನ್ನು ಇವರೇ ಆಳುತ್ತಿದ್ದರು. ಹೈದರಾಲಿ ಮತ್ತು ಟಿಪ್ಪುವಿನ ಕಾಲದಲ್ಲಿ ಇಂದಿನ ಮಂಜರಾಬಾದ್ ಕೋಟೆಯನ್ನು ಕಟ್ಟಲಾಯಿತು. ನಡುವೆ ಕೆಲಕಾಲ ಟಿಪ್ಪುವಿಗೂ ಐಗೂರಿನ ಕೊನೆಯ ಪಾಳೇಗಾರ ಕೃಷ್ಣಪ್ಪ ನಾಯಕನಿಗೂ ವಿರೋಧವುಂಟಾದರೂ ಟಿಪ್ಪು ಇವರ ಅಧಿಕಾರವನ್ನು ಕಿತ್ತುಕೊಳ್ಳಲಿಲ್ಲ. ಮಾತ್ರವಲ್ಲ ವೈರತ್ವವನ್ನೂ ಸಾಧಿಸಲಿಲ್ಲ.

ಇದೆಲ್ಲದರ ಪರಿಣಾಮ ಟಿಪ್ಪುವಿನ ಸೈನಿಕರಿಂದಾಗಿ ಕೊಡಗು, ಮಂಗಳೂರು, ಮತ್ತು ಕೇರಳಗಳಲ್ಲಿ ನಡೆಯಿತು ಎನ್ನಲಾಗುವ

ಯಾವ ಹಿಂಸಾಚಾರ ಹಾಗೂ ಮತಾಂತರದ ಪ್ರಕರಣಗಳೂ ಇಲ್ಲಿ ಕಂಡುಬರುವುದಿಲ್ಲ.

ಟಿಪ್ಪುವಿನ ಮರಣಾನಂತರ ಕೃಷ್ಣಪ್ಪ ನಾಯಕನ ಮಗ ವೆಂಕಟಾದ್ರಿ ನಾಯಕ ಬ್ರಿಟಿಷರಿಗೆ ಶರಣಾಗಲಿಲ್ಲ. ಬದಲಿಗೆ ಮತ್ತೆ ಸೈನ್ಯವನ್ನು ಸಂಘಟಿಸಿ ತನ್ನ ರಾಜ್ಯ ವಿಸ್ತರಣೆಗೆ ತೊಡಗಿದ. ಬೆಟ್ಟದ ಮೇಲಿನ ಮಂಜ್ರಾಬಾದ್ ಕೋಟೆಯ ಬದಲಿಗೆ ಅಲ್ಲೇ ಸ್ವಲ್ಪ ದೂರದಲ್ಲಿರುವ ಅರೆಕೆರೆ ಗ್ರಾಮದಲ್ಲಿ ಕಟ್ಟಿಕೊಂಡಿದ್ದ ಕೋಟೆಯಲ್ಲಿ ವಾಸಮಾಡತೊಡಗಿದ. ಮಂಜರಾಬಾದ್ ಕೋಟೆಯಲ್ಲಿ ದೊಡ್ಡ ಸೈನ್ಯವನ್ನು ಇಡುವುದು ಸಾಧ್ಯವಿರಲಿಲ್ಲ.

ವೆಂಕಟಾದ್ರಿ ನಾಯಕನಿಗೆ ಬಲಂ ರಾಜ ಮತ್ತು ಗೂಳಿ ರಾಜ ಎಂಬ ಹೆಸರುಗಳಿದ್ದವು. ಟಿಪ್ಪುವಿನ ಮರಣಾನಂತರ ವೆಂಕಟಾದ್ರಿ ನಾಯಕ ಬ್ರಿಟಿಷರ ವಿರುದ್ಧ ತನ್ನ ಹೋರಾಟವನ್ನು ಮುಂದುವರೆಸಿದ. ಬಿಸ್ಲೆ ಪ್ರದೇಶವನ್ನು ಗೆದ್ದು ತನ್ನ ಪಾಳೆಯಪತ್ತಿಗೆ ಸೇರಿಸಿಕೊಂಡ. ಬ್ರಿಟಿಷರು ನಿಜಾಮನ ಸೈನ್ಯ, ಮರಾಠ ಸೈನ್ಯ ಹಾಗೂ ಮೈಸೂರು ಸೈನ್ಯವನ್ನು ಒಟ್ಟು ಮಾಡಿಕೊಂಡು ವೆಂಕಟಾದ್ರಿ ನಾಯಕನ ಮೇಲೆ ಯುದ್ಧಕ್ಕೆ ಬಂದರು.

ವೆಂಕಟಾದ್ರಿ ನಾಯಕನ ಸೈನ್ಯದಲ್ಲಿ ಹೆನ್ನಲಿ ಗ್ರಾಮದ ಉರಿಗೌಡ, ಕುರುಬತ್ತೂರು ನಂಜೇಗೌಡ, ಬೊಮ್ಮನಕರೆ ಬಸವೇಗೌಡ ಮುಂತಾದ ವೀರರಿದ್ದರು. ವೆಂಕಟಾದ್ರಿನಾಯಕ ಸುಲಭದಲ್ಲಿ ಸೋಲೊಪ್ಪಿಕೊಳ್ಳಲಿಲ್ಲ. ಬ್ರಿಟಿಷರು ವೆಂಕಟಾದ್ರಿನಾಯಕನ ಅರೆಕೆರೆಯಲ್ಲಿನ ಕೋಟೆಯನ್ನು ಸಂಪೂರ್ಣವಾಗಿ ನಾಶ ಮಾಡಿದರು. ವೆಂಕಟಾದ್ರಿನಾಯಕ ತನ್ನ ಆಪ್ತ ಸಹಚರರ ಜೊತೆಯಲ್ಲಿ ಕಾಡಿನಲ್ಲಿ ತಲೆಮರೆಸಿಕೊಳ್ಳಬೇಕಾಯಿತು. ಆಹಾರದ ಕೊರತೆಯಾಯಿತು. ಆಹಾರಕ್ಕಾಗಿ ಹುಡುಕಾಟದಲ್ಲಿದ್ದ ಇವರನ್ನು ಬ್ರಿಟಿಷರು ಮೋಸದಿಂದ

ಸೆರೆಹಿಡಿದರು. ವೆಂಕಟಾದ್ರಿನಾಯಕ ಮತ್ತು ಆತನ ಮುಖ್ಯ ಸಹಚರರನ್ನು ಮೂಡಿಗೆರೆಯ ಬಳಿಯ ಅಂಗಡಿ ಗ್ರಾಮಕ್ಕೆ ಒಯ್ದು ಅಲ್ಲಿ ಗಲ್ಲಿಗೇರಿಸಲಾಯಿತು. ಹೀಗೆ ೧೮೦೨ ನೆಯ ಇಸವಿಯಲ್ಲಿ ಸಂಪೂರ್ಣವಾಗಿ ಮೈಸೂರು ಪ್ರದೇಶ ಬ್ರಿಟಿಷರ ವಶವಾಯಿತು. ಬ್ರಿಟಿಷರು ಅದೇ ಸಮಯದಲ್ಲಿ ಮಂಜರಾಬಾದ್ ಕೋಟೆಯ ಕೆಲ ಭಾಗಗಳನ್ನೂ ನಾಶ ಮಾಡಿದರು.

ಇಲ್ಲಿ ನಾವು ಒಂದು ವಿಚಾರವನ್ನು ಗಮನಿಸಬೇಕು. ಟಿಪ್ಪು ಸುಲ್ತಾನರನ್ನು ಕೊಂದವರು ಉರಿಗೌಡ ಮತ್ತು ನಂಜೇಗೌಡ ಎಂಬ ವೀರರು ಎಂದು ಇತ್ತೀಚೆಗೆ ದೊಡ್ಡ ಮಟ್ಟದಲ್ಲಿ ಪ್ರಚಾರ ಮಾಡಲಾಯಿತು. ಆದರೆ ನಿಜ ಚರಿತ್ರೆಯೆಂದರೆ. ಆ ವೀರರು ಇದ್ದುದು ಐಗೂರಿನ ಕೊನೆ ಪಾಳೇಗಾರ ವೆಂಕಟಾದ್ರಿ ನಾಯಕನ ಸೈನ್ಯದಲ್ಲಿ. ಅವರು ಬ್ರಿಟಿಷರ ವಿರುದ್ಧವೇ ಹೋರಾಡಿದ ವೀರರು. ಅವರು ಯುದ್ಧದಲ್ಲಿ ಸತ್ತಿರಬೇಕು ಇಲ್ಲವೇ ಬ್ರಿಟಿಷರು ಅವರನ್ನು ಗಲ್ಲಿಗೇರಿಸಿರಬೇಕು. ಇವರೆಲ್ಲರ ಶೌರ್ಯ ಸಾಹಸಗಳ ಬಗ್ಗೆ ಲಾವಣಿಕಾರರ ಪದಗಳಿವೆ.

ಮಂಜರಾಬಾದ್ ಕೋಟೆಯ ಸಮೀಪದಲ್ಲಿ ಒಂದು ಗಣಪತಿ ಗುಡಿಯಿದೆ. ಹಾಗೆಯೇ ಸ್ವಲ್ಪ ದೂರದಲ್ಲೇ ಇಂದಿನ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲೇ ಒಂದು ದರ್ಗಾ ಇದೆ. ಇದನ್ನು ಜನರು ಕೋಟೆ ದರ್ಗಾ ಎಂದು ಕರೆಯುತ್ತಾರೆ. ಹಿಂದೆ ಅಲ್ಲಿ ವರ್ಷಕೊಮ್ಮೆ ಉರುಸ್ ನಡೆಯುತ್ತಿತ್ತು. ಆಗ ಕೋಟೆ ಉರುಸ್ ಎಂದರೆ ಸಕಲೇಶಪುರ ಜಾತ್ರೆಯಷ್ಟೇ ಪ್ರಸಿದ್ಧ. ಸಕಲೇಶಪುರ ಜಾತ್ರೆಯಲ್ಲಿ ಹೇಗೆ ಮುಸಲ್ಮಾನರು ಭಾಗವಹಿಸುತ್ತಾರೋ ಹಾಗೆ ಕೋಟೆ ದರ್ಗಾದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಹಿಂದೂಗಳೂ ಸೇರುತ್ತಿದ್ದರು. ಇಡೀ ರಾತ್ರಿ ಖವ್ವಾಲಿ ಗಾಯನ ನಡೆಯುತ್ತಿತ್ತು. ಲಾವಣಿಕಾರರು ಲಾವಣಿ ಹಾಡುವರು. ಟಿಪ್ಪು ಸುಲ್ತಾನ್ ಮತ್ತು ವೆಂಕಟಾದ್ರಿ

ನಾಯಕರ ಬಗ್ಗೆಯೂ ಲಾವಣಿ ಹಾಡುತ್ತಿದ್ದರು.

ಸುಮಾರು ಎರಡು ಶತಮಾನದಷ್ಟು ಕಾಲ ಐಗೂರಿನ ಪಾಳೇಗಾರರು. ಬಲಂ ನಾಡು ಎಂದು ಕರೆಯುತ್ತಿದ್ದ, ಹಾಸನ ಮತ್ತು ಕೊಡಗಿನ ಪ್ರದೇಶವನ್ನು ಆಳಿದ್ದಾರೆ. ಮೊದಲಿಗೆ ವಿಜಯನಗರ, ನಂತರ ಮೈಸೂರು ಅರಸರು ಆಮೇಲೆ ಹೈದರಾಲಿ ಮತ್ತು ಟಿಪ್ಪುಸುಲ್ತಾನರು ಹೀಗೆ ಬೇರೆ ಬೇರೆ ಸಾಮ್ರಾಜ್ಯಗಳ ಅಡಿಯಲ್ಲಿ ಇವರು ಆಡಳಿತ ಮಾಡಿದ್ದಾರೆ. ಆದರೆ ಅಷ್ಟೂ ಕಾಲ ಈ ಪ್ರದೇಶದಲ್ಲಿ ಮತೀಯ ಸೌಹಾರ್ದಕ್ಕೆ ಧಕ್ಕೆಯಾಗದಂತೆ ಆಡಳಿತ ನಡೆಸಿದರೆಂಬುದು ಗಮನಾರ್ಹ ಸಂಗತಿ.

ಹಾಸನದ ಅಧಿದೇವತೆ ಹಾಸನಾಂಬೆ: ಹಾಸನ ನಗರದಲ್ಲಿರುವ ದೇವತೆ ಹಾಸನಾಂಬೆ ಮೂಲತಃ ಗ್ರಾಮದೇವತೆ. ದೇವಾಲಯದ ಬಾಗಿಲನ್ನು ವರ್ಷಕ್ಕೆ ಒಮ್ಮೆ ಮಾತ್ರ ತೆಗೆಯುತ್ತಾರೆ. ದೇವಸ್ಥಾನ ತೆರೆದಿರುವ ಕೆಲವು ದಿನಗಳಲ್ಲಿ ಲಕ್ಷಾಂತರ ಜನರು ದೇವತೆಯ ದರ್ಶನ ಪಡೆಯುತ್ತಾರೆ.

ಹಾಸನಾಂಬೆಯ ಜಾತ್ರೆಯಲ್ಲಿ ಹಿಂದೆ ಮುಸಲ್ಮಾನರು ಕೂಡಾ ಶ್ರದ್ಧಾ ಭಕ್ತಿಗಳಿಂದ ನಡೆದುಕೊಳ್ಳುತ್ತಿದ್ದರು. ಹಾಸನಾಂಬೆಯನ್ನು ಮುಸಲ್ಮಾನರು ಹಸನ್ ಬಿ ಎಂದು ಕರೆಯುತ್ತಾರೆ, ಹಾಸನಾಂಬೆ ಎಂದೂ ಒಪ್ಪಿಕೊಳ್ಳುತ್ತಾರೆ.

ಹಿಂದೆಲ್ಲ ಮುಸ್ಲಿಮರಲ್ಲಿ ಮಕ್ಕಳಿಗೇನಾದರೂ ಕಾಯಿಲೆ ಕಸಾಲೆ ಬಂದಾಗ ಹಸನ್ ಬಿ ಹತ್ತಿರ ಹೋಗಿ ಪ್ರಾರ್ಥನೆ ಮಾಡಿಕೊಂಡು ತಾಯತ ಕಟ್ಟಿಸಿಕೊಂಡು ಬರುವ ರೂಢಿಯಿತ್ತು. ಹಾಸನಾಂಬೆಯ ದೇವಾಲಯದ ಆಸುಪಾಸಿನಲ್ಲೇ ಹಸನ್ ಬಿ ದರ್ಗಾ ಇದ್ದು ಅಲ್ಲಿಗೆ ಹಿಂದೂಗಳೂ ಕೂಡಾ ಕಷ್ಟ ಬಂದಾಗ ಪರಿಹಾರಕ್ಕೆಂದು ಹೋಗುತ್ತಿದ್ದರು.

ಇದು ಕೇವಲ ಹಿಂದೂ ಮತ್ತು ಮುಸ್ಲಿಮರ ವಿಚಾರಕ್ಕೆ ಸೀಮಿತವಾಗಿಲ್ಲ. ಎಲ್ಲ ಗ್ರಾಮ ದೇವತೆಗಳಂತೆ ಹಾಸನಾಂಬೆಯ ಜಾತ್ರೆಯಲ್ಲಿ ದೇವಾಲಯದ ಬಾಗಿಲು ತೆಗೆಯುವುದರಿಂದ ಹಿಡಿದು ಜಾತ್ರೆ ಮುಗಿದು ಬಾಗಿಲು ಹಾಕುವ ತನಕ ಎಲ್ಲರ ಒಳಗೊಳ್ಳುವಿಕೆ ಮುಖ್ಯವಾಗಿದೆ. ಮೊದಲಿಗೆ ಬಾಗಿಲು ತೆಗೆಯುವವರು ತಳವಾರರು. ಬನ್ನಿ ಕಡಿಯುವ ಮೂಲಕ ಜಾತ್ರೆಗೆ ಚಾಲನೆ ನೀಡುವವರು ಅರಸು ಕುಲದವರು. ನಂತರ ಪೂಜೆ ಮಾಡುವವರು ಬ್ರಾಹ್ಮಣರು.

ದೇವಾಲಯದ ಆವರಣದಲ್ಲಿ ಕಳ್ಳರ ಗುಡಿ ಎನ್ನುವ ಗುಡಿಯೊಂದಿದೆ. ಪೂರ್ವದಲ್ಲಿ ಹಾಸನಾಂಬೆಯನ್ನು ಪೂಜಿಸುತ್ತಿದ್ದವರು ಗಂಗಾ ಮತಸ್ಥರು. ಚನ್ನಪಟ್ಟಣದ ರುದ್ರನಾಯಕ ಎಂಬ ಪಾಳೇಗಾರನ ಕಾಲದಲ್ಲಿ ಇವರ ಹಕ್ಕನ್ನು ಮೋಸ ಮತ್ತು ಕುತಂತ್ರಗಳಿಂದ ಕಿತ್ತುಕೊಳ್ಳಲಾಯಿತು. ಆಗ ಗಂಗಾ ಮತಸ್ಥರ ಹಕ್ಕಿನ ಪರವಾಗಿ ಹೋರಾಟಕ್ಕೆ ನಿಂತ ಮೇಲು ಜಾತಿಯ ಹೆಣ್ಣು ಮಗಳನ್ನು ದೇವಾಲಯದ ಒಳಗೆ ಹತ್ಯೆ ಮಾಡಲಾಯಿತು. ಕೆಳವರ್ಗದ ಹೋರಾಟಗಾರರನ್ನು ಕಳ್ಳರೆಂದು ಬಿಂಬಿಸಿ ಕೊಲ್ಲಲಾಯಿತು. ದೇವಾಲಯದ ಹೊರಗೆ ಅವರ ಕೊಲೆಯಾದ ಸ್ಥಳದಲ್ಲಿ ಗುಡಿಯೊಂದನ್ನು ಕಟ್ಟಿ ಕಳ್ಳರ ಗುಡಿಯೆಂದು ಕರೆದು ಕೆಳಜಾತಿಯವರಿಗೆ ಪೂಜೆಗೆ ಅವಕಾಶ ನೀಡಲಾಯಿತು. ನಂತರದ ದಿನಗಳಲ್ಲಿ ಕೊಲೆಯಾದ ಆ ಹೆಣ್ಣು ಮಗಳಿಗೂ ದೇವಾಲಯದಲ್ಲಿ ಪೂಜೆ ಸಲ್ಲಿಸುವ ಪದ್ಧತಿ ಬಂತು.

ಹಾಸನ ಮತ್ತು ಹಸನ್ ಬಿ ಹಾಗೂ ಹಾಸನಾಂಬೆ ಇವೆಲ್ಲದರ ನಡುವೆ ಎರಡು ಧರ್ಮಗಳ ಅವಿನಾಭಾವ ಸಂಬಂಧವಿದೆ. ಸ್ವಾತಂತ್ರ್ಯಪೂರ್ವದಿಂದಲೂ ಇದು ನಡೆದು ಬಂದಿದೆ. ಎರಡೂ ಸಮುದಾಯಗಳ ನಡುವೆ ಯಾವುದೇ ಸಂಘರ್ಷಕ್ಕೆ ಕಾರಣವಾಗುವ ಘಟನೆಗಳು ನಡೆದಿಲ್ಲ.

ಪ್ರತಿವರ್ಷ ಬರುವ ಹಾಸನಾಂಬೆಯು ಉತ್ಸವದಲ್ಲಿ ಹಾಸನಾಂಬೆ ನಮ್ಮವಳು, ನಮಗೆ ಒಳಿತನ್ನು ಮಾಡುವವಳು ಎಂದು ಸರತಿಯ ಸಾಲಿನಲ್ಲಿ ನಿಂತು ದರ್ಶನ ಪಡೆಯುವ ನೂರಾರು ಮುಸ್ಲಿಮರನ್ನು ಕಾಣಬಹುದು.

ಇತ್ತೀಚಿನ ವರ್ಷಗಳಲ್ಲಿ ಇಲ್ಲಿನ ಪವಾಡಗಳ ಬಗ್ಗೆ ಪ್ರಚಾರ ಪ್ರಾರಂಭವಾಯಿತು. ಈ ದೇವಾಲಯದಲ್ಲಿ ಹಚ್ಚಿಟ್ಟ ದೀಪ ಮುಂದಿನ ವರ್ಷದವರೆಗೆ ಆರುವುದಿಲ್ಲ. ಪ್ರಸಾದದ ಅನ್ನ ಹಳಸುವುದಿಲ್ಲ ಎನ್ನುವ ಕಥೆ ಪ್ರಾರಂಭವಾಗಿ ಮಾಧ್ಯಮಗಳಲ್ಲಿ ದೊಡ್ಡ ಪ್ರಚಾರ ಪಡೆಯಿತು. ಇದರಿಂದ ರಾಜ್ಯಾದ್ಯಂತ ಭಕ್ತರು ಇಲ್ಲಿಗೆ ಬರುವಂತಾಯಿತು. ಆದರೆ ಇತರ ಧರ್ಮೀಯರು ಇಲ್ಲಿಗೆ ಬರುವುದು ಕಡಿಮೆಯಾಯಿತು. ಕೊನೆಗೆ ದೇವಾಲಯದ ಅರ್ಚಕರೇ ಅದು ನಿಜವಲ್ಲ ಎಂದು ಸಾರ್ವಜನಿಕವಾಗಿ ಹೇಳಿಕೆ ನೀಡಿದರೂ ಜನ ಅದನ್ನು ಒಪ್ಪದ ಸ್ಥಿತಿ ನಿರ್ಮಾಣವಾಗಿದೆ.

ಇಷ್ಟೆಲ್ಲದರ ನಡುವೆಯೂ ಹಾಸನ ಜನ ತಮ್ಮ ಬದುಕಿನ ಸಾಮರಸ್ಯ ಕಳೆದುಕೊಳ್ಳದೆ ಇರುವುದು ನೆಮ್ಮದಿಯ ಸಂಗತಿಯಾಗಿದೆ.

ಶೆಟ್ಟಿಹಳ್ಳಿ ರೋಸರಿ ಚರ್ಚ್: ಅತ್ಯಂತ ಸುಂದರ ವಾಸ್ತುಶಿಲ್ಪದ ಈ ಚರ್ಚನ್ನು ಹಾಸನ ಜಿಲ್ಲೆಯ ಶೆಟ್ಟಿಹಳ್ಳಿ ಗ್ರಾಮದ ಹೇಮಾವತಿ ನದಿಯ ದಡದಲ್ಲಿ ನಿರ್ಮಿಸಲಾಗಿದೆ. ಇದು ಗಾಥಿಕ್ ವಾಸ್ತುಶಿಲ್ಪದ ಉತ್ತಮ ಉದಾಹರಣೆಯಾಗಿದೆ.

ಶ್ರೀಮಂತ ಬ್ರಿಟಿಷ್ ಎಸ್ಟೇಟ್ ಮಾಲೀಕರಿಗಾಗಿ ಫ್ರೆಂಚ್ ಮಿಷನರಿಗಳು ೧೮೬೦ರಲ್ಲಿ ರೋಸರಿ ಚರ್ಚ್ ಅನ್ನು ನಿರ್ಮಿಸಿದರು. ಇದನ್ನು ೧೮೬೦ರಲ್ಲಿ ಅಬ್ಬೆ ಜೆಎ ಡುಬೊಯಿಸ್ ಎಂಬ ಫ್ರೆಂಚ್ ಮಿಷನರಿ ನಿರ್ಮಿಸಿದ್ದಾರೆ. ಈ ಚರ್ಚನ್ನು ಸಾಮಾನ್ಯ ಇಟ್ಟಿಗೆ ಮತ್ತು ಗಾರೆ, ಜೊತೆಗೆ ಬೆಲ್ಜಿಯಂ ಗಾಜು, ಈಜಿಪ್ಟಿನ

ಜಿಪ್ಸಮ್, ಬೆಲ್ಲ ಮತ್ತು ಮೊಟ್ಟೆಯ ಚಿಪ್ಪುಗಳನ್ನು ಬಳಸಿ ಕಟ್ಟಲಾಗಿದೆ.

ನೂರು ವರ್ಷಗಳ ನಂತರ. ೧೯೬೦ರಲ್ಲಿ ಗೊರೂರಿನಲ್ಲಿ ಹೇಮಾವತಿ ಜಲಾಶಯ ನಿರ್ಮಾಣವಾಯಿತು. ಅಂದಿನಿಂದ ಪ್ರತಿ ವರ್ಷ ಮಳೆಗಾಲದಲ್ಲಿ ಚರ್ಚ್ ಜಲಾಶಯದ ಹಿನ್ನೀರಿನಲ್ಲಿ ಮುಳುಗುತ್ತದೆ. ಮತ್ತು ಬೇಸಗೆಯಲ್ಲಿ ಜಲಾಶಯದಲ್ಲಿ ನೀರು ಕಡಿಮೆಯಾದಂತೆ ಮೇಲೆದ್ದು ಬಂದಂತೆ ಕಾಣುತ್ತದೆ. ಇದು ನಿದಖಾನ್‌ವಾಗಿ ಹಂತ ಹಂತವಾಗಿ ನಡೆಯುತ್ತದೆ. ಆದ್ದರಿಂದ ಪ್ರತಿದಿನವೂ ಹೊಸತು ಹೊಸತಾಗಿ ಚರ್ಚ್‌ನ ಹಲವು ಸುಂದರ ದೃಶ್ಯಗಳು ಅರ್ಧ ನೀರಿನಲ್ಲಿ ಮುಳುಗಿರುವಾಗ ಸಂಜೆಯ ಹೊತ್ತು ಇದು ಒಂದು ಅತ್ಯುತ್ತಮ ಕಲಾಕೃತಿಯಂತೆ ಕಾಣುತ್ತದೆ. ಈ ಅದ್ಭುತ ದೃಶ್ಯವನ್ನು ನೋಡಲು ಸಾವಿರಾರು ಪ್ರವಾಸಿಗರು ಇಲ್ಲಿಗೆ ಬರುತ್ತಾರೆ. ಅದರೊಂದಿಗೆ ಈ ಚರ್ಚ್ ಎಲ್ಲಾ ಜಲಾಶಯಗಳಲ್ಲಿಯೂ ಮುಳುಗಡೆಯವಾಗಿರುವ ಗ್ರಾಮೀಣ ಬದುಕಿನ ಒಂದು ಸಂಕೇತದಂತೆಯೂ ಕಾಣುತ್ತದೆ.

ಆ ಕಾಲದಲ್ಲಿ ಈ ಚರ್ಚ್ ಹಳ್ಳಿಯ ಎಲ್ಲಾ ಸಮುದಾಯದ ಜನರ ಕೇಂದ್ರವಾಗಿತ್ತು. ೧೮೭೩ರಲ್ಲಿ ಬರಗಾಲದ ಸಮಯದಲ್ಲಿ, ರೋಸರಿ ಚರ್ಚ್ ನೂರಾರು ನಿರ್ಗತಿಕರಿಗೆ ಆಶ್ರಯ ನೀಡಿತು. ಜನರು ಇದನ್ನು ಅರೋಗ್ಯ ಸ್ವಾಮಿ ಚರ್ಚ್ ಎಂದು ಕರೆದರು.

ಮುಳುಗಿ ಹೋದ ಗ್ರಾಮೀಣ ಸೌಹಾರ್ದ ಬದುಕೊಂದನ್ನು ನೆನಪಿಸಲೇನೋ ಎಂಬಂತೆ ಶೆಟ್ಟಿಹಳ್ಳಿ ಚರ್ಚ್ ಪ್ರತಿ ಬೇಸಗೆಯಲ್ಲಿ ನೀರಿನಿಂದ ಎದ್ದು ಬರುವಂತೆ ಭಾಸವಾಗುತ್ತದೆ.

ಸಾಂಸ್ಕೃತಿಕ ಸಾಮರಸ್ಯದ ಗಣ್ಯರು: ಸಕಲೇಶಪುರದ ಖಾನ್ ಅಬ್ದುಲ್ ಕರೀಂಖಾನ್ (ಎಸ್.ಕೆ. ಕರೀಂಖಾನ್). ಕರೀಂಖಾನ್ ಅವರ ಜನ್ಮಸ್ಥಳ ಹಾಸನ ಜಿಲ್ಲೆಯ ಸಕಲೇಶಪುರ. ತಂದೆ ಆಫ್ಘಾನಿಸ್ಥಾನದ

ಕಾಬೂಲ್‌ನ ವೀರಯೋಧ ಖಾನ್ ಅಬ್ದುಲ್ ರೆಹಮಾನ್ ಖಾನ್ ಹಾಗೂ ತಾಯಿ ಸೌದಿ ಅರೇಬಿಯಾ ಮೂಲದ ಜೈನಬಿ. ಆಫ್ಘಾನಿಸ್ಥಾನವೂ ಆಗ ಬ್ರಿಟಿಷ್ ಆಡಳಿತದಲ್ಲಿತ್ತು. ರೆಹಮಾನ್ ಖಾನ್‌ರನ್ನು ಅಂದಿನ ಬ್ರಿಟಿಷ್ ಸರ್ಕಾರ ಒಂದು ಮುಖ್ಯವಾದ ಕೆಲಸಕ್ಕಾಗಿ ಭಾರತದ ವೈಸರಾಯ್ ಅವರನ್ನು ಭೇಟಿ ಮಾಡಲು ಕಳುಹಿಸಿಕೊಟ್ಟಿತು. ಹಾಗೆ ಭಾರತಕ್ಕೆ ಬಂದ ರೆಹಮಾನ್ ಖಾನ್ ಅಂದಿನ ಮದರಾಸಿಗೆ ಹೋದರು. ಅಲ್ಲಿ ಅನೇಕ ಆಫ್ಘನ್ ಮೂಲದ ಪಠಾಣರು ನೆಲೆಸಿದ್ದರು. ಆಗ ಅಲ್ಲಿನ ಪಠಾಣರ ಮೂಲಕ ರೆಹಮಾನ್ ಖಾನ್ ಕರ್ನಾಟಕಕ್ಕೂ ಬಂದರು. ಇಲ್ಲಿ ಮಲೆನಾಡಿನ ಸಕಲೇಶಪುರಕ್ಕೂ ಬಂದರು. ಇದಕ್ಕೆ ಕಾರಣ ಇಲ್ಲಿನ ಪ್ರಮುಖ ವ್ಯಾಪಾರಿಗಳಾಗಿದ್ದ ಶಾಪ್ ಸಿದ್ಧೇಗೌಡರು. ಇವರು ಹಲವು ಪಠಾಣರ ಕುಟುಂಬಗಳನ್ನು ಸಕಲೇಶಪುರಕ್ಕೆ ಕರೆತಂದು ನೆಲೆಗೊಳಿಸಿದ್ದರು.

ಸ್ವಲ್ಪಕಾಲ ಇಲ್ಲೆಲ್ಲ ಸುತ್ತಾಡಿದ ನಂತರ ರೆಹಮಾನ್ ಖಾನ್ ಮರಳಿ ತಮ್ಮ ದೇಶಕ್ಕೆ ಹೋದರು. ಆದರೆ ಅವರಿಗೆ ಭಾರತ ದೇಶ ಅದರಲ್ಲಿಯೂ ಕರ್ನಾಟಕ ಅವರ ಮನಸ್ಸನ್ನು ಸೆಳೆಯುತ್ತಲೇ ಇತ್ತು. ಅವರ ಹಿರಿಯರು ಮತ್ತು ಸಹೋದರರರೆಲ್ಲ ಆಫ್ಘಾನಿಸ್ಥಾದಲ್ಲಿದ್ದರು. ಆದರೆ ರೆಹಮಾನ್ ಖಾನ್ ಅವರನ್ನೆಲ್ಲ ಬಿಟ್ಟು ಭಾರತಕ್ಕೆ ಬಂದರು. ಹಿಂದಿನ ಭೇಟಿಯಲ್ಲಿ ಪರಿಚಯವಾಗಿದ್ದ ಶಾಪ್ ಸಿದ್ಧೇಗೌಡರನ್ನು ಹುಡುಕಿಕೊಂಡು ಸಕಲೇಶಪುರಕ್ಕೆ ಬಂದರು. ಇಲ್ಲೇ ನೆಲೆಸುವ ತಮ್ಮ ಆಸೆಯನ್ನು ಅವರಲ್ಲಿ ಹೇಳಿದರು.

ಶಾಪ್ ಸಿದ್ಧೇಗೌಡರು ತಮ್ಮದೇ ಒಂದು ಮನೆಯನ್ನು ಅವರಿಗೆ ಬಾಡಿಗೆಗೆ ಕೊಟ್ಟರು. ಅದರಲ್ಲಿ ರೆಹಮಾನ್ ಖಾನ್ ಅವರು ವಾಸವಾಗಿದ್ದರು. ಸಿದ್ಧೇಗೌಡರ ನೆರವಿನೊಂದಿಗೆ ಸಕಲೇಶಪುರದಲ್ಲಿ ಒಂದು ಬಟ್ಟೆ ಮತ್ತು ಹೊಲಿಗೆ ಅಂಗಡಿಯನ್ನು ಪ್ರಾರಂಭಿಸಿದರು. ರೆಹಮಾನ್ ಖಾನ್‌ರಿಗೆ ಯುನಾನಿ ವೈದ್ಯ ಪದ್ಧತಿಯ ಚಿಕಿತ್ಸೆ

ಪಾರಂಪರಿಕವಾಗಿ ತಿಳಿದಿತ್ತು. ಅವರು ತಮ್ಮ ಅಂಗಡಿಯಲ್ಲೇ ಜನರಿಗೆ ಚಿಕಿತ್ಸೆಯನ್ನೂ ನೀಡುತ್ತಿದ್ದರು. ಸಕಲೇಶಪುರದ ಜನ ಅವರನ್ನು ಖಾನ್ ಸಾಹೇಬರು ಎಂದು ಕರೆಯುತ್ತಿದ್ದರು. ನಂತರ ರೆಹಮಾನ್ ಖಾನ್ ಅವರಿಗೆ ಮದುವೆಯಾಯಿತು. ಕೊಡಗಿನ ವಿರಾಜಪೇಟೆಯಲ್ಲಿದ್ದ ಅರೇಬಿಯಾ ಮೂಲದ ವ್ಯಾಪಾರಿಯೊಬ್ಬರ ಮಗಳಾದ ಜೈನಬಿ ಅವರನ್ನು ಮದುವೆಯಾದರು.

ಈ ದಂಪತಿಗೆ ಒಂಬತ್ತು ಮಂದಿ ಮಕ್ಕಳು. ಅವರಲ್ಲಿ ಆರನೆಯವರು ಕರೀಂಖಾನ್. ಕರೀಂಖಾನ್ ಹುಟ್ಟುವ ವೇಳೆಗೆ ರೆಹಮಾನ್ ಖಾನ್ ಅವರ ಹಣಕಾಸಿನ ಪರಿಸ್ಥಿತಿ ಚೆನ್ನಾಗಿರಲಿಲ್ಲ. ಹಾಲು ವ್ಯಾಪಾರ ಮಾಡಲು ಅವರು ಎಮ್ಮೆಗಳನ್ನು ಸಾಕಿಕೊಂಡಿದ್ದರು. ಕರೀಂಖಾನ್ ಬಾಲ್ಯದಲ್ಲಿಯೇ ಎಮ್ಮೆಗಳನ್ನು ಮೇಯಿಸುತ್ತ ಹೇಮಾವತಿ ನದಿಯಲ್ಲಿ ಈಜಾಡುತ್ತ ಬೆಳೆದವರು. ಕರೀಂಖಾನ್ ಅವರು ಓದಿದ್ದು ಕೇವಲ ೮ನೇ ತರಗತಿವರೆಗೆ ಮಾತ್ರ.

ರೆಹಮಾನ್ ಖಾನ್ ಅವರ ಕುಟುಂಬ ವಾಸವಿದ್ದ ಮನೆ ಸಕಲೇಶಪುರದ ಬ್ರಾಹ್ಮಣರ ಬೀದಿಯಲ್ಲಿ ಇತ್ತು. ಆ ಮನೆ ಈಗಲೂ ಇದೆ. ಅಲ್ಲೇ ಓಡಾಡಿಕೊಂಡಿದ್ದ ಬಾಲಕ ಕರೀಂಖಾನರಿಗೆ ಸಕಲೇಶ್ವರ ಸ್ವಾಮಿ ದೇವಾಲಯದ ಅರ್ಚಕರ ಮಕ್ಕಳೊಂದಿಗೆ ಗೆಳೆತನವಾಯ್ತು. ಅವರೊಂದಿಗೆ ಒಡನಾಟದಿಂದ ಸಕಲೇಶ್ವರ ಸ್ವಾಮಿ ದೇವಾಲಯಕ್ಕೂ ಹೋಗಿ ಕುಳಿತಿರುತ್ತಿದ್ದರು. ಅಲ್ಲಿ ದೇವರ ಪ್ರಸಾದವೂ ತಿನ್ನಲು ಸಿಗುತ್ತಿತ್ತು. ಒಳ್ಳೆಯ ಗಾಯಕರೂ ಆದ ಕರೀಂಖಾನ್ ಅಲ್ಲಿ ಮಹಿಳೆಯರು ಹಾಡುತ್ತಿದ್ದ ಭಜನೆಯ ಹಾಡುಗಳನ್ನು ಹಾಗೂ ಕೆಲವು ಶ್ಲೋಕಗಳನ್ನೂ ಕಲಿತುಕೊಂಡರು.

ಕರೀಂಖಾನ್ ಅವರದು ಕಟ್ಟುಮಸ್ತಾದ ಶಕ್ತಿವಂತ ದೇಹ.

ಮಳೆಗಾಲದಲ್ಲಿ ಹೇಮಾವತಿ ನದಿ ತುಂಬಿ ಹರಿಯುವಾಗಲೂ ಈಜಿ ಆಚೆ ಬದಿಗೆ ಹೋಗುತ್ತಿದ್ದರಂತೆ. ಈ ರೀತಿಯ ಸಾಹಸ ಮಾಡುತ್ತಿದ್ದ ಇನ್ನೊಬ್ಬರು ಗೊರೂರು ರಾಮಸ್ವಾಮಿ ಐಯ್ಯಂಗಾರರು. ಇವರಿಬ್ಬರ ಈ ಸಾಹಸ ಕನ್ನಡ ಸಾಹಿತ್ಯದಲ್ಲಿ ದಾಖಲಾಗಿದೆ.

ಸಕಲೇಶಪುರ ನಗರದ ಪಕ್ಕದಲ್ಲಿಯೇ ಹೇಮಾವತಿ ನದಿಯ ಆಚೆ ಬದಿಯಲ್ಲಿ ಆಚಂಗಿ ಎನ್ನುವ ಹಳ್ಳಿಯಿದೆ. ಕರೀಂಖಾನರು ಎಮ್ಮೆಗಳನ್ನು ಮೇಯಿಸುತ್ತ ಅಲ್ಲಿಗೂ ಹೋಗುತ್ತಿದ್ದರು. ಒಮ್ಮೆ ಕರೀಂಖಾನ್ ಅವರು ಶ್ಲೋಕಗಳನ್ನು ತನ್ನಷ್ಟಕ್ಕೆ ಹೇಳಿಕೊಳ್ಳುತ್ತಿದ್ದಾಗ ಅದನ್ನು ಆಚಂಗಿ ನಾರಾಯಣ ಶಾಸ್ತ್ರಿಗಳು ಕೇಳಿಸಿಕೊಂಡರು. ಅವರು ಸಂಸ್ಕೃತ ವಿದ್ವಾಂಸರು. ಎಮ್ಮೆಗಳನ್ನು ಮೇಯಿಸುತ್ತ ಸ್ಪಷ್ಟವಾಗಿ ಸಂಸ್ಕೃತ ಶ್ಲೋಕಗಳನ್ನು ಹೇಳುತ್ತಿದ್ದ ಬಾಲಕನನ್ನು ಕರೆದು ಯಾರೆಂದು ಕೇಳಿ ತಿಳಿದುಕೊಂಡರು. ಆಗ ಕರೀಂಖಾನ್ ನನಗೆ ಸಂಸ್ಕೃತ ಹೇಳಿಕೊಡಿ ಎಂದು ಅವರಲ್ಲಿ ಕೇಳಿದರು. ನಾರಾಯಣ ಶಾಸ್ತ್ರಿಯವರಿಗೆ ಇಕ್ಕಟ್ಟಾಯಿತು. ಈತ ಮುಸ್ಲಿಂ ಬಾಲಕ ಸಂಸ್ಕೃತ ಹೇಳಿಕೊಟ್ಟರೆ ಉಳಿದವರು ಏನೆಂದಾರು ಎನ್ನುವ ಆತಂಕವಾಯಿತು. ಆಗ ಅವರು ನಿನಗೆ ಸಂಸ್ಕೃತ ಹೇಳಿಕೊಡಲು ಅದೇನು ಸುಲಭವೆ? ಅದು ಹೊಳೆಯಲ್ಲಿ ಈಜಿದಂತೆ ಅಲ್ಲ, ಪ್ರತಿದಿನ ನೀನು ಹುಣಿಸೇ ಬರಲಿನಲ್ಲಿ ಏಟು ತಿನ್ನಬೇಕಾಗುತ್ತದೆ. ಯೋಚನೆ ಮಾಡಿ ನೋಡು ಎಂದು ಹೆದರಿಸಿದರು. ದಿನ ಕಳೆದಂತೆ ಕರೀಂಖಾನ್ ಮತ್ತೆ ಮತ್ತೆ ನಾರಾಯಣ ಶಾಸ್ತ್ರಿಯವರಲ್ಲಿ ನನಗೆ ಸಂಸ್ಕೃತ ಹೇಳಿಕೊಡಿ ಎಂದು ಒತ್ತಾಯ ಮಾಡತೊಡಗಿದರು. ಕೊನೆಗೆ ನಾರಾಯಣ ಶಾಸ್ತ್ರಿಯವರು ಒಪ್ಪಿದರು. ಆಗ ಮುಸ್ಲಿಂ ಬಾಲಕನಿಗೆ ಸಂಸ್ಕೃತ ಹೇಳಿಕೊಡುವ ಬಗ್ಗೆ ಕೆಲವರಿಂದ ವಿರೋಧ ಬಂತು. ಅದನ್ನು ಲೆಕ್ಕಿಸದೆ ನಾರಾಯಣ ಶಾಸ್ತ್ರಿ ಕರೀಂಖಾನ್‌ರಿಗೆ ಸಂಸ್ಕೃತ ಪಾಠ ಮುಂದುವರೆಸಿದರು. ಜೊತೆಯಲ್ಲಿ ಕನ್ನಡ ಸಾಹಿತ್ಯದ

ಬಗ್ಗೆಯೂ ಪಾಠ ಹೇಳಿದರು. ಹೀಗೆ ಸಂಸ್ಕೃತ ಕಲಿಯುತ್ತಿದ್ದ ಕರೀಂಖಾನರನ್ನು ಸಕಲೇಶಪುರದ ಜನ ಮುಸ್ಲಿಂ ಬ್ರಾಹ್ಮಣ ಎನ್ನುತ್ತಿದ್ದರಂತೆ.

ಆಚಂಗಿ ನಾರಾಯಣಶಾಸ್ತ್ರಿಯ ಶಿಷ್ಯರಾಗಿ ಕನ್ನಡ ಭಾಷೆ, ನಾಡು-ನುಡಿ, ಸಂಸ್ಕೃತಿ ಬಗ್ಗೆ ತಿಳಿದುಕೊಂಡರು.

ಪರ್ಷಿಯನ್ (ಪುಷ್ತು) ಮನೆಮಾತಾಗಿದ್ದರೂ ಕರೀಂಖಾನರು ವಿಶೇಷವಾಗಿ ಕನ್ನಡ ಮತ್ತು ಸಂಸ್ಕೃತವನ್ನು ಅಧ್ಯಯನ ಮಾಡಿದರು.

ಕರೀಂಖಾನರು ಸಕಲೇಶಪುರದಲ್ಲಿ ಇದ್ದಾಗಲೇ ಸಾಹಿತ್ಯ ರಚನೆಯಲ್ಲಿ ತೊಡಗಿದ್ದರು. ಆ ಕಾಲದಲ್ಲಿ ಸಕಲೇಶಪುರಕ್ಕೂ ಕಂಪೆನಿ ನಾಟಕಗಳು ಬರುತ್ತಿದ್ದವಂತೆ. ಸಕಲೇಶಪುರ ತಾಲ್ಲೂಕಿನ ಬಾಳ್ಳುಪೇಟೆಯ ಬಸವೇಗೌಡರು ಗುಬ್ಬಿ ಕಂಪೆನಿಯಲ್ಲಿದ್ದು ನಂತರ ಅವರದೇ ಒಂದು ಸ್ವಂತ ನಾಟಕ ಕಂಪೆನಿ ಕಟ್ಟಿದ್ದರು. ಅದು ಬಾಳ್ಳು ಬಸವೇಗೌಡರ ಕಂಪೆನಿ ಎಂದು ಹೆಸರಾಗಿತ್ತು. ಅವುಗಳನ್ನೆಲ್ಲಾ ನೋಡುತ್ತಿದ್ದ ಕರೀಂಖಾನರಿಗೆ ನಾಟಕಗಳ ಬಗ್ಗೆ ಒಲವು ಹುಟ್ಟಿತು. ಆ ದಿನಗಳಲ್ಲೇ ನಾಟಕ ರಚನೆಯಲ್ಲಿ ತೊಡಗಿದರು.

ನಾಟಕಗಳ ಪ್ರದರ್ಶನಕ್ಕಾಗಿ ತಾವೇ ಒಂದು ಹವ್ಯಾಸಿ ನಾಟಕ ತಂಡವನ್ನೂ ಕಟ್ಟಿದರು. ಅದಕ್ಕೆ ಸಹೋದರ ಕಲಾಸಂಘ ಎಂದು ಹೆಸರಿಟ್ಟರು. ಅದರಲ್ಲಿ ಹಲವಾರು ಜನರಿದ್ದರು. ಮುಖ್ಯವಾಗಿ ಸಾರಂಗ ಎಂಬ ಕಾವ್ಯನಾಮದ ರಂಗೇಗೌಡರು ಇದ್ದರು. ಟೈಲರ್ ಮೂರ್ತಿರಾವ್, ಮಳಲಿ ರಾಮಪ್ಪ, ಕರೀಂಖಾನರ ತಮ್ಮ ಗಫಾರ್ ಖಾನ್, ಸ್ವಾಮಿ ಇನ್ನೂ ಹಲವಾರು ಜನರು ಈ ನಾಟಕ ತಂಡದಲ್ಲಿ ಇದ್ದರು. ಸಹೋದರ ಕಲಾಸಂಘ ಹಲವಾರು ಐತಿಹಾಸಿಕ ನಾಟಕಗಳನ್ನು ಪ್ರದರ್ಶನ ಮಾಡುತ್ತಿತ್ತು. ಕರೀಂಖಾನ್ ಅವರ 'ನಿರ್ದೋಷಿ' ಎನ್ನುವ ಸಾಮಾಜಿಕ ನಾಟಕ ಮುಂದೆ ಕಂಪೆನಿ

ನಾಟಕಗಳಲ್ಲಿಯೂ ಜನಪ್ರಿಯವಾಗಿ ರಾಜ್ಯಾದ್ಯಂತ ಹೆಸರಾಯಿತು.

ಗಾಂಧೀಜಿಯ ಪ್ರಭಾವಕ್ಕೊಳಗಾದ ಕರೀಂಖಾನ್‌ರು ಸ್ವಾತಂತ್ರ್ಯ ಚಳುವಳಿಯಲ್ಲಿ ತೊಡಗಿಕೊಂಡರು. ಒಳ್ಳೆಯ ಗಾಯಕರಾಗಿದ್ದ ಇವರು ಚಳುವಳಿಗಳಲ್ಲಿ ಕ್ರಾಂತಿಗೀತೆಗಳನ್ನು ಹಾಡುತ್ತಿದ್ದರು. ಕರೀಂಖಾನರಿಗೆ ಅಂದಿನ ಬ್ರಿಟಿಷ್ ಸರ್ಕಾರದ ಇಂಡಿಯನ್ ನೇವಿಯಲ್ಲಿ ಕೆಲಸ ಸಿಕ್ಕಿತ್ತು. ಆದರೆ ಇವರು ಸ್ವಾತಂತ್ರ್ಯ ಚಳುವಳಿಯಲ್ಲಿ ತೊಡಗಿದ್ದವರೆಂಬ ಕಾರಣಕ್ಕೆ ಅವರನ್ನು ಕೆಲಸದಿಂದ ತೆಗೆದುಹಾಕಲಾಯಿತು. ನಂತರ ಇವರು ನಿರಂತರವಾಗಿ ಚಳುವಳಿಯಲ್ಲಿ ತೊಡಗಿ ಏಳು ಸಲ ಜೈಲುವಾಸವನ್ನೂ ಅನುಭವಿಸಿದರು. ಭಾರತಕ್ಕೆ ಸ್ವಾತಂತ್ರ ಬಂದ ನಂತರ ಕರೀಖಾನ್ ಅವರು ಕರ್ನಾಟಕ ಏಕೀಕರಣ ಚಳುವಳಿಯಲ್ಲಿಯೂ ಭಾಗವಹಿಸಿ ಜೈಲು ಸೇರಿದ್ದರು.

ಗಾಂಧಿ ಪ್ರಭಾವದಿಂದ ಇವರು ತಮ್ಮ ಸಾಹಿತ್ಯಗಳ ಪ್ರಕಾಶನಕ್ಕಾಗಿ ಸಕಲೇಶಪುರದಲ್ಲಿ "ರಾಮರಾಜ್ಯ ಪ್ರಕಾಶನ' ಎಂಬ ಪ್ರಕಾಶನ ಸಂಸ್ಥೆಯನ್ನು ಮಾಡಿದರು. ಅದಕ್ಕೆ ಇವರ ಹಿರಿಯಣ್ಣ ಖಲಂದರ್ ಖಾನ್ ಸಹಾಯ ಮಾಡಿದರು.

ಈ ಪ್ರಕಾಶನ ಸಂಸ್ಥೆಯಿಂದ ಕರೀಂಖಾನ್ ಅವರ "ನೀಹಾರ" ಪ್ರಥಮ ಕಥಾ ಸಂಕಲನ ಪ್ರಕಟವಾಯಿತು. ನೀಹಾರ ಎಂದರೆ ಕಾಡಿನಲ್ಲಿ ಬೆಳೆಯುವ ಭತ್ತ. ಈ ಪುಸ್ತಕವನ್ನು ಅವರು ತಮ್ಮ ಗುರುಗಳಾದ ಆಚಂಗಿ ನಾರಾಯಣ ಶಾಸ್ತ್ರಿಗಳಿಗೆ ಅರ್ಪಿಸಿದ್ದಾರೆ. ಅದರಲ್ಲಿ ಹೀಗೆ ಬರೆಯಲಾಗಿದೆ. "ವೇದ, ತತ್ವಶಾಸ್ತ್ರ ಕೋವಿದರೂ, ಸಮತಾವಾದಿಗಳೂ ಆಗಿದ್ದು ನನ್ನ ಸಾಹಿತ್ಯ ರಚನೆಗೆ ಪ್ರೇರಕರೂ ಆಗಿದ್ದ ನಾರಾಯಣ ಶಾಸ್ತ್ರಿಗಳಿಗೆ ಅರ್ಪಣೆ"

ಕರೀಂಖಾನ್ ಅವರ ಎರಡನೆಯ ಕೃತಿ "ನೀಹಾರ". ಇದರಲ್ಲಿ

"ಹಿಂದೂ ಮುಸ್ಲಿಮರ ಅನ್ಯೋನ್ಯತೆಗೆ ನಿದರ್ಶನದಂತಿದ್ದ ನನ್ನ ಅಗ್ರಜ ಖಲಂದರ್ ಖಾನ್ ಅವರ ಪವಿತ್ರ ಸ್ಮೃತಿಗಾಗಿ" ಎಂದಿದ್ದಾರೆ.

ತೆಲುಗಿನ ಪೋತನನ ಭಾಗವತವನ್ನು ನಾಟಕ ರೂಪಕ್ಕೆ ತರುವ ಪ್ರಯತ್ನದಲ್ಲೂ ಇವರು ತೊಡಗಿದ್ದರು. ಉರ್ದು ಸಾಹಿತ್ಯದ ಘಾಲಿಬ್, ಇಕ್ಬಾಲ್ ರಂತಹ ಕವಿಗಳ ಪ್ರಭಾವಕ್ಕೂ ಒಳಗಾಗಿದ್ದ ಇವರು ಹಿಂದು ಮುಸ್ಲಿಂ ಏಕತೆಗೆ ಸಾಕಷ್ಟು ಕಥೆಗಳನ್ನು ರಚಿಸಿದ್ದುಂಟು. ನೀವಾರ (ಉರ್ದುವಿನಿಂದ ಅನುವಾದಿತ ಕಥೆಗಳು), ನೀಹಾರ (ಚಾರಿತ್ರಿಕ ಕಥಾಸಂಕಲನ) ಬಲಿದಾನಿ ಹುಸೇನ್ ಎಂಬುದು ಚಾರಿತ್ರಿಕ ಕಾದಂಬರಿ, ಮಾತೃಶಾಪ ಪೌರಾಣಿಕ ಕಾದಂಬರಿ. ಇವಲ್ಲದೆ ಇವರು ನಿರ್ದೋಷಿ, ಶ್ರೀಕೃಷ್ಣಲೀಲೆ, ಹುಮಾಯುನ್, ಅಂಬರನಾಥ, ಮಹಾಪ್ರಭು ಮಾಗಡಿ ಕೆಂಪೇಗೌಡ ಮೊದಲಾದ ಐತಿಹಾಸಿಕ ಹಾಗೂ ಪೌರಾಣಿಕ ನಾಟಕಗಳನ್ನು ರಚಿಸಿದ್ದಾರೆ.

ಕರೀಂಖಾನ್ ಅವರ 'ಸಹೋದರ ಕಲಾಸಂಘ' ಅವರು ಸಕಲೇಶಪುರದಲ್ಲಿ ಇರುವವರೆಗೂ ಮುಂದುವರೆಯಿತು. ಆಗ ನಾಟಕ ಪ್ರದರ್ಶನಗಳಿಗೆ ಸೀನರಿ ಮತ್ತು ಇತರ ವೇಷ ಭೂಷಣಗಳನ್ನು ದೂರದ ಕುಂದಾಪುರದ ಬುಡಾನ್ ಸಾಬರಿಂದ ತರುತ್ತಿದ್ದರು.

ಮುಂದೆ ಕರೀಂಖಾನರು ಸಕಲೇಶಪುರವನ್ನು ಬಿಟ್ಟು ಬೆಂಗಳೂರಿಗೆ ನಂತರ ಅಲ್ಲಿಂದ ಮದರಾಸಿಗೆ ಹೋದರು. ನಾಟಕ, ಸಾಹಿತ್ಯ ಮತ್ತು ಚಿತ್ರರಂಗದಲ್ಲಿ ಬಹುದೊಡ್ಡ ಸಾಧನೆ ಮಾಡಿದರು. ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷರಾಗಿ ಕರೀಂಖಾನರು ಮಾಡಿದ ಕೆಲಸಗಳು ಒಂದು ವಿಶ್ವವಿದ್ಯಾಲಯದ ಕೆಲಸದಂತೆ ಇವೆ. ಪತ್ರಿಕಾ ರಂಗದಲ್ಲಿಯೂ ಕರೀಂಖಾನರು ದುಡಿದಿದ್ದಾರೆ.

ಇವರು ಧಾರವಾಡದ ಲೋಕಮಿತ್ರ, ಉಡುಪಿಯ ಅಂತರಂಗ ಪತ್ರಿಕೆಗಳ ಸಂಪಾದಕರಾಗಿದ್ದರು.

ಚಿತ್ರರಂಗದಲ್ಲಿಯೂ ಇವರ ಕೊಡುಗೆ ದೊಡ್ಡದು, ಸುಮಾರು ಹತ್ತು ವರ್ಷಗಳ ಕಾಲ, ಚಿತ್ರಕಥೆ ಸಂಬಾಷಣೆ ಹಾಗೂ ಹಾಡುಗಳನ್ನು ಬರೆದರು. ಸುಮಾರು ಮುನ್ನೂರಕ್ಕೂ ಹೆಚ್ಚು ಹಾಡುಗಳನ್ನು ಕರೀಂಖಾನ್ನರು ಬರೆದಿದ್ದಾರೆ. ಸಮನ್ವಯ ಮತ್ತು ಸೌಹಾರ್ದ ಇವರ ಎಲ್ಲರಚನೆಗಳ ಮುಖ್ಯ ನಿಲುವಾಗಿತ್ತು. ಸ್ವರ್ಣಗೌರಿ ಚಿತ್ರದ "ನಟವರ ಗಂಗಾಧರ" ಗೀತೆ ಹಾಗೂ 'ನುಡಿಮನ ಶಿವಗುಣ ಸಂಕೀರ್ತನಾ' ಎಂಬ ಗೀತೆಗಳು ಇಂದಿಗೂ ಅತ್ಯಂತ ಜನಪ್ರಿಯವಾಗಿದೆ,

ಇವರು ಹೆಚ್ಚು ವಿದ್ಯಾಭ್ಯಾಸ ಮಾಡದಿದ್ದರೂ ಇತಿಹಾಸ, ಜಾನಪದ, ಪುರಾಣ, ಮಹಾಕಾವ್ಯಗಳ ಬಗ್ಗೆ ಅಪಾರವಾದ ಪಾಂಡಿತ್ಯ ಗಳಿಸಿದವರಾಗಿದ್ದಾರೆ. ಚಾರಿತ್ರಿಕ ಸಂಗತಿಗಳನ್ನು ಕುರಿತಂತೆ ನಿಂತಲ್ಲಿಯೇ ಮಾಹಿತಿ ನೀಡುವ ಪ್ರತಿಭಾವಂತರು. ಭಗವದ್ಗೀತೆ, ಭಾಗವತ, ಶಿವಪುರಾಣ, ವಿಷ್ಣು ಪುರಾಣಗಳನ್ನು ಬಲ್ಲವರಾಗಿದ್ದರು..

ಕರೀಂಖಾನ್ ಸಕಲೇಶಪುರದಲ್ಲಿ ಇರುವಾಗಲೇ, ಅನಂತರಾಮ್ ಎಂಬುವರು ಸರಸ್ವತಿ ಕಲಾಸಂಘ ಎನ್ನುವ ಆರ್ಕೆಸ್ಟ್ರಾ ಒಂದನ್ನು ಕಟ್ಟಿದ್ದರು. ಅದರಲ್ಲಿ ಅನಂತರಾಮ್ ಅವರ ಅಣ್ಣನ ಮಗಳು ಸೇರಿದಂತೆ ಮಹಿಳಾ ಗಾಯಕಿಯರು ಇದ್ದರು. ಕರೀಂಖಾನ್ ಅವರ ಸೋದರ ಸಂಬಂಧಿಗಳಾದ ಫಯಾಜ್ ಖಾನ್ ಮತ್ತು ರಿಯಾಜ್ ಖಾನ್ ಅವರು ತಬಲಾ ಸಾತ್ ನೀಡುತ್ತಿದ್ದರು. ಕ್ರಿಸ್ಟೋಫರ್ ಎಂಬವರು ಗಿಟಾರ್ ನುಡಿಸುತ್ತಿದ್ದರು. ಇವರು ಅನೇಕ ಕಡೆ ಕಾರ್ಯಕ್ರಮ ನೀಡುತ್ತಿದ್ದರು. ಈ ಸರಸ್ವತಿ ಕಲಾಸಂಘವನ್ನು ಜನರು ಸರ್ವಧರ್ಮ ಕಲಾಸಂಘ ಎಂದು

ಕರೆಯುತ್ತಿದ್ದರು.

ಕರೀಂಖಾನರು ಸಕಲೇಶಪುರವನ್ನು ಬಿಟ್ಟು ಹೋದ ನಂತರ ಜೊತೆಯಲ್ಲಿದ್ದ ಸಾರಂಗ ವಿಶ್ವಕಲಾನಿಕೇತನ ಎಂಬ ಸಂಸ್ಥೆಯನ್ನು ಕಟ್ಟಿದ್ದರು. ಸಾರಂಗರು ಕೆಲವು ನಾಟಕಗಳನ್ನು ರಚಿಸಿ ನಿರ್ದೇಶಿದರು. ಮತ್ತೆ ಸಹೋದರ ಕಲಾಸಂಘದ ಗೆಳೆಯರೆಲ್ಲ ಕೂಡಿ ಮಲ್ನಾಡ್ ಕಲಾಸಂಘ ಎಂಬ ನಾಟಕ ತಂಡವನ್ನು ಕಟ್ಟಿಕೊಂಡು. ಪ್ರದರ್ಶನ ಮಾಡತೊಡಗಿದರು. 'ಷಹಜಹಾನ್' ಹಾಗೂ 'ಎಚ್ಚಮ ನಾಯಕ' ಈ ತಂಡದ ಜನಪ್ರಿಯ ನಾಟಕಗಳು. ಇವರು ಕರ್ನಾಟಕದ ಹಲವು ಕಡೆ ಸಂಚರಿಸಿ ಎಪ್ಪತ್ತಕ್ಕೂ ಹೆಚ್ಚು ಪ್ರದರ್ಶನ ನೀಡಿದರು. ಈ ತಂಡಕ್ಕೂ ರಂಗ ಸಜ್ಜಿಕೆ ವಸ್ತ್ರಾಲಂಕಾರ ಇತ್ಯಾದಿಗಳು ಕುಂದಾಪುರದ ಬುಡಾನ್ ಸಾಬರದ್ದೇ ಆಗಿತ್ತು.

ಹೀಗೆ ಆಫ್ಘಾನಿಸ್ಥಾನ ಯೋಧನೊಬ್ಬ ಭಾರತಕ್ಕೆ ಬಂದು ದಕ್ಷಿಣ ಭಾರತದಲ್ಲಿ ನೆಲೆಸಿದ್ದು. ಅದರಲ್ಲೂ ಕರ್ನಾಟಕದಲ್ಲಿ ನೆಲೆಸಿ ಇಲ್ಲಿನ ಸಂಸ್ಕೃತಿಯಲ್ಲಿ ಒಂದಾದದ್ದು. ಅವರ ಮಕ್ಕಳು ಈ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದು. ಇಲ್ಲಿನ ಕಲೆ, ಸಾಹಿತ್ಯ, ಜಾನಪದ, ಹಾಗೂ ಜನಜೀವನವನ್ನು ಸೌಹಾರ್ದತೆಯ ನೆಲೆಯಲ್ಲಿ ಶ್ರೀಮಂತಗೊಳಿಸಿದ್ದು ಒಂದು ಮಹತ್ತರವಾದ ಸಂಗತಿ. ಕರೀಂಖಾನ್ ಅದನ್ನು ಇನ್ನಷ್ಟು ಎತ್ತರ ಮತ್ತು ವಿಸ್ತಾರಕ್ಕೆ ಒಯ್ದರು. ಅವರು ಮದುವೆಯಾಗದೇ ಉಳಿದು ಕೊನೆಯವರೆಗೂ ಈ ನೆಲದ ಸಾಂಸ್ಕೃತಿಕ ಶ್ರೀಮಂತಿಕೆಗೆ ಹಾಗೂ ಸೌಹಾರ್ದಕ್ಕಾಗಿ ದುಡಿದರು. ಎಸ್.ಕೆ. ಕರೀಂಖಾನ್ ಹಾಸನ ಜಿಲ್ಲೆಯ ಸಾಮರಸ್ಯ ಪರಂಪರೆಯ ಭದ್ರ ನೆಲಗಟ್ಟಿಗೆ ಕಾರಣರಾದವರಲ್ಲಿ ಬಹುಮುಖ್ಯರು.

ಗೊರೂರು ರಾಮಸ್ವಾಮಿ ಐಯ್ಯಂಗಾರ್: ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ೧೯೦೪ರಲ್ಲಿ ಹಾಸನ ಜಿಲ್ಲೆಯ ಗೊರೂರು

ಗ್ರಾಮದಲ್ಲಿ ಜನಿಸಿದರು. ಅವರ ತಂದೆ ಶ್ರೀನಿವಾಸ ಅಯ್ಯಂಗಾರ್, ತಾಯಿ ಲಕ್ಷ್ಮಮ್ಮ. ತಮ್ಮ ಹಳ್ಳಿಯಲ್ಲಿ ಲೋಯರ್ ಸೆಕೆಂಡರಿ ಶಿಕ್ಷಣವನ್ನು ಮುಗಿಸಿದ ಗೊರೂರರು ಹಾಸನದ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಗಾಂಧೀಜಿಯವರ ಅಸಹಕಾರ ಚಳುವಳಿಯಿಂದ ಆಕರ್ಷಿತರಾಗಿ ಶಿಕ್ಷಣಕ್ಕೆ ವಿದಾಯ ಹೇಳಿದರು. ಅನಂತರ ಅವರು ಗಾಂಧೀಜಿಯ ಆಶ್ರಮವನ್ನು ಸೇರಿ, ಗುಜರಾತಿನ ವಿದ್ಯಾಪೀಠದ ವಿದ್ಯಾರ್ಥಿಯಾದರು. ಬಳಿಕ ಮದ್ರಾಸಿನ 'ಲೋಕಮಿತ್ರ' ಮತ್ತು 'ಭಾರತಿ' ಪತ್ರಿಕೆಗಳ ಕನ್ನಡ ಸಮಾಚಾರ ಲೇಖಕರಾಗಿ ಸ್ವಲ್ಪಕಾಲ ಕೆಲಸಮಾಡಿ, ಕೆಂಗೇರಿಯ ಗುರುಕುಲಾಶ್ರಮವನ್ನು ಸೇರಿ ಅಲ್ಲಿನ ಕೆಲಸವನ್ನು ಗೊರೂರರು ಶ್ರದ್ಧೆಯಿಂದ ನಿರ್ವಹಿಸಿದರು. ಆ ನಂತರ ಬೆಂಗಳೂರಿನ ಅಖಿಲ ಭಾರತ ಚರಕ ಸಂಘದ ಖಾದಿ ವಸ್ತ್ರಾಲಯದ ಸಂಚಾಲಕರಾದರು. ಅಲ್ಲಿಯೇ ಅವರ ಸಾಹಿತ್ಯ ಸೇವೆ ಮೊದಲಾಯಿತು. ೧೯೩೩ರಲ್ಲಿ ಗೊರೂರರು ತಮ್ಮ ಗ್ರಾಮಕ್ಕೆ ಮರಳಿ, ಮೈಸೂರು ಗ್ರಾಮ ಸೇವಾಸಂಘವನ್ನು ಸ್ಥಾಪಿಸಿ, ಖಾದಿ ಪ್ರಚಾರ, ದಲಿತರಿಗಾಗಿ ದುಡಿಯುವುದು, ವಯಸ್ಕರ ಶಿಕ್ಷಣ, ಗ್ರಾಮ ಕೈಗಾರಿಕೆಗಳು ಮುಂತಾದ ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಿದರು. ೧೯೪೨ರ 'ಚಲೇ ಜಾವ್' ಚಳವಳಿಯಲ್ಲಿ ಅವರು ಭಾಗವಹಿಸಿ, ಜೈಲುವಾಸವನ್ನು ಅನುಭವಿಸಿದರು. ಸ್ವಾತಂತ್ರ್ಯ ಬಂದ ಮೇಲೆ ಮೈಸೂರಿನಲ್ಲಿ ಪ್ರಜಾಸರ್ಕಾರ ಸ್ಥಾಪನೆಗಾಗಿ ನಡೆದ ಚಳವಳಿಯಲ್ಲೂ ಭಾಗವಹಿಸಿದರು.

ಅದೇ ಸಮಯದಲ್ಲಿ ಗೊರೂರರ ಮಗ ರಾಮಚಂದ್ರ ಇದೇ ಚಳುವಳಿಯಲ್ಲಿ ಭಾಗವಹಿಸುತ್ತಿದ್ದರು. ಅವರು ತುಮಕೂರಿನಲ್ಲಿ ಪೊಲೀಸರ ಗುಂಡೇಟಿಗೆ ಬಲಿಯಾದರು.

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಸಾಹಿತ್ಯ

ಸೃಷ್ಟಿ ಸಮೃದ್ಧವಾದುದು. ಪ್ರಬಂಧ, ಕಥೆ, ಕಾದಂಬರಿ, ಪ್ರವಾಸ ಕಥನ, ವಿಮರ್ಶೆ, ಜೀವನ ಚಿತ್ರ, ಭಾಷಾಂತರ –ಹೀಗೆ ಅನೇಕ ಪ್ರಕಾರಗಳಲ್ಲಿ ಅವರು ಬರೆದಿದ್ದಾರೆ.

ಗೊರೂರು ಗ್ರಾಮ, ಹೇಮಾವತಿ ನದಿ –ಈ ಎರಡೂ ಗೊರೂರರ ಸಾಹಿತ್ಯದಿಂದ ಚಿರಸ್ಥಾಯಿಯಾದವು

ಗಾಂಧೀವಾದಿ ಗೊರೂರರ ಜಾನಪದ ಪ್ರಜ್ಞೆ ಅದ್ಭುತವಾದುದು. "ನಾನು ಸಾಹಿತಿಗಿಂತ ಹೆಚ್ಚಾಗಿ ಜನಸಾಮಾನ್ಯರ ಮನುಷ್ಯ" ಎಂದು ಅವರು ಯಾವಾಗಲೂ ಹೇಳುತ್ತಿದ್ದರು.

"ಜಾನಪದದ ಗುಣಗಳನ್ನೂ, ಶಕ್ತಿಯನ್ನೂ ಹೆಚ್ಚು ಹೆಚ್ಚು ನೋಡಿದಂತೆ, ಭಾರತವನ್ನು ಆಧುನಿಕ ನಾಗರಿಕತೆಯ ಸರ್ವನಾಶದಿಂದ ತಪ್ಪಿಸಬಲ್ಲಂತದ್ದು ಜಾನಪದವೊಂದೇ ಎಂಬ ನಂಬಿಕೆ ದೃಢವಾಗುತ್ತದೆ". ಎಂದು ಅವರು ಹೇಳಿದ್ದಾರೆ.

ಈ ಜಾನಪದ ಮತ್ತು ಜನಪರ ದೃಷ್ಟಿಯ ಹಿನ್ನೆಲೆಯಲ್ಲಿ ಅವರು ಸಾಹಿತ್ಯ ರಚಿಸಿದ್ದಾರೆ. ಅವರ ಎಲ್ಲಾ ಬರಹಗಳಲ್ಲೂ ಹಾಸ್ಯಪ್ರಜ್ಞೆ ಯಶಸ್ವಿಯಾಗಿ ಕೆಲಸ ಮಾಡಿದೆ.

ಗೊರೂರರು ತಮ್ಮ ಬರಹಗಳಲ್ಲಿ ಈಗ ಕಾಣಸಿಗದ ಅಥವಾ ತ್ವರಿತವಾಗಿ ಮರೆಯಾಗುತ್ತಿರುವ ಹಳ್ಳಿಯ ಬದುಕನ್ನು ಅದರ ಎಲ್ಲ ಮುಖಗಳೊಡನೆ ಚಿತ್ರಿಸುವಲ್ಲಿ ಸಫಲರಾಗಿದ್ದಾರೆ. ಗ್ರಾಮೀಣ ಜೀವನದಲ್ಲಿ ಅವರು ಒಂದಾಗಿ ಬಾಳಿದ್ದರಿಂದ ಇದು ಸಾಧ್ಯವಾಗಿದೆ. ಅವರ ಕೃತಿಗಳಲ್ಲಿ ಕಂಡು ಬರುವ ಪಾತ್ರ ವೈವಿಧ್ಯ ಅಪಾರವಾದುದು; ಅಲ್ಲಿ ಗ್ರಾಮದ ಎಲ್ಲ ವೃತ್ತಿಗಳ, ಎಲ್ಲ ಜಾತಿಗಳ ಜನರೂ ಇದ್ದಾರೆ. 'ನಮ್ಮ ಎಮ್ಮೆಗೆ ಮಾತು ತಿಳಿಯುವುದೇ?' ಎಂಬ ಪ್ರಬಂಧದಲ್ಲಿ ಪ್ರಾಣಿ ಪಾತ್ರವೂ ಉಂಟು. ಆದರೆ ಜಾತಿ–ಮತ–ಭೇದಗಳನ್ನು ಮೀರಿ ಎಲ್ಲರನ್ನೂ ಒಗ್ಗೂಡಿಸುವ ಕೆಲವು ಸೂತ್ರಗಳನ್ನು ಗೊರೂರರು

ಗುರುತಿಸಿ, ಅವುಗಳಿಗೆ ಒತ್ತು ಕೊಡುವುದರ ಮೂಲಕ ಸಾಮರಸ್ಯಯುತವಾದ ಒಂದು ಸಮಷ್ಟಿಯ ಚಿತ್ರವನ್ನು ಮೂಡಿಸುತ್ತಾರೆ.

ಅವರ ಬರಹಗಳು ಗ್ರಾಮಜೀವನದಲ್ಲಿ ಮಹತ್ವದ ಪಾತ್ರವಹಿಸುವ ಉತ್ಸವಗಳು, ಹಬ್ಬ ಹರಿದಿನಗಳು, ಜನಪದ ಕಲೆಗಳು, ಜನತೆಯಲ್ಲಿ ರೂಢವಾಗಿರುವ ಆಚಾರ ವಿಚಾರ, ನಂಬಿಕೆ ನಡಾವಳಿಗಳು ಎಲ್ಲವನ್ನೂ ಯಥಾವತ್ತಾಗಿ, ಸಜೀವವಾಗಿ ಸೆರೆ ಹಿಡಿದಿವೆ. ಗ್ರಾಮೀಣ ಸಂಸ್ಕೃತಿಯ ಸೊಗಡನ್ನು ಅಲ್ಲಿ ಕಾಣಬಹುದು. "ಗೊರೂರರ ಕೃತಿಗಳು ಬರು ಬರುತ್ತ ಹಳ್ಳಿಗಳ ಮಹಾಭಾರತಗಳೇ ಆಗುತ್ತಿವೆ" ಎಂಬ ವಿ.ಕೃ. ಗೋಕಾಕರ ಮಾತೊಂದು ಉಲ್ಲೇಖನೀಯವಾಗಿದೆ.

ಗೊರೂರರ ಹಾಸ್ಯ ಮನೋಧರ್ಮದ ವ್ಯಕ್ತಿತ್ವದಲ್ಲಿ ಬಾಳಿನ ಬಗೆಗೆ ಉತ್ಸಾಹವಿದೆ, ನಿಷ್ಠೆಯಿದೆ. "ಬೈಲಹಳ್ಳಿ ಸರ್ವೆ'ಯ ಕಥೆಯಲ್ಲಿ, ಸರ್ವೆ ಮುಗಿದ ಮೇಲೆ ಊರಿಗೆ ಹೋದ ಮೋಜಿನಿದಾರರು ನಾಣಿಗೆ ಬರೆದ ಪತ್ರದಲ್ಲಿ ಕೊನೆಯಲ್ಲಿ ಹೀಗೆನ್ನುತ್ತಾರೆ "ನನ್ನ ಇಷ್ಟು ವರ್ಷದ ಅನುಭವದಲ್ಲಿ ನೂರಾರು ಹಳ್ಳಿಗಳನ್ನು ನೋಡಿದ್ದೇನೆ, ಅಳೆದಿದ್ದೇನೆ. ಎಲ್ಲಾ ಕಡೆಯೂ ಒಂದೇ ಸಮ, ಒಂದೇ ಗೋಳು, ಒಂದೇ ದಾರಿದ್ರ್ಯ, ಒಂದೇ ಕೊಳಕು, ಅಜ್ಞಾನ, ಬೈಲಹಳ್ಳಿಯಲ್ಲೂ ಅದೇ ಅಜ್ಞಾನ, ಅದೇ ಗೋಳು. ಆದರೆ ನಿಮ್ಮ ಉತ್ಸಾಹದಿಂದ ಆ ಗೋಳು ತಲೆ ತಗ್ಗಿಸಿತು. ಅಳುವುದಕ್ಕೆ ಸಾವಿರ ಕಾರಣವಿದ್ದೂ ನಗುವುದಕ್ಕೆ ಒಂದು ಕಾರಣವಿದ್ದರೆ ಆ ಕಾರಣವನ್ನೇ ನೀವು ಬಲಪಡಿಸಿ ನಗುತ್ತಿದ್ದೀರಿ. ನೋವು ಗೋಳುಗಳ ಹಿಂದೆ ಹೊಂಚುಹಾಕುತ್ತಿರುವ ನಗೆಯನ್ನು ಹಿಡಿಯುವುದೇ ಜೀವನದ ತಿರುಳು. ಅದೇ ನಮ್ಮ ಮುಂದಲ ಉತ್ಸಾಹಕ್ಕೆ ಕಾರಣ." ಇದು ಗೊರೂರರ ನಿಲುವೂ ಹೌದು.

ಕನ್ನಡಕ್ಕೆ ಗೊರೂರು ರಾಮಸ್ವಾಮಿ ಐಯ್ಯಂಗಾರರ ಮುಖ್ಯವಾದ ಕೊಡುಗೆಯೇನು? ಅದನ್ನು ಕುವೆಂಪು ಅವರ ನುಡಿಗಳಲ್ಲಿ ಹೀಗೆ ಸಂಗ್ರಹಿಸಬಹುದು: "ಚಾರ್ಲ್ಸ್ ಡಿಕನ್ಸ್, ಆಲಿವರ್ ಗೋಲ್ಡ್‌ಸ್ಮಿತ್, ಎ.ಜಿ. ಗಾರ್ಡಿನರ್ ಮುಂತಾದ ಇಂಗ್ಲಿಷ್ ಲೇಖಕರ ಬರವಣಿಗೆಯನ್ನು ಓದಿ, ಅಲ್ಲಿನ ವಿವಿಧ ರೀತಿಯ ಹಾಸ್ಯವನ್ನು ಚಪ್ಪರಿಸಿದ್ದ ನಮಗೆ ಕನ್ನಡದಲ್ಲಿ ಅಂಥ ಹಾಸ್ಯದ ಕೊರತೆ ದೊಡ್ಡ ಕೊರಗನ್ನೇ ಉಂಟುಮಾಡಿತ್ತು. ಆ ಅರಕೆಯನ್ನು ಹೋಗಲಾಡಿಸಿದ ಕೆಲವೇ ಲೇಖಕರಲ್ಲಿ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರರು ನಿಶ್ಚಯವಾಗಿಯೂ ಅಗ್ರಸ್ಥಾನದಲ್ಲಿದ್ದಾರೆ.

ಸಾಹಿತಿ ಗೊರೂರರು ಎಷ್ಟು ಮುಖ್ಯರೋ ಸಾಮಾಜಿಕ ವ್ಯಕ್ತಿಯಾಗಿ ಅವರು ಅಷ್ಟೇ ಮುಖ್ಯರು. ಎಲ್ಲಾ ಊರುಗಳಲ್ಲಿದ್ದಂತೆ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವವರನ್ನು, ಗಾಂಧಿ ಅನುಯಾಯಿಗಳನ್ನು ತಿರಸ್ಕಾರದಿಂದ ಕಾಣುವ ಅಪಹಾಸ್ಯ ಮಾಡುವ ಜನರೂ ಇದ್ದರು. ಗೊರೂರರು ಗಾಂಧೀಜಿಯ ಸಬರಮತಿ ಆಶ್ರಮಕ್ಕೆ ಹೋಗಿದ್ದಾಗ ಊರಿನಲ್ಲಿ ಕೆಲವರು "ರಾಮ ಸಬರಮತಿಗೆ ಹೋಗಿದ್ದಾನೆ, ಬರುವಾಗ ಸ್ವಾತಂತ್ರ್ಯ ತರುತ್ತಾನೆ" ಎಂದು ಲೇವಡಿ ಮಾಡಿದವರಿದ್ದರು. ಅವರು ದಲಿತ ಹೆಣ್ಣುಮಗಳೊಬ್ಬಳನ್ನು ಮನೆಯಲ್ಲಿಟ್ಟುಕೊಂಡು ಸಾಕಿದಾಗ ನಿಂದಿಸಿದ್ದರು. ಗೊರೂರರು ಅದನ್ನೆಲ್ಲ ಎದುರಿಸಿ ನಿಂತರು. ಮುಂದೆ ಆ ಹೆಣ್ಣು ಮಗಳ ಮದುವೆಯನ್ನೂ ತಾವೇ ಮಾಡಿದರು.

ಅವರ ಬರಹಗಳ ಎಲ್ಲ ಪಾತ್ರಗಳೂ ಬದುಕಿನಿಂದ ಎದ್ದುಬಂದವರೇ. ಅವರದೇ ರಚನೆಯ ಪಾತ್ರ ಶಾಲು ಸಾಬಿಯ ಹಾಗೆ ಗೊರೂರು ಹಾಸನದ ಸಾಮಾನ್ಯರ ನಡುವಿನ ಸೌಹಾರ್ದ ಬದುಕಿನ ಸಂಕೇತವಾಗಿ ಉಳಿದಿದ್ದಾರೆ.

ಎಚ್.ಬಿ. ಜ್ವಾಲನಯ್ಯ: ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಭವ್ಯ ಪರಂಪರೆಯಿದೆ. ಕನ್ನಡ ಭಾಷೆಯ ವಿಶಿಷ್ಟ, ವಿಭಿನ್ನ, ವೈವಿಧ್ಯಗಳ ತವರು ಹಾಸನ. ನನ್ನ ಉಸಿರಿರುವ ತನಕ ಈ ನಗರದ ಉನ್ನತಿಗೆ, ಇಲ್ಲಿನ ಕಲೆ, ಸಾಹಿತ್ಯ ಪರಂಪರೆಯ ಉಳಿವಿಗೆ ಹೋರಾಡುತ್ತೇನೆಂದು ಹೇಳಿದವರು ಎಚ್.ಬಿ. ಜ್ವಾಲನಯ್ಯ. ಅವರು ನುಡಿದಂತೆ ನಡೆದು ಸಾಧಿಸಿದ ವ್ಯಕ್ತಿ.

ಜ್ವಾಲನಯ್ಯನವರ ತಂದೆತಾಯಿ ಸಕಲೇಶಪುರ ತಾಲ್ಲೂಕಿನ ಬೆಳಗೋಡಿನವರು. ಎಚ್.ಪಿ. ಬ್ರಹ್ಮದೇವಯ್ಯ ಮತ್ತು ಪದ್ಮಾವತಮ್ಮ ದಂಪತಿಗಳ ಹಿರಿಯ ಮಗ ಎಚ್.ಬಿ. ಜ್ವಾಲನಯ್ಯರವರು. ಸರಳ, ಸಜ್ಜನ, ಆದರ್ಶವ್ಯಕ್ತಿ ಎಂದು ಹೆಸರಾದವರು.

೧೯೪೨ರಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಜ್ವಾಲನಯ್ಯ ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದರು. ಕ್ವಿಟ್ ಇಂಡಿಯಾ ಚಳವಳಿ ಸಂದರ್ಭದ ಇವರು ತಮ್ಮ ಮಿತ್ರರೊಡಗೂಡಿ 'ಭಗತ್ ಪಾರ್ಟಿ' ಎಂಬ ಯುವಕರ ತಂಡವನ್ನು ಕಟ್ಟಿ ಹೋರಾಡಿದರು.

ಜೈನ ಧರ್ಮದವರಾದ ಜ್ವಾಲನಯ್ಯ ಜಾತ್ಯಾತೀತವಾದಿಯಾಗಿದ್ದರು. ಉತ್ತಮ ರೈತಾಪಿ ಜೀವನದ ಅನುಭವವಿದ್ದ ಜ್ವಾಲಯ್ಯನವರು ಎಲ್.ಟಿ ಕಾರ್ಲೆಯವರೊಂದಿಗೆ ಸೇರಿ ಹಾಸನದಲ್ಲಿ ದನಗಳ ಜಾತ್ರೆ, ಕೈಗಾರಿಕೆ ಮತ್ತು ವ್ಯವಸಾಯಕ್ಕೆ ಸಂಬಂಧಿಸಿದ ವಸ್ತು ಪ್ರದರ್ಶನ ಪ್ರಾರಂಭವಾಗಲು ಕಾರಣರಾದರು. ಮುಂದೆ ಹಾಸನದ ಪಾಲಿಗೆ ಕೈಗಾರಿಕಾ ಕ್ರಾಂತಿಕಾರರಾದರು.

ಇವರನ್ನು ಹಾಸನದ ಎಲ್ಲಾ ಜಾತಿ ಧರ್ಮಗಳ ಜನರು ಜ್ವಾಲಣ್ಣ ಎಂದು ಕರೆಯುತ್ತಿದ್ದರು. ಒಳ್ಳೆಯ ಕ್ರೀಡಾಪಟುವಾಗಿದ್ದ ಜ್ವಾಲನಯ್ಯ ಕುಸ್ತಿಪಟುವಾಗಿ, ಈಜುಗಾರನಾಗಿ, ಬ್ಯಾಡ್ಮಿಂಟನ್ ಆಟಗಾರನಾಗಿ ಹೆಸರಾಗಿದ್ದರು. ಹಾಸನದಲ್ಲಿ ಎಲ್ಲ ಬಗೆಯ ಕ್ರೀಡೆಗಳ

ಅಭಿವೃದ್ಧಿಗಾಗಿ ಕೆಲಸ ಮಾಡಿದರು.

ಸಾಮಾಜಿಕವಾಗಿ ಸದಾ ಮುಂಚೂಣಿಯಲ್ಲಿದ್ದ ಜ್ವಾಲನಯ್ಯ ಅವರು ಜನರ ಒತ್ತಾಯಕ್ಕೆ ಮಣಿದು ೧೯೫೨-೫೩ರಲ್ಲಿ ಮೊದಲ ಸಲ ಪುರಸಭಾ ಅಧ್ಯಕ್ಷರಾಗಿದ್ದರು. ಇವರ ಅಧಿಕಾರವಧಿಯಲ್ಲಿ ಬೀರನಹಳ್ಳಿ ಕೆರೆಯ ಜೀರ್ಣೋದ್ಧಾರ, ದೇವಿಗೆರೆಗೆಯ ಅಭಿವೃದ್ಧಿ, ಹೀಗೆ ಹಲವಾರು ಜನಪರ ಕೆಲಸಗಳನ್ನು ಮಾಡಿದರು. ಇವರ ಕರ್ತವ್ಯ ನಿಷ್ಠೆ, ಸಮಾಜ ಪರ ಚಿಂತನೆಗಳು, ನಿಸ್ವಾರ್ಥ ರಾಜಕಾರಣ ೧೯೭೪-೭೫ರಲ್ಲಿ ಇವರು ಮತ್ತೊಮ್ಮೆ ಪುರಸಭಾ ಅಧ್ಯಕ್ಷರಾಗಿ ಆಯ್ಕೆಯಾಗಲು ಕಾರಣವಾಯಿತು.

ಹಾಸನ ನಗರದಲ್ಲಿ ಕುಡಿಯುವ ನೀರಿನ ತೊಂದರೆಯಿತ್ತು. ಹೇಮಾವತಿ ನದಿಯಿಂದ ನೀರು ಸರಬರಾಜು ಮಾಡುವ ಬೃಹತ್ ಯೋಜನೆಯನ್ನು ಕೈಗೊಂಡರು. ಆಗಿನ ಕೇಂದ್ರ ಸರಕಾರದ ಗಮನ ಸೆಳೆದು ಅನುದಾನ ತರುವಲ್ಲಿ ಯಶಸ್ವಿಯಾದರು.

ಹಾಸನ ನಗರಕ್ಕೆ ಒಳಚರಂಡಿ ವ್ಯವಸ್ಥೆ, ವಿಶಾಲವಾದ ಸಿಮೆಂಟ್ ರಸ್ತೆಗಳು, ಪಕ್ಕದಲ್ಲಿ ಸಾಲುಮರಗಳು, ಪುರಸಭಾ ಕಟ್ಟಡಗಳು, ಮಹಾರಾಜ ಉದ್ಯಾನವನ, ಈಜುಕೊಳದ ನಿರ್ಮಾಣ ಯೋಜನೆ, ಸುಭಾಷ್ ಚೌಕ, ಹಳೆಯ ಸಾರಿಗೆ ಬಸ್ ನಿಲ್ದಾಣ, ಮಾರುಕಟ್ಟೆ ಸಂಕೀರ್ಣಗಳನ್ನು ನಿರ್ಮಿಸಿದ್ದು, ಇವರ ಆಡಳಿತದ ಮಹತ್ತರ ಅಂಶಗಳಾಗಿವೆ. ಮುಸ್ಲಿಂ-ಕ್ರೈಸ್ತರ ಸ್ಮಶಾನಗಳಿಗೆ ಜಾಗ ಕಲ್ಪಿಸಿದ್ದು, ಪೌರ ಕಾರ್ಮಿಕರಿಗೆ ನೆಲೆ ಒದಗಿಸಿದ ಕೀರ್ತಿ ಜ್ವಾಲನಯ್ಯನವರಿಗೆ ಸಲ್ಲುತ್ತದೆ.

ಇವೆಲ್ಲ ಕೆಲಸಗಳಿಂದ ಜ್ವಾಲನಯ್ಯನವರನ್ನು 'ಹಾಸನದ ಮಿರ್ಜಾ ಸಾಹೇಬರು' ಎಂದು ಕರೆಯುವಂತಾಯಿತು.

೧೯೬೬ರಲ್ಲಿ ರಾಜಗೋಪಾಲಚಾರಿಯವರ ಸ್ವತಂತ್ರ ಪಕ್ಷವನ್ನು

ಸೇರಿ ಸ್ಪರ್ಧಿಸಿ ನಾಲ್ಕನೆಯ ವಿಧಾನ್‌ಸಭಾ ಸದಸ್ಯರಾಗಿ ಆಯ್ಕೆಯಾದರು.

೧೯೬೯ರಲ್ಲಿ ಜ್ವಾಲನಯ್ಯನವರನ್ನು ಹಾಸನ ಜಿಲ್ಲಾ ಸಾಹಿತ್ಯ ಪರಿಷತ್ತಿನ ಪ್ರಥಮ ಅಧ್ಯಕ್ಷರಾದರು.

ಕನ್ನಡ ಭಾಷಾಭಿಮಾನಿಯೂ, ಸಾಹಿತಿಯೂ, ನಾಟಕಕಾರರು, ನಟರೂ ಆಗಿದ್ದ ಜ್ವಾಲನಯ್ಯನವರು ಸುಮಾರು ಎರಡು ದಶಕಗಳ ಕಾಲ ಸಾಹಿತ್ಯ ಪರಿಷತ್ತನ್ನು ಕಟ್ಟಿ ಬೆಳೆಸಿದರು.

೧೯೭೧ರಲ್ಲಿ ಚನ್ನರಾಯಪಟ್ಟಣದಲ್ಲಿ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಅಧ್ಯಕ್ಷತೆಯಲ್ಲಿ ಪ್ರಥಮ ಜಿಲ್ಲಾ ಸಮ್ಮೇಳನವನ್ನು ಯಶಸ್ವಿಯಾಗಿ ನೆರವೇರಿಸಿದರು. ೧೯೮೧ರಲ್ಲಿ ಹಾಸನದಲ್ಲಿ ನಡೆದ ೨ನೆಯ ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ಡಾ. ಎಸ್.ಎಲ್. ಭೈರಪ್ಪನವರ ಅಧ್ಯಕ್ಷತೆಯಲ್ಲಿ, ೧೯೮೫ರಲ್ಲಿ ಅರಸೀಕೆರೆ ತಾಲ್ಲೂಕಿನ ಮಾಲೆಕಲ್ಲು ತಿರುಪತಿಯಲ್ಲಿ ನಡೆದ ಮೂರನೆಯ ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ಡಾ. ಎಸ್.ಕೆ. ಕರೀಂಖಾನ್ ಅವರ ಅಧ್ಯಕ್ಷತೆಯಲ್ಲಿ ನಡೆಸಿದ ಕೀರ್ತಿ ಇವರದು.

೧೯೭೬ರಲ್ಲಿ ಜಿಲ್ಲಾ ಮಟ್ಟದ ಬೃಹತ್ ಜಾನಪದ ಕಲಾಮೇಳವನ್ನು ನಡೆಸಿದರು. ಇವರ ಅವಿರತ ಪ್ರಗತಿಪರ ಹೋರಾಟದ ಫಲವಾಗಿ ೧೯೮೬ರವರೆಗೂ ಹಾಸನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಆಧ್ಯಕ್ಷರಾಗಿ ದುಡಿದರು. ಸಾಹಿತ್ಯ ಭವನಕ್ಕೆ ನಿವೇಶನ ದೊರಕಿಸಿಕೊಟ್ಟರು. ಇವರ ಕಾರ್ಯತತ್ಪರತೆಯಿಂದ ರಾಜ್ಯ ಸಾಹಿತ್ಯ ವಲಯದಲ್ಲಿ ಗುರುತಿಸಿಕೊಂಡ ಇವರು ೧೯೮೯ರಲ್ಲಿ ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆಗೊಂಡು ಸೇವೆ ಸಲ್ಲಿಸಿದರು. ಇವರ ಕಾಲದಲ್ಲಿಯೇ ೧೯೮೭ ಕಲ್ಬುರ್ಗಿಯಲ್ಲಿ ಡಾ. ಸಿದ್ಧಯ್ಯ ಪುರಾಣಿಕರ ಅಧ್ಯಕ್ಷತೆಯಲ್ಲಿ ೫೮ನೇ ಅಖಿಲ

ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಜರುಗಿತು. ಹಾಗೆಯೇ ಹಲವಾರು ಜಿಲ್ಲಾ ಸಾಹಿತ್ಯ ಸಮ್ಮೇಳನಗಳು ನಡೆದವು. ೧೯೯೩ರಲ್ಲಿ ಹಾಸನದಲ್ಲಿ ನಡೆದ ನಾಲ್ಕನೆಯ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಇವರನ್ನೇ ಸಾಹಿತ್ಯಾಭಿಮಾನಿಗಳು ಆರಿಸಿದರು.

ಬಹುಮುಖ ಪ್ರತಿಭೆಯ ಜ್ವಾಲನಯ್ಯನವರು ಸಾಹಿತ್ಯ ಕ್ಷೇತ್ರದಲ್ಲೂ ಕೆಲಸ ಮಾಡಿದ್ದಾರೆ. ಮಹಾಶಿಲ್ಪಿ, ರಾಜಲಾ, ಅಮಿತಾ, ಮಹಾಪರಿವರ್ತನೆ, ರಾಣಿ ರತ್ನಾಜಿ, ಪುರಸ್ಕಾರ, ನಯನ ಬಂಧನ, ಆರ್ಯ ಚಾಣಕ್ಯ ಮುಂತಾದ ಸುಮಾರು ೧೭ ನಾಟಕಗಳನ್ನು ಇವರು ರಚಿಸಿದರು. ಸಂಕೇತ, ಇವರ ಕವನ ಸಂಕಲನ. ಇವರ 'ಮಹಾಶಿಲ್ಪಿ' ನಾಟಕ ಮುಂದೆ ಇವರ ನಿರ್ದೇಶನದಲ್ಲಿಯೇ ಚಲನಚಿತ್ರವಾಯಿತು. ಜ್ವಾಲನಯ್ಯನವರೇ ಅದರಲ್ಲಿ ಅಭಿನಯಿಸಿದರು. ಆಕಾಶವಾಣಿಯಲ್ಲಿ ಇವರ ಹಲವಾರು ನಾಟಕಗಳು ಪ್ರಸಾರವಾಗಿವೆ. ಕನ್ನಡದ ಜೊತೆಗೆ ಉತ್ತಮ ಹಿಂದಿ ಪಾಂಡಿತ್ಯ ಹೊಂದಿದ್ದ ಇವರು ಸ್ವತಃ ತಮ್ಮ ನಾಟಕಗಳನ್ನು ಹಿಂದಿಗೆ ಅನುವಾದಿಸಿದ್ದಾರೆ. ಇವರ ಬಹುಪಾಲು ನಾಟಕಗಳು ಐತಿಹಾಸಿಕ ನಾಟಕಗಳು. ಅವುಗಳಲ್ಲಿ ಅಮಿತ, ಸಾಮ್ರಾಟ ಅಶೋಕ ಪ್ರಮುಖವಾದವುಗಳು. 'ದಿವ್ಯಧ್ವನಿ' ಇವರ ಸಂಪಾದಿತ ಕೃತಿ. 'ಜೈನ ಸಾಹಿತ್ಯದಲ್ಲಿ ನಾಟಕಗಳು' ಇವರ ಪ್ರಬಂಧ ಲೇಖನ. ಇಷ್ಟೇ ಅಲ್ಲದೆ ನೂರಾರು ಚಿಂತನ, ಭಾಷಣ ಕಾರ್ಯಕ್ರಮಗಳನ್ನು ಆಕಾಶವಾಣಿಯಲ್ಲಿ ಪ್ರಸ್ತುತಪಡಿಸಿದ್ದಾರೆ.

ಇವರು ನಾಟಕಾರರಷ್ಟೇ ಅಲ್ಲದೇ ಉತ್ತಮ ನಟರೂ ಆಗಿದ್ದರು. ಇವರಿಗೆ ಬರವಣಿಗೆಯ ಜೊತೆಗೆ, ಅಭಿನಯ, ನಿರ್ದೇಶನಗಳು ಸಿದ್ಧಿಸಿದ್ದವು. ದುರ್ಯೋಧನ, ಶಕುನಿ ಪಾತ್ರಗಳು ಇವರಿಗೆ ಖ್ಯಾತಿ ತಂದವು.

ಹಾಸನದ ದನಗಳ ಜಾತ್ರೆ, ವಸ್ತುಪ್ರದರ್ಶನ, ಜಾತ್ರಾ ನಾಟಕೋತ್ಸವ, ಗಣಪತಿ ಉತ್ಸವ ಸಮಿತಿ ಹೀಗೆ ಅವರ ಪಾತ್ರವಿಲ್ಲದ ಸಂಗತಿಗಳೇ ಹಾಸನದಲ್ಲಿ ಇಲ್ಲ. ಹಾಸನದ ಗಣಪತಿ ಉತ್ಸವಕ್ಕೆ ಅಂದಿನ ಎಲ್ಲ ಖ್ಯಾತ ಸಂಗೀತಕಾರರೂ ಹರಿಕಥೆ ದಾಸರೂ ಬಂದು ಕಾರ್ಯಕ್ರಮ ನಡೆಸಿದ್ದಾರೆ. ಪಿಟೀಲು ಚೌಡಯ್ಯವರೂ ಹಾಸನದಲ್ಲಿ ಕಾರ್ಯಕ್ರಮ ನೀಡಿದ್ದರು.

ಸಮುದಾಯದ ಪ್ರಗತಿ ಶಿಕ್ಷಣ ಕ್ಷೇತ್ರದಿಂದಲೇ ಎಂದು ಜ್ವಾಲನಯ್ಯನವರು ಹೇಳುತ್ತಿದ್ದರು. ಅಂದಿನ ಕಾಲದಲ್ಲಿಯೇ ಜನರಿಗೆ ಶಿಕ್ಷಣ ಮೂಲಭೂತ ಹಕ್ಕಾಗಬೇಕೆಂದು ಹೋರಾಡಿದರು. ಅಲ್ಲದೆ ಅನೇಕ ಶಿಕ್ಷಣ ಸಂಸ್ಥೆಗಳ ಉದಯಕ್ಕೆ ಕಾರಣರಾದರು. ಈಗಿನ 'ಭಾರತಿ ವಿದ್ಯಾಮಂದಿರ' ಜ್ವಾಲನಯ್ಯನವರ ಕನಸಿನ ಕೂಸು.

ಶಿಕ್ಷಣ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆ ಅಪಾರವಾದುದು. ಹಾಸನಕ್ಕೆ ನೂತನ ಬಾಲಿಕಾ ಪ್ರೌಢಶಾಲೆ, ಶಿಕ್ಷಕರ ತರಬೇತಿಯ ಕಾಲೇಜು, ಸಂಜೆ ಕಾಲೇಜು, ಬಿ.ಇಡಿ ಕಾಲೇಜು ಮುಂತಾದವುಗಳನ್ನು ಸರ್ಕಾರದಿಂದ ಮಂಜೂರು ಮಾಡಿಸಿದರು.

ಜ್ವಾಲನಯ್ಯನವರು ಅರಕಲಗೂಡು ವರದರಾಜುಲು ಕಾಂತಮ್ಮ ಮಹಿಳಾ ಕಾಲೇಜು ಹಾಗೂ ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಯ ಸದಸ್ಯರಾಗಿ ಇವುಗಳ ಅಭಿವೃದ್ಧಿಗಾಗಿ ಶ್ರಮಿಸಿದ್ದಾರೆ.

ಎಚ್.ಬಿ. ಜ್ವಾಲನಯ್ಯನವರು ಯಾವುದೇ ಒಂದು ಕ್ಷೇತ್ರಕ್ಕೆ ಸೀಮಿತರಲ್ಲ. ಸಾಮಾಜಿಕ, ರಾಜಕೀಯ, ಶಿಕ್ಷಣ, ಸಾಹಿತ್ಯ, ಸಂಘಟನೆ, ರಂಗಭೂಮಿ ಹೀಗೆ ಹಲವಾರು ಕ್ಷೇತ್ರಗಳ ಸಾಧಕ, ಛಲಗಾರ, ಹೋರಾಟಗಾರ. ಹಾಸನ ಜಿಲ್ಲೆಯ ಸೌಹಾರ್ದ ಪರಂಪರೆಯ ಬಹುದೊಡ್ಡ ವ್ಯಕ್ತಿ ಎಚ್.ಬಿ. ಜ್ವಾಲನಯ್ಯ.

ಸಕಲೇಶಪುರದ ಶಾಪ್ ಸಿದ್ಧೇಗೌಡರು: ಸಕಲೇಶಪುರದಲ್ಲಿ ಇನ್ನೊಂದು ಕುಟುಂಬ ಶಾಪ್ ಸಿದ್ಧೇಗೌಡರದ್ದು. ಅವರ ಕುಟುಂಬಕ್ಕೆ ಶಾಪ್ ಕುಟುಂಬ ಹೆಸರು ಬಂದದ್ದೇ ಒಂದು ರೋಚಕ ಕಥೆ.

ಸಕಲೇಶಪುರದ ಸಿದ್ಧೇಗೌಡರು ೧೮೬೦ ರಲ್ಲಿ ಹುಟ್ಟಿದ ಸಿದ್ಧೇಗೌಡರದು ಸಾಕಷ್ಟು ಶ್ರೀಮಂತ ಮನೆತನ, ಆಗಲೇ ಸುತ್ತಮುತ್ತ ಇದ್ದಂತಹ ಬ್ರಿಟಿಷ್ ಪ್ಲಾಂಟರುಗಳ ಒಡನಾಟ. ಸಿದ್ಧೇಗೌಡರು ಸಕಲೇಶಪುರ ಉಪ್ಪಿನಂಗಡಿ ರಸ್ತೆಯ ನಿರ್ಮಾಣದ ಕಂಟ್ರಾಕ್ಟರ್ ಆಗಿದ್ದರಂತೆ. ಆಗಿ ಕಬ್ಬಿಣದ ಸೇತುವೆಗಳೆಲ್ಲ ಜರ್ಮನ್ ಇಂಜಿನಿಯರ್ ಗಳ ಉಸ್ತುವಾರಿಯಲ್ಲಿ ಆದವುಗಳಂತೆ. ಆ ಕಾಲದಲ್ಲಿ ಕಬ್ಬಿಣ ಸಾಮಗ್ರಿಯೆಲ್ಲ ಇಂಗ್ಲೆಂಡಿನಿಂದ ಬರಬೇಕಾಗಿತ್ತು.

ಸಿದ್ಧೇಗೌಡರಿಗೆ ಕಾಫಿ ವ್ಯಾಪಾರವೂ ಇತ್ತು ಅದರ ನಿಮಿತ್ತ ಮದ್ರಾಸಿಗೂ ಮಂಗಳೂರಿಗೂ ಹೋಗಿ ಬರುತ್ತಿದ್ದರು. ಆಗ ಮದ್ರಾಸಿನಲ್ಲಿ ಸ್ಪೆನ್ಸರ್ ಎಂಡ್ ಕಂಪೆನಿಯ ಸರ್ವ ಸಾಮಗ್ರಿ ಮಳಿಗೆಯನ್ನು ನೋಡಿದ ಸಿದ್ಧಗೌಡರು ೧೮೯೫ರಲ್ಲಿ ಸಕಲೇಶಪುರದಲ್ಲಿ ಅಂತದ್ದೇ ಒಂದು ಸರ್ವಸಾಮಗ್ರಿ ಮಳಿಗೆಯನ್ನು ತೆರೆದರು, ಅದಕ್ಕೆ ಸಿದ್ಧೇಗೌಡ ಎಂಡ್ ಕಂಪೆನಿ ಎಂದು ಹೆಸರಿಟ್ಟರು. ಅಲ್ಲಿ ತೋಟಗಳಿಗೆ ಬೇಕಾದ ಉಪಕರಣಗಳು, ಕಟ್ಟಡ ಸಾಮಗ್ರಿಗಳು, ಆಹಾರ ಪದಾರ್ಥ, ಚರ್ಮದ ವಸ್ತುಗಳು, ಅಡಿಗೆ ಎಣ್ಣೆ, ಮಾಂಸದ ಪದಾರ್ಥಗಳು, ಹಾಗೆಯೇ ಇತರ ಕಟ್ಲೆರಿ ಸಾಮಾನುಗಳಿಂದ ಹಿಡಿದು ಗುಂಡುಸೂಜಿಯವರೆಗೆ, ಎಲ್ಲವೂ ದೊರೆಯುತ್ತಿತ್ತು. ಇಡೀ ಸೋಮವಾರಪೇಟೆ, ಸಕಲೇಶಪುರ, ಬೇಲೂರು, ಆಲೂರು ಹೀಗೆ ಎರಡು ಮೂರು ನಾಲ್ಕು ತಾಲ್ಲೂಕಿನಲ್ಲಿ ಹರಡಿ ಹೋಗಿದ್ದ ಬ್ರಿಟಿಷ್ ಪ್ಲಾಂಟರುಗಳು ಇವರ ಗಿರಾಕಿಗಳು.

ಆಗ ಸುತ್ತ ಮತ್ತ ಹಲವರು ಸಿದ್ಧೇಗೌಡರು ಇದ್ದುದರಿಂದ

ಬ್ರಿಟಿಷರು ಇವರನ್ನು ಶಾಪ್ ಸಿದ್ಧೇಗೌಡ ಎಂದು ಕರೆಯಲಾರಂಭಿಸಿದರು. ಮುಂದೆ ಅದೇ ಪ್ರಚಲಿತವಾಯಿತು.

ಇವರು ವೀರಶೈವರಾದ್ದರಿಂದ ಮಾಂಸದ ವಸ್ತುಗಳ ಮಾರಾಟಕ್ಕೆಂದು ಮದ್ರಾಸಿನಿಂದಲೇ ಲಬ್ಬೆಯವರ (ಪಠಾಣರು) ನಾಲ್ಕು ಕುಟುಂಬಗಳನ್ನು ಕರೆತಂದರು.

ಆ ಕಾಲದಲ್ಲಿ ಮಂಗಳೂರಿನ ಕಡೆಯಿಂದ ಬರುವ ಸರಕು ಪಾಣೆಮಂಗಳೂರಿನವರೆಗೆ ದೋಣಿಯಲ್ಲಿ ಬರುತ್ತಿತ್ತು. ಅಲ್ಲಿಂದ ಎತ್ತಿನ ಗಾಡಿಗಳಲ್ಲಿ ಅದು ಶಿರಾಡಿ ಘಾಟಿಯ ಮೂಲಕ ಸಕಲೇಶಪುರಕ್ಕೆ ಬರಬೇಕಿತ್ತು. ಈ ಸರಕು ಸಾಗಣೆಗಾಗಿ ಮತ್ತು ದಾರಿಯಲ್ಲಿ ರಕ್ಷಣೆಗಾಗಿ ಸಿದ್ಧೇಗೌಡರು, ರಾಮನಗರದಿಂದ ಕೆಲವು ಮುಸ್ಲಿಂ ಕುಟುಂಬವನ್ನು ಕರೆತಂದರು. ಅವರೆಲ್ಲರೂ ಹಿಂದೆ ಟಿಪ್ಪು ಸುಲ್ತಾನರ ಸೈನ್ಯದಲ್ಲಿ ಇದ್ದವರ ಕುಟುಂಬದವರು. ಆ ಕುಟುಂಬಗಳೂ ಸಕಲೇಶಪುರದಲ್ಲಿಯೇ ನೆಲೆಸಿದರು.

ಈ ಶಾಪ್ ಸಿದ್ಧೇಗೌಡರ ಮೂರನೆಯ ಮಗನ ಹೆಸರೂ ಸಿದ್ಧೇಗೌಡ ಎಂದೇ ಇತ್ತು. ಇವರ ಕಾಲದಲ್ಲಿ ಅಂಗಡಿ ವ್ಯಾಪಾರ ಇನ್ನಷ್ಟು ವೃದ್ಧಿಯಾಯಿತಲ್ಲದೆ. ಈ ಎರಡನೆಯ ಸಿದ್ಧೇಗೌಡರು ಅಂಗಡಿಯ ಹೆಸರನ್ನು "ಶಾಪ್ ಸಿದ್ಧೇಗೌಡ ಎಂಡ್ ಕಂಪನಿ" ಎಂದು ಬದಲಾಯಿಸಿದರು. ನಂತರ ಇವರ ಕುಟುಂಬಕ್ಕೆ ಶಾಪ್ ಕುಟುಂಬವರೆಂಬ ಹೆಸರು ಬಂತು. ೧೯೩೦ರ ವೇಳೆಗೆ ಇಂಗ್ಲೆಂಡಿನ ಪತ್ರಿಕೆಗಳಲ್ಲಿ ಇವರ ಅಂಗಡಿಯ ಜಾಹೀರಾತು ಪ್ರಕಟವಾಗುತ್ತಿತ್ತು.!

ಆ ಕಾಲದಲ್ಲಿ ಹಾಸನದಲ್ಲಿ ಕೂಡಾ ವಾರದ ಸಂತೆಯ ದಿನ ಮಾತ್ರ ಅಂಗಡಿಗಳು ತೆರದಿದ್ದು ಉಳಿದ ದಿನ ಮುಚ್ಚಿರುತ್ತಿದ್ದವಂತೆ. ಆದರೆ ಸಕಲೇಶಪುರದ ಇವರ "ಶಾಪ್ ಸಿದ್ಧೇಗೌಡ ಎಂಡ್ ಕಂಪನಿ" ಇಡೀ ವಾರ ತೆರೆದಿರುತ್ತಿತ್ತು. ಇವರ ಕುಟುಂಬದವರು

ಹಲವಾರು ಜನಪರ ಕೆಲಸಗಳನ್ನು ಮಾಡಿದ ದಾನಿಗಳು ಕೂಡಾ.

ಸಕಲೇಶಪುರದ ಶಾಪ್ ಸಿದ್ಧೇಗೌಡ ಹಿರಿಯ ಪ್ರಾಥಮಿಕ ಶಾಲೆ, ಶಾಪ್ ಬಸಪ್ಪ ಪಶುವೈದ್ಯಶಾಲೆ, ಕ್ರಾಫರ್ಡ್ ಆಸ್ಪತ್ರೆಯ ಒಂದು ವಾರ್ಡ್ ಮುಂತಾದವೆಲ್ಲ ಇವರ ಕುಟುಂಬದ ಕೊಡುಗೆ.

ಆಗ ಸಕಲೇಶಪುರದಲ್ಲಿ ಮಸೀದಿ ಇರಲಿಲ್ಲ. ಇವರು ಮದ್ರಾಸಿನಿಂದ ಮತ್ತು ರಾಮನಗರದಿಂದ ಕರೆತಂದ ಮುಸ್ಲಿಂ ಕುಟುಂಬಗಳೂ ಸೇರಿದಂತೆ ಎಲ್ಲ ಮುಸ್ಲಿಮರಿಗಾಗಿ ಸಕಲೇಶಪುರದಲ್ಲಿ ಇವರ ನೇತೃತ್ವ ಮತ್ತು ಸಹಾಯದಿಂದ ಮಸೀದಿಯೊಂದು ನಿರ್ಮಾಣವಾಯಿತು. ಅದೇ ಇಂದಿನ ಸಕಲೇಶಪುರದ ನಗರ ಮಧ್ಯದಲ್ಲಿರುವ ದೊಡ್ಡ ಮಸೀದಿ ಎಂದು ಕರೆಯಲಾಗುವ ಲಾಬಾ ಬಿನ್ ಮಸೀದಿ.

ಇಂದಿಗೂ ಈ ಮಸೀದಿ ಸಮಿತಿಯವರು ಇವರ ಗೌರವಾರ್ಥ ವರ್ಷದಲ್ಲಿ ಒಂದು ಹಬ್ಬದ ಸಂದರ್ಭದಲ್ಲಿ ಶಾಪ್ ಸಿದ್ಧೇಗೌಡ ಕುಟುಂಬದವರನ್ನು ಮಸೀದಿಗೆ ಆಹ್ವಾನಿಸಿ ಗೌರವಿಸುತ್ತಾರೆ.

ಬ್ರಿಟಿಷರ ಒಡನಾಡಿಯಾಗಿದ್ದು, ಅವರ ಭಾಷೆಯನ್ನು ಕಲಿತು, ಅವರೊಂದಿಗೆ ನಿರಂತರ ವ್ಯವಹಾರವನ್ನು ಇಟ್ಟುಕೊಂಡಿದ್ದ ಸಿದ್ಧೇಗೌಡರು, ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಉನ್ನತ ಶ್ರೇಣಿ ಗಳಿಸುವ ವಿದ್ಯಾರ್ಥಿಗಳಿಗೆ ಕೊಡಲಾಗುವ "ಶಾಪ್ ಸಿದ್ಧೇಗೌಡ ಚಿನ್ನದ ಪದಕ"ದ ಸ್ಥಾಪಕರು.!

ಈ ಕುಟುಂಬದ ಬಸಪ್ಪನವರು ಕಾಂಗ್ರೆಸ್ಸಿನಲ್ಲಿ ಇದ್ದು ಪುರಸಭಾಧ್ಯಕ್ಷರೂ ಆಗಿದ್ದರು. ನಂತರದ ದಿನಗಳಲ್ಲಿ ಗಣಪಯ್ಯನವರ ನೇತೃತ್ವದ ಸ್ವತಂತ್ರ ಪಾರ್ಟಿ ಸೇರಿ ಸಕಲೇಶಪುರದಲ್ಲಿ ಸ್ವತಂತ್ರ ಪಕ್ಷದ ಬೆಳವಣಿಗೆಗೆ ಗಣನೀಯ ಕೊಡುಗೆ ನೀಡಿದರು.

ಈ ಶಾಪ್ ಸಿದ್ಧೇಗೌಡರ ಕಾಲದಲ್ಲಿ ಆಫ್ಘಾನಿಸ್ಥಾನದಿಂದ ರೆಹಮಾನ್ ಖಾನ್ ಎಂಬ ಯೋಧರು ಬ್ರಿಟಿಷ್ ಸರ್ಕಾರದ ಕೆಲಸದ ಮೇಲೆ ಭಾರತಕ್ಕೆ ಬಂದರು. ಆ ಸಂದರ್ಭದಲ್ಲಿ ಅವರು ಕರ್ನಾಟಕಕ್ಕೂ ಬಂದವರು ಸಕಲೇಶಪುರಕ್ಕೆ ಭೇಟಿ ನೀಡಿದರು. ಅವರು ವಾಪಸ್ ತಮ್ಮ ದೇಶಕ್ಕೆ ಹೋದ ಮೇಲೆ ಇಲ್ಲಿನ ಮಲೆನಾಡಿನ ಪ್ರಕೃತಿಗೆ ಮನಸೋತು ಇಲ್ಲಿಗೇ ಬಂದು ನೆಲೆಸುವ ಯೋಚನೆ ಮಾಡಿದರು. ಆಗ ಅವರಿಗೆ ತಮ್ಮದೇ ಮನೆಯೊಂದನ್ನು ಬಾಡಿಗೆಗೆ ನೀಡಿ, ಇಲ್ಲೇ ಜವಳಿ ಅಂಗಡಿಯೊಂದನ್ನು ಹಾಕಲು ವ್ಯವಸ್ಥೆ ಮಾಡಿಕೊಟ್ಟವರು ಶಾಪ್ ಸಿದ್ಧೇಗೌಡರು. ಹೀಗೆ ಇಲ್ಲಿ ಬಂದು ನೆಲೆಸಿದ ಆಫ್ಘಾನಿಸ್ಥಾನದ ಯೋಧರ ರೆಹಮಾನ್ ಖಾನ್ ಅವರ ಪುತ್ರರೇ ಎಸ್.ಕೆ. ಕರೀಂಖಾನ್.

ಹೀಗೆ ಈ ಭಾವೈಕ್ಯತೆಯ, ಸೌಹಾರ್ದ ಪರಂಪರೆಯ ಕೊಂಡಿಗಳು. ಸುಂದರವಾದ ಮಾಲೆಯಂತೆ ಹೆಣೆದುಕೊಂಡಿವೆ.

ಹಾರ್ಲೆ ಗಣಪಯ್ಯ: ಕೊಡಗಿನ ವಿರಾಜಪೇಟೆ ತಾಲ್ಲೂಕು ನರಿಯಂದಡ ಗ್ರಾಮದ ಕೃಷ್ಣಯ್ಯನವರ ಮಗ. ಗಣಪಯ್ಯನವರದ್ದು ಕಷ್ಟದ ಬದುಕು, ಮನೆಯಲ್ಲಿ ಬಡತನ, ಪ್ರೌಢಶಾಲೆ ತಲುಪಿದ್ದೇ ದೊಡ್ಡದು ಅಲ್ಲಿಗೇ ವಿದ್ಯೆ ಮೊಟಕಾಯಿತು, ಜೀವನ ನಿರ್ವಹಣೆಗೆ ಹಲವು ಸಣ್ಣ ಪುಟ್ಟ ಚಾಕರಿಗಳನ್ನು ಮಾಡಿದರು.

ಬಾಲ್ಯದಿಂದ ಬಂದ ಕೃಷಿ ಅನುಭವವಿತ್ತು. ನಂತರದ ದಿನಗಳಲ್ಲಿ ಸಣ್ಣ ಪ್ರಾಯದಲ್ಲೇ ಕೊಡಗಿನ ಸಾಕಮ್ಮನವರ ಕಾಫಿ ತೋಟದಲ್ಲಿ ಕೆಲಸಕ್ಕೆ ಸೇರಿದರು. ಸಾಕಮ್ಮ ದೊಡ್ಡ ಪ್ರಮಾಣದ ಕಾಫಿ ಉದ್ಯಮಿಯಾಗಿ ಭಾರತದ ಪ್ರಥಮ ಮಹಿಳಾ ಉದ್ಯಮಿಯೆಂದು ಹೆಸರು ಗಳಿಸಿದವರು. ಅಲ್ಲಿ ಅನೇಕ ವರ್ಷಗಳ ಕಾಲ ದುಡಿದು ಸಾಕಮ್ಮನವರ ತೋಟಗಳ ಜನರಲ್ ಮ್ಯಾನೇಜರ್

ಹುದ್ದೆಯನ್ನು ನಿರ್ವಹಿಸಿ ಗಣಪಯ್ಯ ನಿವೃತ್ತರಾದರು.

ಆ ನಂತರ ಗಣಪಯ್ಯನವರು ೧೯೫೫ರಲ್ಲಿ ಸಕಲೇಶಪುರ ತಾಲ್ಲೂಕಿನ ಕುಂಬರಡಿ ಗ್ರಾಮದ ಹಾರ್ಲೆ ಎಸ್ಟೇಟನ್ನು ಖರೀದಿಸಿದರು. ಅದಕ್ಕೆ ಮೊದಲು ಹಾರ್ಲೆ ಎಸ್ಟೇಟ್ ಹೆನ್ರಿ ಗಾಡ್ ಫ್ರೆ ಎನ್ನುವ ಬ್ರಿಟಿಷ್ ಮಿಲಿಟರಿ ಅಧಿಕಾರಿಯದ್ದಾಗಿತ್ತು. ಇಲ್ಲಿ ಎ. ಮಿಡ್ಲ್ ಟನ್ ಎನ್ನುವ ಬ್ರಿಟಿಷ್ ಮ್ಯಾನೇಜರ್ ಆಗಿದ್ದರು. ಇವರು ಹಾರ್ಲೆಯಲ್ಲಿ ನೆಲೆ ನಿಂತ ನಂತರ ಈ ಪ್ರದೇಶದ ಸಾಂಸ್ಕೃತಿಕ – ಆರ್ಥಿಕ ಚಹರೆ ಬದಲಾಗುತ್ತಾ ಹೋಯಿತು.

ಇದರ ಮೊದಲ ಉದಾಹರಣೆಯಾಗಿ ಒಂದು ಘಟನೆ ನಡೆಯಿತು.

ಇವರು ಇಲ್ಲಿ ಬಂದು ನೆಲೆಸಿದಾಗ ಸಹಜವಾಗಿಯೇ ಸುತ್ತಲಿನ ಕೃಷಿಕರಿಗೆ ಕುತೂಹಲ, ಏನೋ ಆತಂಕ. ಬ್ರಿಟಿಷರಿಂದ ತೋಟ ಖರೀದಿಸಬೇಕೆಂದರೆ ಪ್ರಭಾವಿಗಳೇ ಇರಬೇಕು, ಕೊಡಗಿನಿಂದ ಬಂದವರು, ಸಾಕಮ್ಮನವರ ತೋಟದ ಮ್ಯಾನೇಜರ್, ಮುಂದೆ ಹೇಗೋ ಎನ್ನುವ ಚಡಪಡಿಕೆ. ಇದಕ್ಕೆ ಕಾರಣಗಳೂ ಇದ್ದವು ಅವನ್ನು ಮುಂದೆ ವಿವರಿಸುವೆ.

ತೋಟವನ್ನು ಕೊಂಡ ನಂತರ ಸಹಜವಾಗಿಯೇ ಗಣಪಯ್ಯನವರು ಜಮೀನಿನ ಸರ್ವೆ ಮಾಡಿಸಿದರು. ಒಂದು ಪಕ್ಕದಲ್ಲಿ ಸ್ಥಳೀಯ ಸಣ್ಣ ಬೆಳೆಗಾರರೊಬ್ಬರ ಜಮೀನು. ಅಲ್ಲಿ ಸುಮಾರು ಮೂರು ಎಕರೆಗಳಷ್ಟು ಜಾಗದಲ್ಲಿ ಹಾರ್ಲೆ ಎಸ್ಟೇಟ್‌ಗೆ ಸೇರಬೇಕಾದ ಜಾಗದಲ್ಲಿ ಅವರು ಕಾಫಿ ಕೃಷಿ ಮಾಡಿದ್ದರು. ಗಿಡಗಳನ್ನು ನೆಟ್ಟು ಎರಡು ವರ್ಷಗಳು ಕಳೆದಿದ್ದವು. ಅವರು ದುರುದ್ದೇಶದಿಂದ ಆ ರೀತಿ ಮಾಡಿರಲಿಲ್ಲ. ಜಮೀನಿನ ಸರ್ವೆ ಮಾಡಿಸದೆ ಅಂದಾಜಿನಲ್ಲಿ ತೋಟ ಮಾಡಿದ್ದರಿಂದ ಹಾಗಾಗಿತ್ತು.

ಪಕ್ಕದಲ್ಲಿ ಅವರಿಗೆ ಸೇರಬೇಕಾದ ಜಮೀನನ್ನು ಅವರು ಖಾಲಿ ಬಿಟ್ಟಿದ್ದರು.

ಕಾನೂನಿನಂತೆ ಅವರು ಕೃಷಿ ಮಾಡಿದ ಜಮೀನು ಗಣಪಯ್ಯನವರಿಗೆ ಬಿಟ್ಟು ಕೊಡಬೇಕು. ಅವರಿಗೆ ತಲೆಬಿಸಿಯಾಯಿತು. ಮೂರು ಎಕರೆ ಕೃಷಿಮಾಡಿ ಎರಡು ವರ್ಷ ಹಾಕಿದ ಖರ್ಚು ಕೈ ಬಿಟ್ಟು ಹೋಗುವ ಚಿಂತೆಗೊಳಗಾದರು. ಅಕ್ಕಪಕ್ಕದವರಲ್ಲಿ ಕೆಲವರು "ನೀವು ಬಿಡಬೇಡಿ ಕೋರ್ಟಿಗೆ ಹೋಗಿ" ಎಂದೂ, ಇನ್ನು ಕೆಲವರು "ಅದು ನಿಮ್ಮ ಕೈ ಬಿಟ್ಟಂತೆಯೇ, ಅವರು ದುಡ್ಡಿದ್ದವರು ಅವರದ್ದೇ ಮಾತು ನಡೆಯುವುದು" ಎಂದೂ ಹೀಗೆ ತಮಗೆ ತೋಚಿದಂತೆ ಮಾತಾಡುತ್ತ ಕುಳಿತರು.

ಆಗ ಗಣಪಯ್ಯನವರು ಆ ಕಾಫಿ ಬೆಳೆಗಾರರನ್ನು ಭೇಟಿ ಮಾಡಿ "ಈಗ ಕಾನೂನಿನಂತೆ ನೀವು ಕೃಷಿ ಮಾಡಿದ ಭೂಮಿ ನಮ್ಮದು. ಆದರೆ ಚಿಂತೆ ಮಾಡಬೇಡಿ. ಒಪ್ಪಿದರೆ ನಿಮ್ಮ ಖಾಲಿ ಇರುವ ಜಾಗದಲ್ಲಿ ನಾನು ನಮ್ಮದೇ ಖರ್ಚಿನಲ್ಲಿ ಅಷ್ಟೇ ಜಾಗ ಕೃಷಿ ಮಾಡಿಕೊಡುತ್ತೇನೆ." ಎಂದು ಹೇಳಿ ಅವರನ್ನು ಸಮಾಧಾನ ಮಾಡಿ ಒಪ್ಪಿಸಿದರು.

ಮುಂದೆ ಆ ಮಾತಿನಂತೆಯೇ ಗಣಪಯ್ಯ ಆ ಕೃಷಿಕರ ಮೂರು ಎಕರೆ ನೆಲದಲ್ಲಿ ಗಿಡ ನೆಡಿಸಿ ಎರಡು ವರ್ಷ ಸಂಪೂರ್ಣ ಕೃಷಿ ಮಾಡಿಕೊಟ್ಟರು.

ಆ ನಂತರ ಸುತ್ತಲಿನ ಕೃಷಿಕರು "ಪರವಾಗಿಲ್ಲ ಬಿಡಿ ಇವರು ಧರ್ಮಾತ್ಮರು" ಎಂದು ಹೇಳತೊಡಗಿದರು.

ಗಣಪಯ್ಯನವರು ಯಾವಾಗಲೂ ಹೇಳುತ್ತಿದ್ದ ಮಾತು:

"ನೀನು ತೋಟವನ್ನು ಚೆನ್ನಾಗಿ ಕೃಷಿ ಮಾಡಿದರೆ ಸಾಲದು.

ನೆರೆಯವರನ್ನೂ ಹಾಗೆಯೇ ಕೃಷಿ ಮಾಡಬೇಕು, ಅದೇ ಬದುಕು" ಎಂದು.

ಹೀಗೆ ಗಣಪಯ್ಯನವರು ಹಾರ್ಲೆಗೆ ಬಂದ ಮೇಲೆ ಕೃಷಿ ವಿಸ್ತರಣೆಯ ಜೊತೆಯಲ್ಲಿ ಸುತ್ತಲಿನ ಜನರೊಡನೆ ಸಂಬಂಧಗಳನ್ನೂ ವಿಸ್ತರಿಸುತ್ತಾ ಹೋದರು. ಇದಕ್ಕೆ ಕಾರಣವೂ ಇತ್ತು.

ಗಣಪಯ್ಯ ಸಹೋದರರರು ಕೊಡಗಿನಿಂದ ಬರುವಾಗ ಅನೇಕ ಕಾರ್ಮಿಕ ಕುಟುಂಬಗಳು ಇವರೊಂದಿಗೆ ಹಾರ್ಲೆಗೆ ಬಂದರು, ಅವರಲ್ಲಿ ಕೂಲಿ ಕಾರ್ಮಿಕರು, ಮೇಸ್ತ್ರಿಗಳು, ಮೆಕ್ಯಾನಿಕ್‌ಗಳು, ಡ್ರೈವರ್‌ಗಳು, ರೈಟರ್‌ಗಳು ಎಲ್ಲರೂ ಇದ್ದರು. ಕೊಡಗಿನಲ್ಲಿ ಇದ್ದಾಗಲೇ ಇವರೆಲ್ಲರಿಗೂ ಗಣಪಯ್ಯ ತಮ್ಮ ಬಂಧುವೆನ್ನುವಂತಹ ಬಾಂಧವ್ಯ ಬೆಳೆದಿತ್ತು. ಇವರಲ್ಲಿ ಹಲವರು ಈಗ ತೀರಿಕೊಂಡಿದ್ದಾರೆ, ಕೆಲವರ ಮೊಮ್ಮಕ್ಕಳು ಇಂದಿಗೂ ಹಾರ್ಲೆ ಸುತ್ತ ಮುತ್ತ ಇದ್ದಾರೆ. ಇನ್ನು ಕೆಲವರು ಸರ್ಕಾರಿ ಉದ್ಯೋಗಗಳಲ್ಲಿದ್ದಾರೆ, ಉನ್ನತ ಹುದ್ದೆ ತಲುಪಿದ್ದಾರೆ, ಉದ್ಯಮಿಗಳಾಗಿದ್ದಾರೆ.

ನಂತರದ ದಿನಗಳಲ್ಲಿಯೂ ಕೊಡಗಿನಿಂದ ಹಲವು ಕುಟುಂಬಗಳು ಗಣಪಯ್ಯನವರ ಆಶ್ರಯದಲ್ಲಿ ಸಕಲೇಶಪುರ ತಾಲ್ಲೂಕಿಗೆ ಬಂದು ಬದುಕು ಕಟ್ಟಿಕೊಂಡರು. ಕೆಲವರು ಹಾರ್ಲೆಯಲ್ಲಿ ಮತ್ತು ಅವರ ಸಹೋದರ ಕೃಷ್ಣಮೂರ್ತಿಯವರಲ್ಲಿ ಉದ್ಯೋಗ ಪಡೆದರೆ ಇನ್ನು ಕೆಲವರು ಸ್ವತಂತ್ರವಾಗಿ ಕೃಷಿಯಲ್ಲಿ ತೊಡಗಿಕೊಂಡರು.

ಆ ಕಾಲದಲ್ಲಿ ಸುತ್ತಲಿನ ಹಳ್ಳಿಯ ಕೃಷಿಕರು ಸಣ್ಣ ಪುಟ್ಟ ಹಣ ಸಹಾಯಕ್ಕಾಗಿ ಗಣಪಯ್ಯನವರಲ್ಲಿಗೆ ಬರುತ್ತಿದ್ದರು. ಇತರ ಕೃಷಿ ಸಂಬಂಧದ ಕೆಲಸಕ್ಕಾಗಿ ಬರುವವರಿದ್ದರು. ಕೃಷಿ ಉಪಕರಣಗಳನ್ನು ಬಾಡಿಗೆಗೆ ಪಡೆಯುತ್ತಿದ್ದರು, ಆ ಬಾಡಿಗೆಯೂ

ಯಂತ್ರಗಳ ದುರುಪಯೋಗವಾಗದಂತೆ ಹೆಸರಿಗೆ ಮಾತ್ರ ಇರುತ್ತಿತ್ತು.

ನಿಧಾನವಾಗಿ ಗಣಪಯ್ಯ ಸುತ್ತಲಿನ ಹಳ್ಳಿಯ ರೈತರಿಗೆ ಆಪದ್ಬಾಂಧವರಾಗುತ್ತ ಹೋದರು.

ತುರ್ತು ಸಂದರ್ಭಗಳಲ್ಲಿ ರೈತರು ಗಣಪಯ್ಯನವರಿಂದ ಸಾಲವಾಗಿ ಹಣ ಪಡೆದುಕೊಳ್ಳುತ್ತಿದ್ದರು. ಆ ಸಾಲಕ್ಕೊಂದು ಷರತ್ತು ಇತ್ತು. ಅದೇನೆಂದರೆ ಹಾಗೆ ಹಣ ಪಡೆದವರು ಗದ್ದೆ ಕೊಯ್ಯುವ ಸಮಯದಲ್ಲಿ ಅದಕ್ಕೆ ತಕ್ಕ ಭತ್ತವನ್ನು ಹಿಂದಿರುಗಿಸಬೇಕು. ಜೊತೆಯಲ್ಲಿ ಹಾರ್ಲೆ ಎಸ್ಟೇಟ್‌ನಲ್ಲಿಯೂ ಗದ್ದೆಯಿದ್ದು ಅಲ್ಲೂ ಬೇಸಾಯ ನಡೆಯುತ್ತಿತ್ತು. ಈ ಎಲ್ಲಾ ಭತ್ತವನ್ನೂ ಅವರು ಒಂದಿಷ್ಟೂ ಮಾರುತ್ತಿರಲಿಲ್ಲ. ಬೇಸಗೆಯ ಕೊನೆಯಿಂದ ದೀಪಾವಳಿ ಹಬ್ಬದವರೆಗೆ ಅಥವಾ ಕಾಫಿ ಹಣ್ಣು ಕೊಯ್ಲಿನ ಸಮಯದ ವರೆಗೆ ತೋಟದ ಎಲ್ಲಾ ನೌಕರ ಕಾರ್ಮಿಕರಿಗೂ ಪ್ರತಿವಾರ ಭತ್ತ ಅಥವಾ ಅಕ್ಕಿಯನ್ನು ಲಾಭ ನಷ್ಟವಿಲ್ಲದೆ ಕೊಡುತ್ತಿದ್ದರು. ಇದರಿಂದ ಮಳೆಗಾಲದಲ್ಲಿ ಕೆಲಸಗಾರರು ಊಟಕ್ಕಿಲ್ಲದೆ ಕೂರುವುದು ತಪ್ಪುತ್ತಿತ್ತು. ಅದೇ ಭತ್ತದ ಅಕ್ಕಿಯನ್ನೇ ಅವರೂ ಊಟ ಮಾಡುತ್ತಿದ್ದುದು.

ಇವರಲ್ಲಿ ಕೆಲಸ ಕೇಳಿಕೊಂಡು ಬರುವವರ ಸಂಖ್ಯೆಯೂ ಹೆಚ್ಚಿತ್ತು, ಇಲ್ಲಿ ಬಂದು ಸೇರಿದವರು ಬಿಟ್ಟು ಹೋಗುವುದಿಲ್ಲ ಎಂಬ ಮಾತು ಜನರಲ್ಲಿ ವಾಡಿಕೆಯಾಯಿತು. ಗಣಪಯ್ಯ ಕಾಫಿ ತೋಟದ ವಿಸ್ತರಣೆಯಲ್ಲಿ ತೊಡಗಿದರು. ಆಗೆಲ್ಲ ಪತ್ನಿ ದೇವಮ್ಮನವರು ಆಕ್ಷೇಪಿಸುವರು, "ಯಾಕೆ ಇಷ್ಟೊಂದು ನಮಗೆ ಇಷ್ಟು ವರ್ಷ ನೀವು ದುಡಿದದ್ದು ಸಾಕು ಇನ್ನು ನೆಮ್ಮದಿಯಲ್ಲಿ ಇರೋಣ" ಎನ್ನುವರು. ದೇವಮ್ಮನವರ ಆರೋಗ್ಯ ಮೊದಲಿನಿಂದಲೂ ಚೆನ್ನಾಗಿರಲಿಲ್ಲ. ಕೊಡಗಿನಲ್ಲಿ ಇರುವಾಗಲೇ ಅವರಿಗೆ ಹಲವು ಶಸ್ತ್ರಚಿಕಿತ್ಸೆಗಳಾಗಿದ್ದವು. ನಿರಂತರ ಔಷಧಿ ಸೇವನೆ

ಮುಂದುವರೆದಿತ್ತು. ಅವರಿಗೆ ಈಗಲೂ ಇದೆಲ್ಲ ಜಂಜಾಟ ಯಾಕೆ ಎಂದು ಅನ್ನಿಸುತ್ತಿತ್ತು.

ಆಗ ಗಣಪಯ್ಯ 'ನಿಂಗೇನು ಗೊತ್ತು ಸುಮ್ಮನಿರು ಒಂದು ಎಕರೆ ತೋಟ ಮಾಡಿದ್ರೆ ನಾಕು ಜನರಿಗೆ ಉದ್ಯೋಗ ಆಗುತ್ತೆ ಇಷ್ಟು ಜನ ಕೆಲಸ ಕೇಳಿಕೊಂಡು ಬರ್ತಾ ಇದ್ದಾರಲ್ಲ ಅವರು ಕಷ್ಟ ಇರದರಿಂದ ಬರ್ತಾರೆ ತಮಾಷ್ಟೆಗೆ ಯಾರೂ ಬರದಿಲ್ಲ" ಎನ್ನುವರು.

ಆ ಕಾಲದಲ್ಲಿ ಮಳೆಗಾಲದಲ್ಲಿ ಕೂಲಿ ಕಾರ್ಮಿಕರು ಕೆಲಸವಿಲ್ಲದೆ ಹಲಸಿನ ಕಾಯಿ ತಿಂದು ಬದುಕಬೇಕು, ಇಲ್ಲವೇ ಉಪವಾಸವಿರಬೇಕು ಎಂಬ ಪರಿಸ್ಥಿತಿ ಇತ್ತು.

ಒಮ್ಮೆ ಹಾರ್ಲೆ ತೋಟದ ಕಿತ್ತಲೆ ಫಸಲನ್ನು ಬಾಷ ಎಂಬ ಸಕಲೇಶಪುರದ ಸಾಬರೊಬ್ಬರಿಗೆ ಗುತ್ತಿಗೆಗೆ ಕೊಟ್ಟಿದ್ದರು. ಆ ವರ್ಷದ ಕಿತ್ತಲೆ ಫಸಲು ನಲುವತ್ತು ಸಾವಿರಕ್ಕೆ ಮಾತಾಗಿ ಐದು ಸಾವಿರ ಮುಂಗಡ ಪಡೆದಿದ್ದರು.

ಆ ವರ್ಷ ನಿರಂತರ ಮಳೆಯಾಗಿ ಕಿತ್ತಲೆ ಕಾಯಿಗಳೆಲ್ಲ ಉದುರಿ ಹೋದವು. ಕಿತ್ತಲೆ ಫಸಲಿನವರು ಅಂಥ ಸಂದರ್ಭದಲ್ಲಿ ಕೊಯ್ಯಲು ಬಾರದೆ, ಹಣವನ್ನೂ ಕೊಡದೆ ಕದ್ದು ಹೋಗುವುದೂ ಇದೆ. ಬಾಷ ಹಾಗೆ ಮಾಡಲಿಲ್ಲ ಬಂದು ಅಳಿದುಳಿದ ಕಿತ್ತಲೆಯನ್ನು ಕೊಯ್ದರು. ಕೇವಲ ಎರಡು ಸಾವಿರದಷ್ಟು ಹಣ್ಣು ಸಿಕ್ಕಿತು. ಅದರಲ್ಲಿ ಸ್ವಲ್ಪ ಬಂಗಲೆಗೆ ಕೊಟ್ಟು. "ಸ್ವಾಮಿ ನೀವೆ ನೋಡಿದೀರ ಏನಾದ್ರೂ ರಿಯಾಯ್ತಿ ಮಾಡಿ ಈ ವರ್ಷ ಮಗಳ ಮದುವೆ ಬೇರೆ ಇಟ್ಕಂಡಿದೀನಿ" ಎಂದು ಸಾಬರು ತಲೆ ಕೆರೆದರು.

ಆಗ ಗಣಪಯ್ಯ, "ನಿನ್ನ ಬಂಡವಾಳ ಏನಿದೆ ಒಂದು ಕುಕ್ಕೆ ಒಂದು ಕೊಕ್ಕೆ ಬೇರೆ ಏನು.? ಬಂಡವಾಳ ಹಾಕಿ ತೋಟ

ಮಾಡಿದ್ದು ನಾನು. ಅದೆಲ್ಲ ಆಗದಿಲ್ಲ ಮೊದ್ಲು ಬಾಕಿ ದುಡ್ಡು ತಾ ಆ ಮೇಲೆ ಬೇರೆ ಮಾತು, ಲಾಭ ಆದ್ರೆ ನನಗೆ ತಂದು ಕೊಡ್ತಿದ್ಯಾ?" ಎಂದು ಬಿಟ್ಟರು.

ಸಾಬರು ಏನೂ ಮಾತಾಡದೆ, ಸುಮ್ಮನೆ ಹೋದರು.

ಎರಡು ದಿನದಲ್ಲಿ ಬಾಷ ಸಾಬರು ಉಳಿದ ಮೂವತ್ತೈದು ಸಾವಿರ ಹಿಡಿದು ಗಣಪಯ್ಯನವರ ಮುಂದೆ ಹಾಜರಾದರು.

"ತಗೊಳ್ಳಿ ಸ್ವಾಮಿ ನಿಮ್ ದುಡ್ಡು" ಎಂದು ಮೇಜಿನ ಮೇಲೆ ಹಣವನ್ನು ಇಟ್ಟರು.

ಗಣಪಯ್ಯ "ಈಗೆಲ್ಲಿಂದ ಬಂತು ದುಡ್ಡು?, ಬ್ಯಾಂಕಿಂದ ತಂದ್ಯಾ? ಎಂದರು.

"ನಮ್ಮಂತೋರಿಗೆ ಬ್ಯಾಂಕಲ್ಲಿ ಏನ್ನೈತೆ, ದೇವ್ರಾಣೆ, ಕೇಳಿ ನೋಡಿ ಮಾರ್ವಾಡಿ ಅಂಗ್ಡೀಲಿ ಸಾಲ ತಂದಿದ್ದೀನಿ." ಎಂದರು ಸಾಬರು.

ಗಣಪಯ್ಯ ಮಾತಾಡದೆ ಒಂದು ನಿಮಿಷ ಸುಮ್ಮನೆ ಕುಳಿತರು, ನಂತರ "ತಗೊ ಹೋಗು ಮಗಳ ಮದ್ವೆ ಮಾಡು ಮುಂದಿನ ವರ್ಷ ಬಾ" ಎಂದು ಆ ಮೂವತ್ತೈದು ಸಾವಿರವನ್ನೂ ವಾಪಸ್ ಕೊಟ್ಟರು!

"ಇದೇನ್ ಸ್ವಾಮಿ? ಎಂದರು ಸಾಬರು.

"ನೀನು ಕೊಟ್ಟ ಮುಂಗಡ ಐದು ಸಾವಿರ ಇತ್ತಲ್ಲ ಅದು ಸಾಕು. ನನಗೆ ಮೂವತ್ತೈದು ಸಾವಿರ ಲಾಸು, ನಿನಗೂ ಒಂದ್ ಐದು ಸಾವಿರ ಲಾಸ್ ಇರ್ಲಿ" ಎಂದು ಹೇಳಿ ಸಾಬರನ್ನು ಕಳುಹಿಸಿದರು.

ಈ ವಿಚಾರವನ್ನು ಬಾಷ ಸಾಬರು ನನಗೆ ಹೇಳಿದ್ದು

ಗಣಪಯ್ಯನವರು ತೀರಿಕೊಂಡು ಕೆಲವು ವರ್ಷಗಳು ಕಳೆದ ಮೇಲೆ.

ಕೊನೆಯಲ್ಲಿ ಸಾಬರು ನನ್ನಲ್ಲಿ "ನೋಡಿ ಸಾಮಿ ನಮ್ಮಂಥವ್ರಿಗೇ ಅಂತ ದೇವ್ರು ಅಂತವ್ರು ಒಬ್ಬೊಬ್ಬರನ್ನ ಭೂಮಿ ಮ್ಯಾಲೆ ಇಟ್ಟಿರ್ತಾನೆ" ಎಂದರು!

ಎಷ್ಟೋ ಸಲ ಗಣಪಯ್ಯ ಜನರಿಗೆ ಸಹಾಯ ಮಾಡಿ ಹಣ ಕೊಡುತ್ತಿದ್ದುದು ಬೇರೆ ಯಾರಿಗೂ ತಿಳಿಯುತ್ತಲೇ ಇರಲಿಲ್ಲ.

ತೋಟದ ಕಾರ್ಮಿಕರಿಗೆ ಅದರಲ್ಲೂ ಮುಖ್ಯವಾಗಿ ಹೆಂಗಸರಿಗೆ ಅವರು ಬೆಂಗಳೂರಿನಿಂದ ಕೈಮಗ್ಗದ ವಸ್ತ್ರಗಳನ್ನು ತಂದು ಕೊಡುತ್ತಿದ್ದರು, ಅವರು ದೊಡ್ಡ ಸಂಖ್ಯೆಯಲ್ಲಿ ಖರೀದಿಸುತ್ತಿದ್ದರಿಂದ ಕಡಿಮೆ ಬೆಲೆಗೆ ಸಿಗುತ್ತಿತ್ತು, ಸಾಮಾನ್ಯವಾಗಿ ವರ್ಷಕ್ಕೆರಡು ಸಲ ಸೀರೆ ಪಂಚೆಗಳನ್ನು ತರುತ್ತಿದ್ದರು. ಕೆಲಸಗಾರರು, ಅದರ ಅಸಲು ಹಣವನ್ನು ಕಂತುಗಳಲ್ಲಿ ತೀರಿಸಬೇಕು. ವಯಸ್ಸಾದವರಿಗೆ ಉಚಿತ.

ಆ ಕಾಲದಲ್ಲಿ ಎಷ್ಟೋ ಮನೆಗಳಲ್ಲಿ ಗಂಡಸರು ಕುಡುಕರಾದರೆ ಹೆಂಗಸರಿಗೆ ಬಟ್ಟೆಯೇ ಇರುತ್ತಿರಲಿಲ್ಲ.

ಪ್ರತಿವರ್ಷ ದೀಪಾವಳಿ ಸಮಯದಲ್ಲಿ ಎಲ್ಲ ಮಕ್ಕಳಿಗೂ ಉಚಿತವಾಗಿ ಬಟ್ಟೆ ಹೊಲಿಸಿ ಹಂಚುತ್ತಿದ್ದರು.

ಹಾರ್ಲೆಯ ಪಕ್ಕದ ದಲಿತರ ಕಾಲೊನಿಗಳಿಗೆ ಗಣಪಯ್ಯ ದಂಪತಿಗಳು ಬೆಳಗಿನ ಹನ್ನೊಂದು ಘಂಟೆಯ ವೇಳೆಗೆ ಜೀಪಿನಲ್ಲಿ ಹೋಗುತ್ತಿದ್ದರು, ಆ ಹೊತ್ತಿನಲ್ಲಿ ಮನೆಯುವರು ಕೆಲಸಕ್ಕೆ ಹೋಗಿರುತ್ತಿದ್ದರು ಆದರೆ ವಯಸ್ಸಾದವರು ಮಾತ್ರ ಕೆಲಸಕ್ಕೆ ಹೋಗದೆ ಮನೆಯಲ್ಲಿಯೇ ಸಿಗುತ್ತಿದ್ದರು, ಆಗ ಅವರನ್ನು ಕರೆದು ಗುಟ್ಟಾಗಿ ಅವರಿಗೆ ಸೀರೆ, ಪಂಚೆ ಕೊಡುವರು. ನಂತರ ಇದು ನೀನೇ ಇಟ್ಕೋ ಮಕ್ಕಳಿಗೆ ಕೊಡಬೇಡ ಎನ್ನುವರು. ಯಾಕೆಂದರೆ

ಅದನ್ನೂ ಮಾರಿ ಹೆಂಡ ಕುಡಿಯುವವರೂ ಇದ್ದರು. ಕೆಲವರ ಮಕ್ಕಳು ಅದನ್ನೂ ಮಾರಿಕೊಂಡದ್ದು ತಿಳಿದಾಗ "ಇವರೆಲ್ಲ ಈಗ ಸರಿಯಾಗಕಿಲ್ಲ, ವಿದ್ಯೆ ಕಲಿತು ನಿದಖಾನ್‌ಕ್ಕೆ ಇವರ ಮೊಮ್ಮಕ್ಕಳ ಕಾಲಕ್ಕೆ ಎಲ್ಲ ಸರಿಯಾಗ್ತಾರೆ" ಎನ್ನುತ್ತಿದ್ದರು.

ಇಂದು ಸಣ್ಣದೊಂದು ವಸ್ತುವನ್ನು "ದಾನ ಮಾಡಿ" ಫೋಟೋ ತೆಗೆಸಿಕೊಂಡು ಪತ್ರಿಕೆಗಳಲ್ಲೋ ಸಾಮಾಜಿಕ ಜಾಲತಾಣಗಳಲ್ಲೋ ಸ್ವಯಂ ಪ್ರಚಾರ ಮಾಡಿಕೊಳ್ಳುವವರನ್ನು ಕಂಡಾಗ ಇದೆಲ್ಲ ನೆನಪಾಯಿತು.

ಅಷ್ಟು ದೊಡ್ಡ ವ್ಯವಹಾರಗಳನ್ನು ನಡೆಸುತ್ತಾ ರಾಷ್ಟ್ರ ಮಟ್ಟದಲ್ಲಿ ರಾಜಕಾರಣ ಮತ್ತು ರೈತ ಸಂಘಟನೆಗಳಲ್ಲಿ ಮುಂದಾಳುವಾಗಿದ್ದ ಅವರು ಸಾಮಾನ್ಯರ ಜೊತೆ ಅತಿ ಸಾಮಾನ್ಯರಾಗಿದ್ದರು. ಪ್ರತಿವಾರ ವಾರದ ಸಂತೆಗೆ ಅವರೇ ಹೋಗುವರು. ಇಡೀ ಸಂತೆಯಲ್ಲಿ ತಿರುಗಿ ತರಕಾರಿಯನ್ನು ಕೊಳ್ಳುವರು. ಅದೂ ಸಹಾ ಹೆಚ್ಚಾಗಿ ಮುದುಕರು ಮತ್ತು ಮಹಿಳೆಯರ ಬಳಿಯೇ ವ್ಯಾಪಾರ. ಸಂತೆಯಲ್ಲಿ ಮಾರುವ ಕರಿದ ತಿಂಡಿಗಳನ್ನು ಕೊಂಡು ಜೊತೆಯಲ್ಲಿ ಇದ್ದವರಿಗೂ ಕೊಡುವರು. ಯಾರಾದರೂ ಮಕ್ಕಳು ಮತ್ತು ಮುದುಕರು ಕಂಡರೆ ಅವರಿಗೂ ಹಂಚುವರು. ಇವೆಲ್ಲದರಿಂದ ಗಣಪಯ್ಯ ಒಂದು ವಾರ ಸಂತೆಗೆ ಬಾರದಿದ್ದರೆ "ಈ ವಾರ ಹಾರ್ಲೆ ಅಜ್ಜಾವ್ರು ಬಂದಿಲ್ಲ" ಎಂದು ಇಡೀ ಸಂತೆಯಲ್ಲಿ ಸುದ್ದಿಯಾಗುತ್ತಿತ್ತು. ಅವರು ಅಲ್ಲಿ ಕೊಳ್ಳುತ್ತಿದ್ದ ವಸ್ತುಗಳಿಗಿಂತಲೂ ಎಲ್ಲರನ್ನೂ ಮಾತಾಡಿಸುತ್ತ, ನಗುತ್ತ ತಿರುಗಾಡುತ್ತಿದ್ದುದೇ ನೋಡುಗರಿಗೆ ಒಂದು ವಿಶೇಷವಾಗಿತ್ತು. ಆ ಕ್ಷಣಗಳನ್ನು ಇಂದಿಗೂ ಅಲ್ಲಿನ ಹಿರಿಯರು ನೆನಪಿಸಿಕೊಳ್ಳುತ್ತಾರೆ.

ಒಮ್ಮೆ ಸಂತೆಯಲ್ಲಿ ಜೀಪ್ ನಿಲ್ಲಿಸಿದ್ದರು. ಜೀಪು ನಿಂತಿದ್ದ ಸ್ಥಳದ ಪಕ್ಕದಲ್ಲಿಯೇ ಜಾಯ್ ಸೆಬಾಸ್ಟಿಯನ್ ಎಂಬವರೊಬ್ಬರ

ಟೈರ್ ರಿಪೇರಿ ಅಂಗಡಿ. ಅದುವರೆಗೆ ಸಣ್ಣ ಪುಟ್ಟ ರಿಪೇರಿ ಕೆಲಸ ಮಾಡುತ್ತಿದ್ದವರು. ಟೈರ್ ರಿಟ್ರೆಡಿಂಗ್ ಕೆಲಸ ಪ್ರಾರಂಭಿಸಿದ್ದರು. ಅವರು ಗಣಪಯ್ಯನವರ ಜೀಪನ್ನು ನೋಡಿದರು. ನಾಲ್ಕೂ ಟೈರುಗಳು ಸಾಕಷ್ಟು ಸವೆದಿದ್ದವು.

ಆತ ಗಣಪಯ್ಯನವರ ಬಳಿ ಬಂದು "ಸಾರ್ ನಿಮ್ಮ ಜೀಪಿನ ಟೈರುಗಳು ಸವೆದಿವೆ, ಅದು ಪೂರ್ತಿ ಸವೆದರೆ ನೀವು ಹೊಸ ಟೈರು ಹಾಕಿಸಬಲ್ಲಿರಿ, ಆದರೆ ಈಗ ನನಗೆ ಕೊಟ್ಟರೆ ರಿಟ್ರೆಡ್ ಮಾಡಿಕೊಡುತ್ತೇನೆ. ನನಗೆ ಒಂದು ದಿನ ಮನೆಯಲ್ಲಿ ಎಲ್ಲರಿಗೂ ಊಟಕ್ಕೆ ಆಗುತ್ತದೆ" ಎಂದರು.

ಗಣಪಯ್ಯ ಆಗ "ನೋಡುವ" ಎಂದಷ್ಟೇ ಹೇಳಿ ಮನೆಗೆ ಬಂದವರು, ಮಾರನೆಯ ದಿನ ನಾಲ್ಕೂ ಟೈರುಗಳನ್ನು ರಿಟ್ರೆಡಿಂಗ್ ಮಾಡಿಸಲು ಸೆಬಾಸ್ಟಿಯನ್ ಅವರ ಅಂಗಡಿಗೆ ಕಳುಹಿಸಿದರು. ನಂತರ ವರ್ಷಗಳ ಕಾಲ ಹಾರ್ಲೆ ವಾಹನಗಳ ಟೈರುಗಳು ಸವೆದಾಗ ಅಲ್ಲಿಗೆ ಕಳುಹಿಸುತ್ತಿದ್ದರು.

ಸಾಮಾನ್ಯವಾಗಿ ಜೀಪನ್ನು ಅವರೇ ಡ್ರೈವ್ ಮಾಡುತ್ತಿದ್ದರು. ಕೆಲವು ಸಲ ಡ್ರೈವರರನ್ನು ಕರೆದೊಯ್ಯುವುದೂ ಇತ್ತು. ಯಾರ ಮನೆಗಾದರೂ ಮಧ್ಯಾಹ್ನ ಹೋದರೆ ಡ್ರೈವರ್‌ಗೂ ಅವರ ಜೊತೆಯಲ್ಲೇ ಊಟ. ಅವರ ಮನೆಯಲ್ಲಿಯೂ ಅಷ್ಟೇ ಇಡೀ ಮನೆಗೆ ಎಲ್ಲರಿಗೂ ಮುಕ್ತ ಪ್ರವೇಶ ಅಲ್ಲಿ ಜಾತಿ, ವರ್ಗಗಳ ಪ್ರಶ್ನೆ ಇರಲಿಲ್ಲ.

ಇತರ ದಿನಗಳಲ್ಲಿಯೂ ಅಷ್ಟೇ ಅವರ ಜೀಪು ಹೊರಟಿತೆಂದರೆ ಮನೆಯ ಎರಡು ನಾಯಿಗಳು ಮೊದಲು ಹತ್ತಿ ಕೂರುವವು. ಮತ್ತೆ ಜೀಪಿನ ತುಂಬಾ ಹಿಂದೆ ಮುಂದೆ ತೋಟದ ಕಾರ್ಮಿಕರ ಮಕ್ಕಳು. ಗಣಪಯ್ಯ ದಾರಿಯುದ್ದಕ್ಕೂ ಮಕ್ಕಳ ಜೊತೆ ಮಾತಾಡುತ್ತ

ಮಕ್ಕಳಿಗೆ ಭಜನೆ ಹಾಡುಗಳನ್ನು ಹೇಳಿಕೊಡುತ್ತಾ ಹೋಗುವರು. ತೋಟದ ನೂರಾರು ಮಕ್ಕಳಲ್ಲಿ ಪ್ರತಿಯೊಬ್ಬನ ಹೆಸರೂ ಗಣಪಯ್ಯನವರಿಗೆ ತಿಳಿದಿತ್ತು. ದಾರಿಯಲ್ಲಿ ಕಂಡ ಅಂಗಡಿಯಲ್ಲಿ ಕಾಯಿ, ಬೆಲ್ಲ, ಕಡ್ಲೆಪುರಿ, ಮಿಠಾಯಿಗಳನ್ನು ಕೊಂಡು ತಾವೂ ತಿಂದು ಮಕ್ಕಳಿಗೆ ಹಂಚುವರು. ಮಕ್ಕಳ ಕೂಗಾಟದಿಂದ ಇಡೀ ಊರಿಗೇ ಗಣಪಯ್ಯನವರ ಜೀಪು ಬಂತೆಂದು ತಿಳಿಯುತ್ತಿತ್ತು.

ಕೊನೆಯವರೆಗೂ ಗಾಂಧಿವಾದಿಯಾಗಿಯೇ ಬಾಳಿದ ಹಾರ್ಲೆ ಗಣಪಯ್ಯ ಮುಂದೆ ಹಲವಾರು ಹಿರಿಯ ರಾಜಕಾರಣಿಗಳಿಗೆ ಗುರುವಾದರು. ಕೃಷಿ ತಜ್ಞರಾಗಿ ಕೃಷಿ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಸದಸ್ಯರಾದರು. ಸ್ವತಂತ್ರ ಪಾರ್ಟಿ ರಾಜ್ಯಾಧ್ಯಕ್ಷರಾದರು. ಭಾರತ ರೈತ ಒಕ್ಕೂಟದ ಕಾರ್ಯದರ್ಶಿಯಾದರು, ಹೀಗೆ ಅನೇಕ ಎತ್ತರಗಳನ್ನು ಏರಿದರು.

ಸೌಹಾರ್ದ ಪರಂಪರೆಯ ಹಲವರು

ಬ್ರಿಟಿಷ್ ಪ್ಲಾಂಟರುಗಳು: ಕಾಫಿ ನಾಡಿನಲ್ಲಿ ಹೆಚ್ಚಿನ ಎಲ್ಲಾ ಪ್ಲಾಂಟೇಷನ್‌ಗಳೂ ಬ್ರಿಟಿಷರಿಂದ ಪ್ರಾರಂಭವಾದವುಗಳು. ಎಲ್ಲಾ ಜನರಲ್ಲಿ ಇರುವಂತೆ ಅವರಲ್ಲಿಯೂ ಕೆಟ್ಟವರೂ ಇದ್ದರು ಒಳ್ಳೆಯವರೂ ಇದ್ದರು. ಆದರೆ ಅವರೆಲ್ಲರಲ್ಲಿ ಒಂದು ಸಾಮಾನ್ಯವಾದ ಗುಣವಿತ್ತು. ಕೆಟ್ಟದ್ದಾಗಲೀ ಒಳ್ಳೆಯದಾಗಲೀ, ಹೆಚ್ಚಿನವರು ಶಿಸ್ತಿನವರು ಮತ್ತು ದೂರ ದೃಷ್ಟಿಯುಳ್ಳವರು. ಅವರು ಕಾಫಿ ತೋಟಗಳನ್ನು ಮಾಡಿದ್ದು ಅದು ರೊಬಸ್ಟವಿರಲಿ, ಅರೇಬಿಕಾ ಇರಲಿ ಅದು ಯಾವ ಪ್ರದೇಶಕ್ಕೆ ಮತ್ತು ಹವಾಗುಣಕ್ಕೆ ಯಾವುದು ಸೂಕ್ತವೋ ಅಲ್ಲಲ್ಲಿಗೆ ಅದನ್ನು ಬಳಸಿದರು. ತೋಟ ಮಾಡುವಾಗ ಕಾಫಿ ಕೃಷಿಗೆ ಅತ್ಯಂತ ಯೋಗ್ಯವಾದ ನೆಲವನ್ನು ಹುಡುಕಿ ಅಲ್ಲಿಯೇ

ಮಾಡಿದರು. ತೋಟದ ಬಂಗಲೆಗಳಿರಲಿ, ಇತರ ಯಾವುದೇ ಕಟ್ಟಡಗಳಿರಲಿ ಹೆಚ್ಚಾಗಿ ಎತ್ತರದ ಸ್ಥಳಗಳಲ್ಲಿ ಭವ್ಯವಾಗಿ ಕಟ್ಟಿದರು. ಅವರು ಅಷ್ಟೇ ಸಾಹಸಿಗಳೂ ಕೂಡಾ. ಸ್ಥಳೀಯರ ಜೊತೆ ಶಿಕಾರಿಗೆ ಹೋಗುತ್ತಿದ್ದವರ ಹಲವಾರು ಸಾಹಸ ಕತೆಗಳು ಅಂದಿನ ಹಿರಿಯರಲ್ಲಿ ಬಾಯಿಪಾಠವಾಗಿರುತ್ತಿದ್ದವು.

ಕೊಡಗಿನಲ್ಲಿ ಎಡ್ವರ್ಡ್ ಚಾರ್ಲ್ಸ್ ವೈಟ್, ಸಿ.ಎಲ್.ಜೆ ಹಂಫ್ರಿಸ್, ಐವರ್ ಬುಲ್, ಜೆ.ಹೆಚ್. ಸ್ಪ್ರಾಟ್, ಜೆ.ಹೆಚ್.ಎಸ್ ಮೋರ್ಗನ್, ಇ.ಆರ್. ವಾಕರ್ ಮುಂತಾದ ಬ್ರಿಟಿಷ್ ಪ್ಲಾಂಟರುಗಳಿದ್ದರೆ. ಮಂಜ್ರಾಬಾದ್ ವಲಯದಲ್ಲಿ ಕ್ರಾಫರ್ಡ್ ಸಹೋದರರು, ಆರ್.ಜಿ ಫಾಸ್ಟರ್. ಆಟ್ಟರ್, ಆರ್.ಹೆಚ್ ಎಲಿಯಟ್. ಇ.ಹೆಚ್.ಯಂಗ್, ಅಟ್ಲೀ, ಮಿಡ್ಲ್ ಟನ್ ಅವರುಗಳಿದ್ದರು.

ಬ್ರಿಟಿಷ್ ಪ್ಲಾಂಟರುಗಳ ಬಗ್ಗೆಯೇ ಒಂದು ಮಹಾನ್ ಗ್ರಂಥ ರಚಿಸುವಷ್ಟು ಕತೆಗಳು, ದಂತಕಥೆಗಳೂ ಮಲೆನಾಡಿನ ತುಂಬ ಹರಿದಾಡುತ್ತಿದ್ದವು. ಅದರಲ್ಲಿ ನಾನಾ ಬಗೆಯ ಕಥೆಗಳಿವೆ.

ಒಬ್ಬ ಬ್ರಿಟಿಷ್ ಪ್ಲಾಂಟರ್, ಸೋಮವಾರಪೇಟೆಯ ಬಳಿಯವನು. ಯಾರಾದರೂ ಬೇರೆ ಕೃಷಿಕರ ದನಗಳು ಈತನ ತೋಟಕ್ಕೆ ಬಂದರೆ ಅದನ್ನು ಕಟ್ಟಿ ಹಾಕುತ್ತಿದ್ದ. ಅದನ್ನು ಹುಡುಕಿಕೊಂಡು ಅದರ ಮಾಲಿಕ ಬಂದರೆ ಆತನನ್ನು ಹಿಡಿಸಿ ಕೊಟ್ಟಿಗೆಯಲ್ಲಿ ಅವನ ದನದ ಪಕ್ಕದಲ್ಲೇ ಕಟ್ಟಿ ಅವನ ಮುಂದೆ ಹುಲ್ಲು ನೀರು ಇಡುತ್ತಿದ್ದನಂತೆ. ಸಂಜೆಯವರೆಗೂ ಹಾಗೇ ಕಟ್ಟಿಹಾಕಿ ನಂತರ ಅವನನ್ನೂ ದನವನ್ನೂ ಬಿಟ್ಟು ಕಳುಹಿಸುತ್ತಿದ್ದನಂತೆ!

ರಕ್ಷಿದಿ ಎಸ್ಟೇಟಿನ ಮೇಜರ್ ಅಟ್ಲಿ ಸಾಹೇಬರದ್ದು ಇನ್ನೊಂದು ಕಥೆ. ಮಿಲಿಟರಿ ಅಧಿಕಾರಿಯಾಗಿದ್ದ ಅಟ್ಲಿ ನಂತರ ರಕ್ಷಿದಿಯಲ್ಲಿ ಕಾಫಿ ತೋಟವನ್ನು ಮಾಡಿದರು. ರಕ್ಷಿದಿ ಊರಿನ ಪಕ್ಕದಲ್ಲೇ

ಇದ್ದ ಇವರ ತೋಟ ಕ್ಯಾಮನಹಳ್ಳಿ ಕಂದಾಯ ಗ್ರಾಮಕ್ಕೇ ಸೇರಿತ್ತು. ಈ ಅಟ್ಲಿ ಸಾಹೇಬರಿಗೂ ಕ್ಯಾಮನಹಳ್ಳಿ ಗ್ರಾಮಸ್ಥರಿಗೂ ಒಂದು ಶಿಕಾರಿಯ ಕಾರಣಕ್ಕೆ ಜಗಳ ಹುಟ್ಟಿಕೊಂಡಿತು. ಗ್ರಾಮಸ್ಥರು, "ನಾವು ಊರವರು, ನಮ್ಮ ಗ್ರಾಮದ ವಿಷಯದಲ್ಲಿ ನಮ್ಮ ತೀರ್ಮಾನವೇ ಅಂತಿಮ" ಎಂದರಂತೆ. ಇದರಿಂದ ಸಿಟ್ಟಿಗೆದ್ದ ಅಟ್ಲಿ ಸಾಹೇಬರು, ಒಂಬೈನೂರು ಎಕರೆಗಳಷ್ಟಿದ್ದ ತನ್ನ ರಕ್ಷಿದಿ ಎಸ್ಟೇಟನ್ನು ಸರ್ಕಾರಕ್ಕೆ ಅರ್ಜಿ ಸಲ್ಲಿಸಿ ಪ್ರತ್ಯೇಕ ಕಂದಾಯ ಗ್ರಾಮವಾಗಿ ಪರಿವರ್ತನೆ ಮಾಡಿಕೊಂಡರಂತೆ. ಹಾಗೆ ಅದು ರಕ್ಷಿದಿ ಕಂದಾಯ ಗ್ರಾಮವಾಗಿ ಕ್ಯಾಮನಹಳ್ಳಿಯಿಂದ ಬೇರೆಯಾಯಿತು. ಆದರೆ ಗೇರು ಹಣ್ಣಿನ ಬೀಜದಂತೆ ರಕ್ಷಿದಿ ಊರು ರಕ್ಷಿದಿ ಕಂದಾಯ ಗ್ರಾಮದಿಂದ ಹೊರಗೇ ಉಳಿಯಿತು!

ಇದಕ್ಕೆ ವ್ಯತಿರಿಕ್ತವಾಗಿ ಜನಪರನೂ ಜನಾನುರಾಗಿಯೂ ಆಗಿದ್ದಾತ ಕರ್ನಲ್ ಕ್ರಾಫರ್ಡ್. ಇವರಿಗೆ ಸಕಲೇಶಪುರದಲ್ಲಿ ತೋಟವಿತ್ತು. ಸಕಲೇಶಪುರ ಕ್ರಾಫರ್ಡ್ ಆಸ್ಪತ್ರೆ ಇವರ ಕೊಡುಗೆ. ಆ ಕಾಲದಲ್ಲೇ ಇದಕ್ಕೆ ಆತ ಮಾಡಿದ ಖರ್ಚು ಒಂದು ಲಕ್ಷದ ಹದಿನೇಳು ಸಾವಿರ ರೂಪಾಯಿ. ಭವ್ಯವಾದ ಕಟ್ಟಡ ಸಕಲೇಶಪುರ ನಗರದ ಮಧ್ಯಭಾಗದಲ್ಲಿ ಎತ್ತರವಾದ ಮತ್ತು ವಿಶಾಲವಾದ ಸ್ಥಳದಲ್ಲಿ ಇದೆ. ಈ ಕಟ್ಟಡದ ಮುಂಭಾಗದಲ್ಲಿ ಇದರ ಸೌಂದರ್ಯವನ್ನು ಕೆಡಿಸುವ ಯಾವುದೇ ಕಟ್ಟಡವನ್ನು ಕಟ್ಟಬಾರದೆಂದು ಅಂದೇ ಸರ್ಕಾರದ ಜೊತೆ ಕರಾರು ಮಾಡಿಕೊಂಡು ಕಟ್ಟಿದ್ದು ಕ್ರಾಫರ್ಡ್‌ನ ಸೌಂದರ್ಯ ಪ್ರಜ್ಞೆಗೂ ದೂರದೃಷ್ಟಿಗೂ ಸಾಕ್ಷಿ. ಈ ಆಸ್ಪತ್ರೆಯ ಉದ್ಘಾಟನೆಗೆ ಮೈಸೂರು ಮಹಾರಾಜರೇ ಬಂದಿದ್ದರು.

ಶಿಕ್ಷಣ, ವೈದ್ಯಕೀಯ ಸೌಲಭ್ಯ, ಭೂಮಾಪನ, ಇತ್ಯಾದಿ ಹಲವಾರು ಕಾರ್ಯಗಳು ಇವರ ಕೊಡುಗೆ. ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯ ಸದಸ್ಯನಾಗಿ, ರಾಜಸಭಾ ಭೂಷಣ ಎಂಬ

ಗೌರವಕ್ಕೆ ಪಾತ್ರನಾಗಿದ್ದ. ಸಕಲೇಶಪುರದ ಮಹಿಳಾ ಸಮಾಜದ ಕ್ರಾಫರ್ಡ್ ವಿಂಗ್, ಮೈಸೂರು ವಿಶ್ವವಿದ್ಯಾಲಯದ ಕ್ರಾಫರ್ಡ್ ಹಾಲ್ ಮುಂತಾದ ಅನೇಕ ರಚನೆಗಳು ಕೂಡಾ ಇವರ ಕೊಡುಗೆ, ಸಕಲೇಶಪುರ ಮಂಜ್ರಾಬಾದ್ ಕ್ಲಬ್‌ನ ಅಧ್ಯಕ್ಷನಾಗಿ, ದಕ್ಷಿಣ ಭಾರತದ ಪ್ಲಾಂಟೇಷನ್ ಬೆಳೆಗಾರರ ಒಕ್ಕೂಟದ ಉಪಾಧ್ಯಕ್ಷನೂ ಆಗಿದ್ದ ಕ್ರಾಫರ್ಡ್‌ಗೆ ಮಲೆನಾಡಿನ ಬಗ್ಗೆ ಅಪಾರ ಪ್ರೀತಿ. ಇಲ್ಲಿನ ದಟ್ಟ ಕಾನನದ ಪರಿಚಯ ಚೆನ್ನಾಗಿದ್ದ ಕ್ರಾಫರ್ಡ್ ಇದರ ಉಳಿವಿನ ಬಗ್ಗೆಯೂ ತುಂಬು ಕಾಳಜಿ ಇತ್ತು. ಇಲ್ಲಿನ ಬೆಟ್ಟಗಳಲ್ಲಿ ಕುದುರೆಯನ್ನೇರಿ ತಿರುಗುತ್ತಿದ್ದ. ಅವೆಲ್ಲ ಈಗ ಕ್ರಾಫರ್ಡ್ ದಾರಿಗಳೆಂದು ಕರೆಯಲ್ಪಡುತ್ತಿವೆ.

ಕ್ರಾಫರ್ಡ್ ಆ ಕಾಲದಲ್ಲೇ ಶಿಕಾರಿಯನ್ನು ಕಾನೂನಿನ ಮೂಲಕ ನಿಷೇಧಿಸಲು ಪ್ರಯತ್ನಪಟ್ಟರು. ಆದರೆ ಹಲವರ ವಿರೋಧದಿಂದ ಅದು ಸಾಧ್ಯವಾಗಲಿಲ್ಲ. ಕೊನೆಗೆ 'ಹೆಣ್ಣು ಜಿಂಕೆಯನ್ನು ಕೊಲ್ಲಬಾರದು' ಎಂದು ಕಾನೂನು ಹೊರಡಿಸಲಷ್ಟೇ ಆತ ಶಕ್ತನಾದರು.

ಬಾಳೆಹೊನ್ನೂರಿನಲ್ಲಿರುವ ಕಾಫಿ ಸಂಶೋಧನಾ ಕೇಂದ್ರಕ್ಕೂ ಪ್ರಾರಂಭದಲ್ಲಿ ಸ್ಥಳದಾನ ಮಾಡಿದವರು ಕೂಡಾ ಇವರೇ.

"ಇಂಡಿಯಾದ ಮಲೆನಾಡು ಬಹು ಸುಂದರವಾದುದು. ಇಲ್ಲಿಯ ಜನ ಸೌಜನ್ಯಶೀಲರು, ಗೌರವವಂತರು, ನಮ್ಮನ್ನೆಂದೂ ವಿದೇಶೀಯರೆಂದು ನೋಡಲಿಲ್ಲ. ಮೋಸ ಮಾಡಲಿಲ್ಲ, ಜಗಳ ತೆಗೆಯಲಿಲ್ಲ" ಎಂದು ಆತ ತನ್ನ ಡೈರಿಯಲ್ಲಿ ಉಲ್ಲೇಖಿಸಿದ್ದಾರೆ.

ತನ್ನ ತೋಟದ ಕೆಲಸಗಾರರ ಬಗ್ಗೆ ಅಪಾರ ಕಾಳಜಿ ವಹಿಸುತ್ತಿದ್ದ ಕ್ರಾಫರ್ಡ್, ಜನರಿಗೆ ಕುಡಿಯಲು ಶುದ್ಧ ನೀರು, ಒಳ್ಳೆಯ ವಸತಿ ಮತ್ತು ಕಾಲ ಕಾಲಕ್ಕೆ ವೈದ್ಯಕೀಯ ಸೌಲಭ್ಯ

ನೀಡಲು ಪ್ರಾಮುಖ್ಯತೆ ನೀಡುತ್ತಿದ್ದರು. ಇವೆಲ್ಲ ಕಾರಣಗಳಿಂದ ಕರ್ನಾಟಕದ ಕಾಫಿ ವಲಯದ ಜನರಲ್ಲಿ ಕ್ರಾಫರ್ಡ್‌ರ ಬಗ್ಗೆ ಜನರಲ್ಲಿ ಇಂದಿಗೂ ಅಪಾರ ಗೌರವ ಇದೆ.

ಕ್ರಾಫರ್ಡ್‌ನ ವಂಶಸ್ಥರು ತಮಿಳುನಾಡಿನ ಊಟಿಯಲ್ಲಿ ನೆಲೆಸಿದ್ದು ವರ್ಷಕ್ಕೊಮ್ಮೆ ಸಕಲೇಶಪುರದ ಆಸ್ಪತ್ರೆಗೆ ಭೇಟಿ ನೀಡುತ್ತಾರೆ.

ಸಕಲೇಶಪುರದಲ್ಲಿ ಇನ್ನೊಬ್ಬ ಪ್ಲಾಂಟರ್ ಇ.ಹೆಚ್. ಯಂಗ್ಸ್ ಎಂಬವರು ಕಟ್ಟಿಸಿದ ಸರ್ಕಾರಿ ಪ್ರೌಢಶಾಲೆಯಿದೆ. ಅದು ಸಕಲೇಶಪುರದ ಮಂಜ್ರಾಬಾದ್ ಕ್ಲಬ್ಬಿನ ಪಶ್ಚಿಮಕ್ಕೆ, ಹತ್ತಿರದಲ್ಲೇ ಹೆದ್ದಾರಿಯ ಪಕ್ಕದಲ್ಲಿಯೇ ಇದೆ. ಅದೊಂದು ಸುಂದರ ಕಟ್ಟಡ. ಅದರ ಮುಂಭಾಗದಲ್ಲಿ ಯಂಗ್ಸ್ ಹೆಸರು ಕೆತ್ತಲ್ಪಟ್ಟಿತ್ತು. ಆ ಕಟ್ಟಡದ ರಿಪೇರಿಯ ಸಂಭರ್ಭದಲ್ಲಿ ಆತನ ಹೆಸರನ್ನು ಕಟ್ಟಡದಿಂದ ತೆಗೆದು ಹಾಕಿದ್ದರು. ಜನರ ವಿರೋಧದ ನಂತರ ಯಂಗ್ಸ್ ಅವರ ಹೆಸರನ್ನು ಮತ್ತೆ ಬರೆಸಲಾಯಿತು.

ಇನ್ನೊಬ್ಬ ಜನಾನುರಾಗಿ ಹಾಗೂ ಅದ್ಭುತ ವ್ಯಕ್ತಿ ಬ್ರಿಟಿಷ್ ಅಧಿಕಾರಿ ರ್‍ಯಾಡ್‌ಕ್ಲಿಫ್ (Radcliff). ಇವರು ದಕ್ಷಿಣ ಭಾರತದ ಬೆಳೆಗಾರರ ಒಕ್ಕೂಟದ ಕಾರ್ಯದರ್ಶಿಯಾಗಿ ಒಳ್ಳೆಯ ಕೆಲಸವನ್ನು ಮಾಡಿ ಹೆಸರು ಗಳಿಸಿದವರು. ಇವರೂ ಕೂಡ ಸಕಲೇಶಪುರದ ನಿವಾಸಿ. ಹಾಸನ ಮಂಗಳೂರು ಹೆದ್ದಾರಿಯಲ್ಲಿ ಸಕಲೇಶಪುರದಿಂದ ಏಳು ಕಿ.ಮೀ. ದೂರದ ಹೊಸೂರ್ ಎಸ್ಟೇಟ್ ಬಳಿ ಹೆದ್ದಾರಿ ಪಕ್ಕದಲ್ಲೇ ಪ್ರವಾಸಿಗರು ರ್‍ಯಾಡ್‌ಕ್ಲಿಫ್ ಬಂಗಲೆಯನ್ನು ಕಾಣಬಹುದು.

ಕಾರ್ಮಿಕರ ಹಿತ ರಕ್ಷಣೆ ಮತ್ತು ಸುಧಾರಣೆಯಲ್ಲಿ ರ್‍ಯಾಡ್ ಕ್ಲಿಫ್‌ರ ಕೊಡುಗೆ ದೊಡ್ಡದು.

ರ್‍ಯಾಡ್‌ಕ್ಲಿಪ್, ಕಾಫಿ ತೋಟಗಳಲ್ಲಿ ಕೆಲಸಗಾರರ ಕೂಲಿ

ದಿನವೊಂದಕ್ಕೆ ಒಂದೂವರೆ ಆಣೆ ಇದ್ದಾಗ ಅಂದರೆ ೬೦ ವರ್ಷಗಳ ಹಿಂದೆ "೨೦೦೦ ಇಸವಿಯ ವೇಳೆಗೆ ಒಬ್ಬನ ದಿನಗೂಲಿ ನೂರು ರುಪಾಯಿ ಆಗಲಿದೆ ಎಂದರು! ಆಗ ನೂರು ರೂಪಾಯಿಗೆ ಹತ್ತು ಎಕರೆ ಜಮೀನು ಸಿಗುತ್ತಿತ್ತು. ಜನರು ರ್‍ಯಾಡ್‌ಕ್ಲಿಫ್ (Radcliff) ನಿಗೆ ತಲೆ ಕೆಟ್ಟಿದೆ ಎಂದರು.

ಆದರೆ ಆತ ಹೇಳಿದ ವಾಯಿದೆಗಿಂತ ಒಂದು ವರ್ಷ ಮೊದಲೇ ೧೯೯೯ ರಲ್ಲಿ ದಿನಗೂಲಿ ನೂರು ರೂ. ಆಯಿತು!

ರ್‍ಯಾಡ್‌ಕ್ಲಿಪ್ ಹಲವು ವರ್ಷಗಳ ಮುಂದಿನದನ್ನು ತರ್ಕಬದ್ಧವಾಗಿ ಕಾಣಬಲ್ಲವನಾಗಿದ್ದರು.

ಸಕಲೇಶಪುರದ ಹಾರ್ಲೆ ಎಸ್ಟೇಟ್ ಬ್ರಿಟಿಷರಿಂದ ಪ್ರಾರಂಭಿಸಲ್ಪಟ್ಟ ಕಾಫಿ ತೋಟ. ಎಡ್ಮಂಡ್ ಬ್ರಾಗ್ ಟನ್ ಎಲಿಕಾಟ್ (Edmund Broughton elicott) ಎಂಬಾತ ಸಕಲೇಶಪುರ ತಾಲ್ಲೂಕಿನ ಕುಂಬರಡಿ ಗ್ರಾಮದ ಕೆಂಗನ ಮಡಿ ಎಂಬಲ್ಲಿ ಒಂದು ತೋಟವನ್ನು ಮಾಡಿದ್ದ. ೧೮೯೪ರಲ್ಲಿ ಚಾರ್ಲ್ಸ್ ಹೆನ್ರಿ ಗಾಡ್ಫ್ರೆಯ (Charles Henry Godfrey) ಇದನ್ನು ಖರೀದಿಸಿದ. ಈತ ಇಂಗ್ಲೆಂಡ್‌ನಲ್ಲಿ ಮಿಲಿಟರಿ ಅಧಿಕಾರಿಯಾಗಿದ್ದು ಭಾರತಕ್ಕೆ ಒಮ್ಮೆ ಮಾತ್ರ ಭೇಟಿ ನೀಡಿದ. ಹಾರ್ಲೆ ಎಸ್ಟೇಟ್‌ಗೆ ಬರಲೇ ಇಲ್ಲ. ಎಲ್ಲವನ್ನೂ ಈತನ ಮ್ಯಾನೇಜರ್ ಎ. ಮಿಡ್ಲ್‌ಟನ್ (A. middleton) ನಿಭಾಯಿಸುತ್ತಿದ್ದರು.

ಈ ಮಿಡ್ಲ್‌ಟನ್‌ನ ತಂದೆ ಜೆ.ಎಸ್. ಮಿಡ್ಲ್‌ಟನ್ ಕರ್ನಾಟಕದ ಅತಿ ದೊಡ್ಡ ಎಸ್ಟೇಟುಗಳಲ್ಲಿ ಒಂದಾದ ಸಕಲೇಶಪುರ ತಾಲ್ಲೂಕಿನ ಕಾಡುಮನೆ ಎಸ್ಟೇಟನ್ನು ಮಾಡಿದವರು. ಸುಮಾರು ಏಳು ಸಾವಿರ ಎಕರೆ ಪ್ರದೇಶವಾದ ಕಾಡುಮನೆ ಎಸ್ಟೇಟಿನಲ್ಲಿ ಜೆ.ಎಸ್. ಮಿಡ್ಲ್‌ಟನ್ ಮೊದಲು ಕಾಫಿ ಕೃಷಿ ಮಾಡಿದರು. ಅತಿ ಹೆಚ್ಚು ಮಳೆಯ

ಪ್ರದೇಶವಾದ ಇಲ್ಲಿ ಕಾಫಿ ಕೈಗೂಡಲಿಲ್ಲ. ಜೆ.ಎಸ್. ಮಿಡ್ಲ್‌ಟನ್ ನಿಧನಾನಂತರ ಮಗ ಎ. ಮಿಡ್ಲ್‌ಟನ್ ಇಲ್ಲಿನ ಸಹಜ ಬೆಳೆಯಾದ ಏಲಕ್ಕಿ ಮತ್ತು ಮೆಣಸನ್ನು ಬೆಳೆಯಲಾರಂಭಿಸಿ ಅದೂ ರೋಗದಿಂದ ನಾಶವಾದ ಮೇಲೆ ಬೇರೊಬ್ಬ ಬ್ರಿಟಿಷರಿಗೆ ತೋಟವನ್ನು ಮಾರಿದರು. ಆಗ ಕಾಡುಮನೆ ಎಸ್ಟೇಟನ್ನು ಕೊಂಡವರು ಎರ್ಲ್ ಆಫ್ ವಾರ್‌ವಿಕ್ (Earl of Warvick). ನಂತರ ಮಿಡ್ಲಟನ್ ಅವರಲ್ಲೇ ಮ್ಯಾನೇಜರ್ ಆಗಿ ಕೆಲಸಕ್ಕೆ ನಿಂತರು. ವಿಶಾಲವಾದ ಅರಣ್ಯ ಪ್ರದೇಶ ಹೊಂದಿದ್ದ ಕಾಡುಮನೆಯಲ್ಲಿ ಶಿಕಾರಿ ಮಾಡುವ ಉದ್ದೇಶದಿಂದ ಎರ್ಲ್ ಆಫ್ ವಾರ್‌ವಿಕ್ (Earl of Warvick). ಅವರು ಅದನ್ನು ಕೊಂಡಿದ್ದರು. ಆದರೆ ಅನಾರೋಗ್ಯದಿಂದಾಗಿ ಅವರು ಭಾರತಕ್ಕೆ ಬರಲೇ ಇಲ್ಲ. ನಂತರ ಅವರು ಕಾಡುಮನೆ ಎಸ್ಟೇಟನ್ನು ಬ್ರೂಕ್ ಬಾಂಡ್ ಕಂಪೆನಿಗೆ ಮಾರಾಟ ಮಾಡಿದರು. ಬ್ರೂಕ್ ಬಾಂಡ್ ಕಂಪನಿಯವರು ಕಾಡುಮನೆಯನ್ನು ಚಹಾ ತೋಟವಾಗಿ ಪರಿವರ್ತಿಸಿದರು. ಕಾಡುಮನೆ ಎಸ್ಟೇಟ್ ಈಗ ಬೇರೆಯವರ ಒಡೆತನದಲ್ಲಿ ಇದ್ದರೂ ಚಹಾ ತೋಟವಾಗಿಯೇ ಮುಂದುವರೆದಿದೆ.

ಕಾಡುಮನೆ ತೋಟ ಬ್ರೂಕ್ ಬಾಂಡ್ ಕಂಪೆನಿಗೆ ಮಾರಾಟವಾದ ನಂತರವೂ ಕೆಲಕಾಲ ಎ. ಮಿಡ್ಲಟನ್ ಅಲ್ಲಿ ಕೆಲಸ ಮಾಡಿದರು. ನಂತರ ಹೆನ್ರಿ ಗಾಡ್ ಫ್ರೆಗೆ ಸೇರಿದ ಹಾರ್ಲೆ ಮತ್ತು ಯಲಗುಡಿಗೆ ತೋಟಗಳಿಗೆ ಮ್ಯಾನೇಜರ್ ಆಗಿ ಸೇರಿದರು.

ಹಾರ್ಲೆ ತೋಟವನ್ನು ಸುಮಾರು ನಾಲ್ಕುನೂರು ಎಕರೆಗಳಿಗೆ ವಿಸ್ತರಿಸಿದ್ದು ಮಿಡ್ಲ್‌ಟನ್ ಅವರು. ಆದರೆ ಅದೂ ಕೂಡಾ ಹೆಚ್ಚಿನ ಭಾಗ ಏಲಕ್ಕಿ ತೋಟವಾಗಿತ್ತು. ೧೯೨೧ ರಿಂದ ೧೯೫೫ರ ವರೆಗೆ ಹಾರ್ಲೆ ಎಸ್ಟೇಟ್‌ನ ಅಭಿವೃದ್ಧಿಯಲ್ಲಿ ಮಿಡ್ಲಟನ್‌ನ ಕೊಡುಗೆ ದೊಡ್ಡದು.

ಮಿಡ್ಲ್‌ಟನ್ ತುಂಬ ಜನಾನುರಾಗಿ. ಸುತ್ತಲಿನ ಎಲ್ಲಾ ರೈತರಿಗೂ ಬಂಧುವಿನಂತೆ ಇದ್ದರು. ಸುತ್ತಲಿನ ರೈತರಿಗೆ ಕಾಫಿ ತೋಟ ಮಾಡಲು ಸಲಹೆ, ಸಹಾಯ, ಹಣಕಾಸಿನ ನೆರವು ಕೊಡುತ್ತಿದ್ದರು. ಸಾಲಕ್ಕೆ ಪ್ರತಿಯಾಗಿ ಅವರಿಗೆ ಭತ್ತ ಕೊಟ್ಟರಾಯಿತು, ಆ ಭತ್ತವನ್ನು ಅವರು ಹಾರ್ಲೆ ತೋಟದಲ್ಲಿ ಕೂಲಿಕಾರ್ಮಿಕರಿಗೆ ವರ್ಷವಿಡೀ ಕೊಡುತ್ತಿದ್ದರು. ಇದರಿಂದ ಕೂಲಿ ಕಾರ್ಮಿಕರು ಹಸಿವಿಂದ ಬಳಲುವುದು ತಪ್ಪುತ್ತಿತ್ತು. ರೈತರು ಲೇವಾದೇವಿಯವರಿಂದ ಸಾಲ ತಂದರೆ ಬೆಳೆಬಂದ ಸಮಯದಲ್ಲಿ ಕಡಿಮೆ ಬೆಲೆಗೆ ಭತ್ತ ಮಾರಿ ಸಾಲದ ಬಡ್ಡಿ ಕಟ್ಟುವುದು ತಪ್ಪುತ್ತಿತ್ತು. ಇದರಿಂದಾಗಿ ಈ ಪ್ರದೇಶದ ಅನೇಕ ರೈತರು ಕಾಫಿ ತೋಟ ಮಾಡಿಕೊಳ್ಳಲು ಸಾಧ್ಯವಾಯಿತು. ಮಿಡ್ಲ್‌ಟನ್ ಅವರಿಗೆ ಕನ್ನಡವೂ ಚೆನ್ನಾಗಿ ಬರುತ್ತಿದ್ದು. ಈ ಪ್ರದೇಶದ ಎಲ್ಲಾ ರೈತರ ಹೆಸರುಗಳೂ ಗೊತ್ತಿದ್ದವು. ಪ್ರತಿ ಮನೆಗೂ ಹೋಗಿ ಬರುವಷ್ಟು ಒಡನಾಟವೂ ಇತ್ತು. ಈಗಲೂ ಈ ಪ್ರದೇಶದ ಹಳಬರು ಮಿಡ್ಲ್‌ಟನ್ ಅವರನ್ನು ತಮ್ಮ ಹಿರಿಯ ಬಂಧುವಿನಂತೆ ನೆನೆಯುತ್ತಾರೆ.

೧೯೫೫ರಲ್ಲಿ ಮಿಡ್ಲ್‌ಟನ್ ಹಾರ್ಲೆ ಎಸ್ಟೇಟ್‌ನ್ನು ಗಾಡ್ ಫ್ರೆಯ ಪರವಾಗಿ ಮಾರಾಟ ಮಾಡಿ ಗಣಪಯ್ಯ ಸಹೋದರರಿಗೆ ಹಸ್ತಾಂತರಿಸಿದರು. ಗಣಪಯ್ಯನವರು ಕೂಡಾ ಮಿಡ್ಲ್‌ಟನ್ ಅವರ ಆಡಳಿತದ ಒಳ್ಳೆಯ ಗುಣದಿಂದ ಪ್ರಭಾವಿತರಾಗಿರುವುದು ಕಂಡು ಬರುತ್ತದೆ.

ಆ ನಂತರ ಮಿಡ್ಲ್‌ಟನ್ ಚಿಕ್ಕಮಗಳೂರು ಜಿಲ್ಲೆಯ ಯಲಗುಡಿಗೆಯಲ್ಲಿದ್ದ ತೋಟದಲ್ಲಿ ಮ್ಯಾನೇಜರ್ ಆಗಿ ಮುಂದುವರೆದರು. ಗಾಡ್ ಫ್ರೆ ನಿಧನಾನಂತರ ಅವರೇ ಅದನ್ನು ಸ್ವಂತಕ್ಕೆ ಖರೀದಿಸಿ ಅಲ್ಲಿಯೇ ನೆಲೆನಿಂತರು.

ಮಿಡ್ಲಟನ್ ಯಲಗುಡಿಗೆಯಲ್ಲೇ ನಿಧನರಾದರು. ನಂತರ ಆ ತೋಟ ಕೆ.ಆರ್. ಸೇತ್ನಾ ಎಂಬುವರಿಗೆ ಮಾರಾಟವಾಯಿತು. ಅವರು ಒಳ್ಳೆಯ ಪರಿಸರಾಸಕ್ತ ಹಾಗೂ ಸಾವಯವ ಕೃಷಿಕರು. ಅವರು ದೊಡ್ಡ ಮಟ್ಟದ, ಆರ್ಕಿಡ್‌ಗಳ ಸಂಗ್ರಾಹಕರೂ ಹೌದು. ಪೂರ್ಣಚಂದ್ರ ತೇಜಸ್ವಿ, ಪಕ್ಷಿ ತಜ್ಞ ಸಲೀಂ ಅಲಿ ಮುಂತಾದವರ ನಿಕಟವರ್ತಿಗಳೂ ಆಗಿದ್ದರು. ಆ ತೋಟವೀಗ ಅವರ ಕುಟುಂಬದವರಲ್ಲಿ ಇದೆ.

ಈ ಬ್ರಿಟಿಷ್ ಪ್ಲಾಂಟರುಗಳಲ್ಲಿ ಮೊದಲಿಗೆ ಹೇಳಿದ ಇಬ್ಬರು ವಿಚಿತ್ರ ನಡವಳಿಕೆ ತೋರಿದರೂ ಉಳಿದಂತೆ ಎಲ್ಲಾ ಜನರ ಜೊತೆ ಸೌಹಾರ್ದಯುತವಾಗಿ ನಡೆದುಕೊಂಡು ಎಲ್ಲರಿಗೂ ಆರೋಗ್ಯ ಮತ್ತು ಶಿಕ್ಷಣ ನೀಡುವಲ್ಲಿ ಆದ್ಯತೆ ನೀಡುತ್ತಿದ್ದರು. ಇವರಲ್ಲಿ ಯಾರೂ ಭಾರತಕ್ಕೆ ಸ್ವಾತಂತ್ರ್ಯ ದೊರೆತಾಗ ಇಂಗ್ಲಂಡಿಗೆ ವಾಪಸ್ ಹೋಗದೇ ಇಲ್ಲೇ, ಭಾರತೀಯರಾಗಿ ಬದುಕಿದ್ದರು.

ಎನ್.ಜಿ. ರವೀಂದ್ರನಾಥ್: ಆ ಕಾಲದಲ್ಲಿ ಇನ್ನೂ ಸಾಕ್ಷರತಾ ಆಂದೋಲನ ಪ್ರಾರಂಭವಾಗಿಲಿಲ್ಲ. ಆದರೆ ವಯಸ್ಕರ ಶಿಕ್ಷಣ ಸಮಿತಿ ಇತ್ತು ಅದರ ಮೂಲಕ ಒಂದಷ್ಟು ರಾತ್ರಿ ಶಾಲೆಗಳನ್ನು ಪ್ರಾರಂಭ ಮಾಡಲಾಯಿತು. ಅದಕ್ಕಾಗಿ ಸಕಲೇಶಪುರ ನಗರದಲ್ಲಿ ಒಂದು ಹತ್ತು ದಿನಗಳ ತರಬೇತಿ ಶಿಬಿರ ನಡೆಯಿತು. ತರಬೇತಿ ಪಡೆದವರು ನಂತರ ತಮ್ಮ ತಮ್ಮ ಊರಿನಲ್ಲಿ ರಾತ್ರಿ ಶಾಲೆಗಳನ್ನು ನಡೆಸಬೇಕಿತ್ತು. ಅದಕ್ಕಾಗಿ ಒಂದಷ್ಟು ಪಠ್ಯ ಪುಸ್ತಕಗಳು, ಇತರ ಪರಿಕರಗಳು. ಒಂದು ಲಾಟೀನು, ಅದಕ್ಕೊಂದಷ್ಟು ಸೀಮೆ ಎಣ್ಣೆ ದೊರೆಯುತ್ತಿತ್ತು. ಜೊತೆಯಲ್ಲಿ ತರಗತಿ ನಡೆಸುವವರಿಗೆ ಸಣ್ಣ ಸಂಭಾವನೆಯೂ ಇತ್ತು. ಆಗ ರವೀಂದ್ರನಾಥರು ಹಲವು ಯುವಕರನ್ನು ಅಲ್ಲಿ ತರಬೇತಿ ಪಡೆಯಲು ಕಳುಹಿಸಿದರು. ಹಾಗೆ ಹೋದವರಲ್ಲಿ ನಮ್ಮೂರಿನ ಪಕ್ಕದ ಮಾವಿನಹಳ್ಳಿ ಕಾಳಯ್ಯ

ಎಂಬುವರಿದ್ದರು.

ರವೀಂದ್ರನಾಥರು ಅವರ ಹೆಸರನ್ನು ಬರೆಸುವಾಗ ಕಾಳಿಪ್ರಸಾದ್ ಎಂದು ಬರೆಸಿದರು. ನಂತರ ಆತನಲ್ಲಿ ಯಾರು ಕೇಳಿದರೂ ನೀನು ನಿನ್ನ ಹೆಸರನ್ನು ಕಾಳಿಪ್ರಸಾದ್ ಎಂದು ಹೇಳು ಎಂದರು.

ನನಗೆ ಆಗ ಇದು ವಿಚಿತ್ರವೆನಿಸಿತು. ಆದರೆ ಸುಮ್ಮನಿದ್ದೆ. ದಿನಕಳೆದಂತೆ ಕಾಳಿಪ್ರಸಾದ್ ತಮ್ಮ ಕಡೆಯ ಅನೇಕ ಹುಡುಗರಿಗೆ ಇದೇ ರೀತಿ ಮರುನಾಮಕರಣ ಮಾಡಿದರು. ಆಗ ನಾನು ಈ ವಿಚಾರವನ್ನು ರವೀಂದ್ರನಾಥರಿಗೆ ಹೇಳಿದೆ. ಆಗ ಅವರು ನೋಡು ಅವನಿಗೆ ಸ್ವಲ್ಪ ವಿದ್ಯೆ ಮೊದಲೇ ಇತ್ತು. ಆದರೆ ಅವನು ಮೂರನೆಯ ತರಗತಿಗೇ ಶಾಲೆ ಬಿಟ್ಟಿದ್ದಾನೆ. ಅದಕ್ಕೆ ಅವನ ಬಡತನ ಒಂದೇ ಕಾರಣ ಅಂತ ತಿಳಿಯಬೇಡ. ಮೊದಲು ನಾನು ಅವನ ಹೆಸರನ್ನು ಕೇಳಿದಾಗ, ಹಿಂಜರಿಯುತ್ತ "ಕಾಳಯ್ಯ" ಅಂತ ಗಂಟಲೊಳಗಿಂದ ಹೇಳಿದ. ಈಗ ಅವನ ಹೆಸರನ್ನು ಹೇಳುವಾಗ ಅವನ ಸ್ವರದಲ್ಲಾದ ಬದಲಾವಣೆ ಮತ್ತು ಆತ್ಮವಿಶ್ವಾಸವನ್ನು ನೋಡು ಎಂದರು.

ಕಾಳಿಪ್ರಸಾದ್ ಮುಂದೆ ಜಿಲ್ಲಾ ಪರಿಷತ್ ಸದಸ್ಯರೂ ಆದರು. ಅದು ಬೇರೆಯೇ ಒಂದು ಕಥೆಯಿದೆ.

ತರಬೇತಿಯ ನಂತರ ಕಾಳಿಪ್ರಸಾದ್ ಗಾಣದ ಹೊಳೆಯಲ್ಲಿ ರಾತ್ರಿ ಶಾಲೆಯನ್ನು ನಡೆಸತೊಡಗಿದರು. ಈ ರೀತಿ ಹಲವು ಕಡೆಗಳಲ್ಲಿ ಶಾಲೆಗಳು ನಡೆಯುತ್ತಿದ್ದವು. ಅದರಿಂದ ಹಲವರಿಗೆ ಒಂದಷ್ಟು ಸಂಭಾವನೆ ಇತ್ಯಾದಿ ದೊರೆತರೂ ಬಹಳ ಪ್ರಯೋಜನವೇನೂ ಆಗಲಿಲ್ಲ. ಅದಕ್ಕೆ ಹಲವಾರು ಕಾರಣಗಳಿದ್ದವು. ಮುಖ್ಯವಾಗಿ ಆಗ ಅದು ಒಂದು ಜನಾಂದೋಲನದ ರೂಪದಲ್ಲಿ ಇರಲಿಲ್ಲ. ಬಹಳಷ್ಟು ಜನರು ಇದು ತರಗತಿ ನಡೆಸುವವರು

ಹಣ ಪಡೆಯಲು ಮಾಡುತ್ತಿದ್ದಾರೆಂದು ತಿಳಿದು ಅದರಲ್ಲಿ ಆಸಕ್ತಿ ತೋರಲಿಲ್ಲ. ಜೊತೆಗೆ ಈ ವಯಸ್ಕರ ಶಿಕ್ಷಣವನ್ನೇ ಲೇವಡಿ ಮಾಡುತ್ತ, ಕುಹಕ ವ್ಯಂಗ್ಯಗಳಿಂದ ನಿರುತ್ಸಾಹಗೊಳಿಸುವ ಮಂದಿಯೂ ಸಾಕಷ್ಟು ಇದ್ದರು. ಇವರಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಅರೆಶಿಕ್ಷಿತ ಭೂಮಾಲಿಕ ವರ್ಗವೇ ವಯಸ್ಕರ ಶಿಕ್ಷಣದ ವಿರುದ್ಧವಾಗಿದ್ದರು. ಮುಂದೆ ಬದಲಾವಣೆಯ ದಿನಗಳು ಬಂದವು ಆದರೆ ಅದಕ್ಕಾಗಿ ಮುಂದೆ ಸಾಕ್ಷರತಾ ಆಂದೋಲನದವರೆಗೆ ಕಾಯಬೇಕಾಯಿತು.

ಗಣಪಯ್ಯನವರು ಈಗಾಗಲೇ ನಡಹಳ್ಳಿ ಗ್ರಾಮದಲ್ಲಿ ದಲಿತರಿಗೆ ನೆಲ ಕೊಡಿಸಿ ತೋಟ ಮಾಡಿಕೊಡುವ ಪ್ರಯತ್ನದಲ್ಲಿ ಇದ್ದರು. ಅದರ ಮುಂದುವರಿಕೆಯಾಗಿ ಅಗಲಟ್ಟಿ ಮತ್ತು ಮಾವಿನಹಳ್ಳಿ ಗ್ರಾಮದಲ್ಲಿ ಸುಮಾರು ನೂರು ಎಕರೆ ಜಮೀನನ್ನು ನಲುವತ್ತು ದಲಿತ ಕುಟುಂಬಗಳಿಗೆ ಮಂಜೂರು ಮಾಡಿಸಿದರು. ಅದು ಮರಗಿಡಗಳಿಲ್ಲದ ಬೋಳು ದೀಣೆ ಪ್ರದೇಶವಾಗಿದ್ದು ತುಂಬಾ ಈಚಲು ಗುತ್ತಿಗಳಿದ್ದವು. ಬೇರೆಯವರೆಲ್ಲ ಆಗ “ಗಣಪಯ್ಯ ನಿಮ್ಮಗೆಲ್ಲ ಈಚಲು ಗುತ್ತಿ ಅಗಿಯಕ್ಕೆ ಮಾಡಿಕೊಡ್ತಾ ಇದ್ದಾರೆ” ಎಂದು ಕುಟುಕುತ್ತಿದ್ದರು. ಪ್ರಾರಂಭದ ಹಂತದಲ್ಲಿ ದಲಿತರು ಆ ನೆಲವನ್ನು ಪಡೆಯಲು ಸ್ವಲ್ಪ ಹಿಂಜರಿದರೂ ನಿದಖಾನ್‌ವಾಗಿ ಅವರೂ ಅರ್ಥಮಾಡಿಕೊಂಡು, ಅಲ್ಲಿ ಕೆಲಸ ಮಾಡಲು ಪ್ರಾರಂಭಿಸಿದರು. ಹೀಗೆ ಜಮೀನು ಪಡೆದವರಲ್ಲಿ ಕಾಳಿಪ್ರಸಾದ್ ಕುಟುಂಬದವರೂ ಇದ್ದಾರೆ.

ಬಡವರಿಗಾಗಿ ಆಗ ಜನತಾ ಮನೆಗಳ ಯೋಜನೆ ಜಾರಿಗೆ ಬಂದಿತ್ತು. ಆಗ ಒಂದು ಮನೆಯ ಒಟ್ಟು ಖರ್ಚು ಒಟ್ಟು ಎರಡೂವರೆ ಸಾವಿರ ರೂಗಳು. ಅದರಲ್ಲಿ ಎರಡು ಸಾವಿರ ರೂ ಇಪ್ಪತ್ತು ವರ್ಷಗಳ ಅವಧಿಯ ಸರ್ಕಾರದ ಸಾಲವಿದ್ದರೆ, ಉಳಿದ

ಐದು ನೂರು ರೂಗಳನ್ನು ಫಲಾನುಭವಿಯೇ ಭರಿಸಬೇಕಿತ್ತು. ಅದರಲ್ಲಿ ಒಂದು ಸಾವಿರ ರೂಗಳಿಗೆ ಹೆಂಚು ಮತ್ತು ಮರವನ್ನು ಸರ್ಕಾರವೇ ಟೆಂಡರ್ ಮೂಲಕ ಪಡೆದು ಹಂಚುತ್ತಿತ್ತು. ಉಳಿದ ಹಣದಲ್ಲಿ ತಳಪಾಯ, ಗೋಡೆ, ಬಡಗಿ ಕೆಲಸ, ಸಾರಣೆ ಇತ್ಯಾದಿಗಳು ಆಗಬೇಕಿತ್ತು. ಈ ಹಣದಲ್ಲಿ ಮನೆಯನ್ನು ಪೂರ್ತಿ ಮಾಡಲು ಸಾಧ್ಯವಾಗುತ್ತಿರಲಿಲ್ಲವಾದ್ದರಿಂದ ನಿಜವಾದ ಬಡವರಿಗೆ ಮನೆ ಕಟ್ಟಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಅಷ್ಟೇ ಅಲ್ಲ ಅದಕ್ಕಾಗಿ ಕೂಲಿಕೆಲಸ ಬಿಟ್ಟು ಹಲವು ಸಲ ತಾಲ್ಲೂಕಿನ ಕೇಂದ್ರಕ್ಕೆ, ಕಛೇರಿಗಳಿಗೆ ತಿರುಗಲೂ ಅವರಿಂದ ಆಗುತ್ತಿರಲಿಲ್ಲ

ಈ ರೀತಿ ಮನೆಗಳನ್ನು ಕಟ್ಟಿಸಲು ಫಲಾನುಭವಿಗಳನ್ನು ಹುಡುಕಿ ಅರ್ಜಿ ಸಂಗ್ರಹಿಸುವುದು, ಮುಂತಾದ ಕೆಲಸಗಳನ್ನು ಗಣಪಯ್ಯ ಪ್ರಾರಂಭಿಸಿದರು, ಅದರ ಹಲವು ಕೆಲಸಗಳು ನನ್ನ ಪಾಲಿಗೆ ಬಂದವು.

ನನಗೆ ತಿರುಗಾಟಕ್ಕೆ ಹೇಗೂ ಸೈಕಲಿತ್ತು, ಜೊತೆಗೆ ನನ್ನ ಪಶುಚಿಕಿತ್ಸೆಯ ನಿಮಿತ್ತ ಅನೇಕ ಕಡೆಗಳಿಗೆ ಹೋಗುತ್ತಿದ್ದುದರಿಂದ ಹಲವರ ಪರಿಚಯವಾಗಿತ್ತು. ಅಲ್ಲಿನ ಕೆಲವರು ವಸತಿ ಇಲ್ಲದವರ ಮಾಹಿತಿಯೂ ಸಿಗುತ್ತಿತ್ತು.

ಈ ರೀತಿ ನೂರಾರು ಜನರ ಪಟ್ಟಿ ಸಿದ್ಧವಾಯಿತು. ಮಾವಿನಹಳ್ಳಿ, ಹಾರ್ಲೆ ಕೂಡಿಗೆ, ಕುಂಬರಡಿ, ನಡಹಳ್ಳಿ, ಹೆಬ್ಬಸಾಲೆ, ಕೃಷ್ಣಾ ಪುರ, ಹೆನ್ನಲಿ, ಅಜ್ಜನಕೆರೆ , ಹಾಗಯೇ ಸಕಲೇಶಪುರದಿಂದ ಆಚೆ ಕೆಲವು ಗ್ರಾಮಗಳಲ್ಲಿಯೂ ಬಡವರಿಗೆ ಮನೆ ಕಟ್ಟಿಸುವ ಯೋಜನೆ ಸಿದ್ಧವಾಯಿತು,

ಆದರೆ ಫಲಾನುಭವಿಗಳ ಐನೂರು ರೂಗಳು ಹಣವನ್ನು ಭರಿಸಬೇಕು ಅಂದಾಗ ಹೆಚ್ಚಿನವರು ಹಿಂಜರಿದರು. ಆಗ ದಿನಗೂಲಿ

ಆರು ರೂಪಾಯಿ ಇತ್ತು ಐನೂರು ರೂಗಳೆಂದರೆ ಇಂದಿನ ನಲುವತ್ತು ಸಾವಿರಕ್ಕೆ ಸಮವಾಗಬಹುದು.

ಹಲವು ಬ್ಯಾಂಕುಗಳಲ್ಲಿ ಗಣಪಯ್ಯ ಸಾಲಕ್ಕಾಗಿ ವಿಚಾರಿಸಿದರು. ಹೆಚ್ಚಿನ ಬ್ಯಾಂಕುಗಳು ಈ ಯೋಜನೆಗೆ ಆಸಕ್ತಿ ತೋರಲಿಲ್ಲ. ಆಗ ಸಹಾಯಕ್ಕೆ ಬಂದವರು ವಿಜಯಾ ಬ್ಯಾಂಕಿನ ಅಂದಿನ ಮ್ಯಾನೇಜರ್ ವಿಠ್ಠಲ ಶೆಟ್ಟರು. ಅವರು ದಲಿತರಿಗೆಲ್ಲ ಬುಟ್ಟಿ ಹೆಣೆಯುವುದು ಮುಂತಾದ ನಾನಾ ಕಾರಣಗಳನ್ನು ತೋರಿಸಿ ತಲಾ ಐನೂರು ರೂ ಸಾಲ ಕೊಟ್ಟರು. ಈ ಎಲ್ಲಾ ಸಾಲಕ್ಕೂ ರವೀಂದ್ರನಾಥರು ಜಾಮೀನಾದರು.

ಫಲಾನುಭವಿಗಳ ಒಟ್ಟು ಸಂಖ್ಯೆ ಐನೂರಕ್ಕೂ ಹೆಚ್ಚಿತ್ತು. ಆ ವರ್ಷವೇ ಅತೀ ಅಗತ್ಯವಿರುವ ಮುನ್ನೂರು ಜನರನ್ನು ಆಯ್ಕೆ ಮಾಡಲಾಯಿತು. ಅವರಲ್ಲಿ ಶೇಕಡ ಎಂಬತ್ತರಷ್ಟು ದಲಿತರಿದ್ದರು. ಉಳಿದವರಲ್ಲಿ ಎಲ್ಲಾ ಜಾತಿಗೆ ಸೇರಿದ ಬಡವರಿದ್ದರು.

ದಲಿತರಿಗೆ ಕಟ್ಟಿಸಿಕೊಟ್ಟ ಮನೆಗಳಿಗೆ ಬ್ಯಾಂಕಿನಿಂದ ಕೊಡಿಸಲಾಗಿದ್ದ ಸಾಲಕ್ಕೆ ರವೀಂದ್ರನಾಥರೇ ಜಾಮೀನಾಗಿದ್ದರು. ಮನೆಗಳನ್ನು ಕಟ್ಟುವ ಕೆಲಸ ಅವರವರೇ ಮಾಡಿಕೊಂಡವರ ಸಾಲ ಬಹು ಪಾಲು ಸಂದಾಯವಾಗಿತ್ತು, ಆದರೆ ಕೆಲವು ಕಡೆಗಳಲ್ಲಿ ಮನೆಗಳ ನಿರ್ಮಾಣ ವೆಚ್ಚ ಸ್ವಲ್ಪ ಹೆಚ್ಚಾಗಿದ್ದು ಅವರ ಸಾಲ ಬಾಕಿ ಇತ್ತು. ಅಂತವರು ಮಾವಿನ ಹಳ್ಳಿ ಊರಿನಲ್ಲಿ ಹೆಚ್ಚಿದ್ದರು. ಅದು ಕಾಳಿಪ್ರಸಾದರ ಮನೆಯಿರುವ ಸ್ಥಳ ರಾಮಕೃಷ್ಣನಗರ.

ರವೀಂದ್ರನಾಥರು ಹೀಗೆ ಬಾಕಿ ಉಳಿಸಿಕೊಂಡಿರುವವರಲ್ಲಿಗೆ ಹೋಗಿ “ನೀವು ಬ್ಯಾಂಕಿನ ಹಣ ಕಟ್ಟಬೇಕು. ಅದು ಸಾರ್ವಜನಿಕ ಹಣ. ಅದನ್ನು ಬಾಕಿ ಉಳಿಸಿಕೊಳ್ಳುವಂತಿಲ್ಲ. ಈಗ ನೀವು ಕಟ್ಟದಿದ್ದರೆ ಮುಂದೆ ನಿಮ್ಮಲ್ಲೇ ಯಾರಿಗಾದರೂ ಹಣ ಬೇಕಾದರೂ

ಯಾರೂ ಕೊಡುವುದಿಲ್ಲ, ಸ್ವಲ್ಪ ಸ್ವಲ್ಪವೇ ಆದರೂ ನಿದಖಾನ್‌ವಾಗಿ ಕಟ್ಟಿ ಎಂದು ಹೇಳುತ್ತಿದ್ದರು.

ಒಂದು ದಿನ ಸಂಜೆ ರವೀಂದ್ರನಾಥರು ನನ್ನನ್ನೂ ಕರೆದುಕೊಂಡು ರಾಮಕೃಷ್ಣ ನಗರಕ್ಕೆ ಹೋದರು. ಜೀಪನ್ನು ರಸ್ತೆಯ ಬದಿ ನಿಲ್ಲಿಸಿದೆವು. ನಾನು ಮನೆ ಮನೆಗೆ ಹೋಗಿ ಎಲ್ಲರನ್ನೂ ಕರೆದೆ. ಕೆಲವರು ಬಂದರು ಇನ್ನು ಕೆಲವರು ಬರಲಿಲ್ಲ. ಹಲವರು ಅಷ್ಟು ಹೊತ್ತಿಗೇ ಕುಡಿದು ತೇಲಾಡುವ ಹಂತ ತಲುಪಿದ್ದರು.

ರವೀಂದ್ರನಾಥರು ಅವರಿಗೆ ಎಂದಿನಂತೆ ಬುದ್ಧಿವಾದವನ್ನೆಲ್ಲ ಹೇಳಿ, ನಾನು ಮುಂದಿನ ವಾರ ಬರುತ್ತೇನೆ ಅಷ್ಟರಲ್ಲಿ ನೀವು ಸ್ವಲ್ಪವಾದರೂ ಹಣ ಬ್ಯಾಂಕಿಗೆ ಕಟ್ಟಿರಬೇಕು, ಇಲ್ಲವಾದರೆ ನಾನು ಇಲ್ಲೇ ಧರಣಿ ಸತ್ಯಾಗ್ರಹ ಮಾಡುತ್ತೇನೆ ಎಂದರು.

ಅದೇನು ಅವರಿಗೆ ಅರ್ಥವಾದಂತೆ ಕಾಣಲಿಲ್ಲ. ಕಾಳಿಪ್ರಸಾದ್ ಎಲ್ಲರಿಗೂ ವಿವರಿಸಿ ಹೇಳಲು ಪ್ರಯತ್ನಿಸುತ್ತಿದ್ದರು.

ಅಷ್ಟರಲ್ಲಿ ಒಬ್ಬ "ನಾವು ಕಟ್ಟುವುದಿಲ್ಲ ಏನಾರಾ ಮಾಡ್ಕಳಿ" ಎಂದ. ಇನ್ನೊಬ್ಬ "ಇವ್ರು ಇಷ್ಟೊತ್ತಿಗೆ ಯಾಕೆ ಬಂದ್ರು ಇಲ್ಲಿಗೆ?" ಅಂದ. ಮತ್ತಿಬ್ಬರು "ಇವರ ಜೀಪಿಗೆ ಬೆಂಕಿ ಹಾಕಣ" ಅಂದರು! ಉಳಿದವರು ತಲೆಗೊಂದು ಮಾತಾಡಿದರು.

ಕಾಳಿಪ್ರಸಾದ್ ಅವರನ್ನೆಲ್ಲ ಬೈದು ದೂರ ಕರೆದುಕೊಂಡು ಹೋದರು. "ಬನ್ನಿ ಹೋಗೋಣ" ಎಂದು ನಾನು ರವೀಂದ್ರನಾಥರಿಗೆ ಹೇಳಿದೆ.

ರವೀಂದ್ರನಾಥರು ಮಾತಾಡದೆ ಜೀಪಿನಲ್ಲಿ ಕುಳಿತರು. ಅಲ್ಲಿಂದ ಹೊರಟೆವು.

ರಕ್ಷಿದಿ ಕೂಡಿಗೆ ನಾನು ಇಳಿಯುವ ಸ್ಥಳ. ಅಲ್ಲಿಗೆ ಬರುವಾಗ

ಸಂಜೆ ಏಳುಗಂಟೆ ಕಳೆದಿರಬಹುದು. ನನಗೂ ರಾಮಕೃಷ್ಣ ನಗರದ ದಲಿತರ ಹುಚ್ಚಾಟಗಳನ್ನು ನೋಡಿ ರೇಗಿಹೋಗಿತ್ತು.

"ನಿಮಗೆ ಬೇರೆ ಕೆಲಸ ಇಲ್ಲ, ನೀವು ಅಂತವರಿಗೇ ಉಪಕಾರ ಮಾಡಕ್ಕೆ ಹೋಗ್ತೀರಿ, ಅವರಿಗೆ ಅದರ ನೆನಪೇ ಇಲ್ಲ. ಯಾರಾದ್ರು ನಮ್ಮಂಥವರಿಗೆ ಉಪಕಾರ ಮಾಡಿ. ನೋಡಿದಿರಲ್ಲ ಇವರ ಬುದ್ಧಿ" ಎಂದೆ.

ರವೀಂದ್ರನಾಥರು ಒಂದಿಷ್ಟೂ ವಿಚಲಿತರಾಗದೆ. ನಿನಗೆ ಶಕ್ತಿ ಇದೆ, ನೀನು ಯಾರ ಸಹಾಯವೂ ಇಲ್ಲದೆ ಮೇಲೆ ಬರಬಲ್ಲೆ. ಆದರೆ ಅವರು ಹಾಗಲ್ಲ ಅವರಿಗೆ ಸಹಾಯ ಸಿಗದೆ ಮೇಲೆ ಬರಲು ಸಾಧ್ಯವೇ ಇಲ್ಲ. ಅವರಿಗೆ ಸಹಾಯದ ಅಗತ್ಯ ಇದೆ" ಎಂದರು.

"ಅಗತ್ಯ ಇರಬಹುದು, ಆದರೆ ಅವರಿಗೆ ಅರ್ಹತೆ ಇಲ್ಲ" ಎಂದು ಅಸಹನೆಯಿಂದ ಜೋರಾಗಿ ಹೇಳಿದೆ.

"ಅದು ಬೇರೆ ಮಾತು. ಯಾರಿಗೇ ಆಗಲಿ ಅರ್ಹತೆ ಇದೆಯೋ ಇಲ್ಲವೋ ಅಂತ ಗೊತ್ತಾಗುವುದು ತುಂಬ ನಿದಖಾನ್. ಆದರೆ ಅವರು ಸಾವಿರ ವರ್ಷಗಳಿಂದ ಮೋಸ ಹೋಗಿದ್ದಾರೆ. ಅವರೀಗ ಯಾರನ್ನೂ ನಂಬುವ ಸ್ಥಿತಿಯಲ್ಲಿ ಇಲ್ಲ."

"ಯಾವುದೋ ಕಾಲದಲ್ಲಿ ಯಾರೋ ಮೋಸ ಮಾಡಿದ್ರೆ ನಾವೇನು ಮಾಡಬೇಕು. ಅವರು ಹೀಗೇ ಮಾಡ್ತಾ ಇದ್ರೆ ಯಾರು ಸಹಾಯ ಮಾಡ್ತಾರೆ" ಎಂದೆ, ನನಗೆ ರವೀಂದ್ರನಾಥರ ಮಾತು ಸಮ್ಮತವಿರಲಿಲ್ಲ.

ರವೀಂದ್ರನಾಥರು ಮತ್ತೆ ಮೌನವಾದರು.

ಕೆಲವು ಕ್ಷಣಗಳ ನಂತರ. "ನೋಡು ಅವರು ಏನು ಹೇಳಿದರು

ಎನ್ನುವುದು ಮುಖ್ಯವಲ್ಲ. ನಮ್ಮೆಲ್ಲರಿಗೆ ಅವರ ಸಾವಿರ ವರ್ಷಗಳ ಋಣ ಇದೆ. ಅದರಲ್ಲಿ ಸ್ವಲ್ಪ ತೀರಿತು ಅಂದುಕೊಂಡರಾಯಿತು" ಎಂದರು.

ನನಗೆ ಅಂದು ಅವರ ಮಾತಿನಿಂದ ಸಮಾಧಾನವಾಗಲಿಲ್ಲ. ಆದರೆ ಆ ಮಾತು ಅರ್ಥವಾಗಲು ಕೆಲವು ವರ್ಷಗಳು ಬೇಕಾಯಿತು. ಮತ್ತು ಆ ಮಾತುಗಳು ನನ್ನ ಯೋಚನಾ ಕ್ರಮವನ್ನೂ ನನ್ನ ಬದುಕಿನ ಹಾದಿಯನ್ನು ಬದಲಿಸಿತು.

ಜಗನ್ನಾಥ ಕೆಫೆ: ಉಡುಪಿ ಬ್ರಾಹ್ಮಣರ ಹೋಟೆಲ್. ಹಾನುಬಾಳು.

ಸಕಲೇಶಪುರ ತಾಲ್ಲೂಕಿನ ಹಾನುಬಾಳು ಹೋಬಳಿ ಕೇಂದ್ರ. ಐವತ್ತರ ದಶಕದ ಕೊನೆಯ ಭಾಗದಲ್ಲಿ. ಹಾನುಬಾಳಿನಲ್ಲಿ ಭಟ್ಟರ ಹೋಟೆಲೊಂದು ಪ್ರಾರಂಭವಾಯಿತು. ಅದಕ್ಕೆ ಜಗನ್ನಾಥ ಕೆಫೆ ಎಂಬ ಹೆಸರಿದ್ದರೂ ಅದಕ್ಕೆ ಆಗ ಹೆಸರು ಬೋರ್ಡ್ ಇತ್ಯಾದಿ ಏನೂ ಇರಲಿಲ್ಲವಂತೆ. ಊರವರ ಬಾಯಲ್ಲಿ ಬಟ್ರೋಟ್ಳು...

ಆ ಭಟ್ಟರ ಕುಟುಂಬ ಹಾನುಬಾಳು ಪಕ್ಕದ ಕೋಗರವಳ್ಳಿ ಗ್ರಾಮದ ಕೃಷಿಕರು..

ಆಗ ಹಾನುಬಾಳಿನಲ್ಲಿ ಹೈಸ್ಕೂಲ್ ಇರಲಿಲ್ಲ. ಊರ ಪ್ರಮುಖರ ಪ್ರಯತ್ನದಿಂದ ಒಂದು ಹೈಸ್ಕೂಲ್ ಬಂತು. ಅದು ಆಗಿನ ತಾಲ್ಲೂಕು ಬೋರ್ಡ್ ಹೈಸ್ಕೂಲ್..

ಸುತ್ತಲಿನ ಹಳ್ಳಿಗಳಿಂದ ಶಾಲೆಗೆ ಬರುತ್ತಿದ್ದ ಮಕ್ಕಳು ಮಧ್ಯಾಹ್ನಕ್ಕೆ ಬುತ್ತಿ ಕಟ್ಟಿಕೊಂಡು ನಡೆದು ಬರುವರು.

ಎಷ್ಟೋ ಮನೆಗಳಲ್ಲಿ ಬೆಳಗಿನ ಅಡಿಗೆ ಆಗದೆ ಅನ್ನ ಮಾತ್ರ ತರುವರು..

ಎಲ್ಲ ಹುಡುಗರೂ ತಮ್ಮ ಬುತ್ತಿಯನ್ನು ಇಡುತ್ತಿದ್ದುದು. ಬಟ್ರೋಟ್ಟಿನ ಅಟ್ಟದಲ್ಲಿ..

ಸಾರು ತರದ ಮಕ್ಕಳಿಗೆ ಭಟ್ಟರ ಹೋಟೆಲಿನಲ್ಲಿ ಒಂದು ಸೌಟು ಸಾರು ಸಿಗುವುದು. ಒಂದು ಸೌಟು ಸಾರಿಗೆ ಐದು ಪೈಸೆ ಎಂದು ಲೆಕ್ಕ. ಅದು ಬೇರೆಯವರಿಗೆ ಮಾತ್ರ. ಮಕ್ಕಳಿಗೆ ಸಾರು ಕೊಡುವಾಗ ಅಡಿಗೆಯವರು ಗಲ್ಲಾದಲ್ಲಿ ಕುಳಿತ ಭಟ್ಟರಿಗೆ ಕೇಳುವಂತೆ 'ಸಾರು ಐದು ಪೈಸಾ' ಎಂದು ಕೂಗಿ ಹೇಳುವರು. ಅಲ್ಲಿಗೆ ಮುಗಿಯಿತು. ಮಕ್ಕಳು ಬುತ್ತಿ ಹಿಡಿದು ಅಟ್ಟ ಹತ್ತುವರು. ದುಡ್ಡು ಕೊಟ್ಟರಿಲ್ಲ ಭಟ್ಟರು ಕೇಳಿದ್ದೂ ಇಲ್ಲ.

ಅಂದಿನ ದಿನಗಳಲ್ಲಿ ನೂರಾರು ಮಕ್ಕಳು ಓದಿದ್ದು ಹಾನುಬಾಳು ಶಾಲೆಯಲ್ಲಿಯೇ. ಆದ್ದರಿಂದ ಅವರೆಲ್ಲರಿಗೂ ಬಟ್ರೋಟ್ಟಿನ ಸಾಂಬಾರಿನ ರುಚಿ ನಾಲಗೆಯಲ್ಲಿ ಇದೆ.

ಆ ಕಾಲದಲ್ಲಿ ಕೆಲವರು ಬಡವರ, ಕೂಲಿ ಕಾರ್ಮಿಕರ ಮಕ್ಕಳು ಬಟ್ರೋಟ್ಟಿನಲ್ಲಿ ಕೆಲಸ ಮಾಡುತ್ತ ಶಾಲೆಗೆ ಬರುತ್ತಿದ್ದರು.

ಭಟ್ಟರ ಹೋಟೆಲಿನಲ್ಲಿ ಒಂದು ದೊಡ್ಡ ರೇಡಿಯೋ ಇತ್ತು ಹಳೆಯ ಕಾಲದ ವಾಲ್ವ್ ರೇಡಿಯೋ.

ಆ ಕಾಲದಲ್ಲಿಯೇ ಶಾಲಾ ಶಿಕ್ಷಕರಿಗೆ ಕ್ರಿಕೆಟ್ ಹುಚ್ಚು ಹತ್ತಿತ್ತು. ಆಗ ಇನ್ನೂ ಐದು ದಿನದ ಟೆಸ್ಟ್ ಪಂದ್ಯಗಳು ಮಾತ್ರ ನಡೆಯುತ್ತಿದ್ದವು. ಕ್ರಿಕೆಟ್ ಪಂದ್ಯಗಳು ಇದ್ದಾಗ ಶಿಕ್ಷಕರು ಹುಡುಗರನ್ನು ಸ್ಕೋರ್ ಕೇಳಿಕೊಂಡು ಬರಲು ಬಟ್ರೋಟ್ಟಿಗೆ ಕಳುಹಿಸುತ್ತಿದ್ದರು..

ಸ್ಕೋರ್ ಕೇಳಲು ಹೋದವನು ಒಂದು ಪಿರಿಯಡ್ ಆಗುವ ತನಕ ಅಲ್ಲೇ ಇದ್ದು, ಸಾಧ್ಯವಾದರೆ ಒಂದು ಗೋಲಿ

ಬಜೆಯನ್ನಾದರೂ ಬಾಯಿಗೆ ಹಾಕಿಕೊಂಡು ಬಂದು, ತಡ ಮಾಡಿದ್ದಕ್ಕೆ ಬೈಗಳು ತಿನ್ನುವವನು.

ಭಟ್ಟರ ಹೋಟೆಲಿಗೆ ಪ್ರಜಾವಾಣಿ ಪತ್ರಿಕೆ ಬರುತ್ತಿತ್ತು. ರೇಡಿಯೋ ಮತ್ತು ಪತ್ರಿಕೆಗಳಿಂದ ಅದು ಊರಿನ ಅಧಿಕೃತ ಸುದ್ದಿ ಕೇಂದ್ರವಾಗಿತ್ತು.

ಹೋಟೆಲ್ ಭಟ್ಟರ ಹೆಣ್ಣು ಮಕ್ಕಳೂ ಇದೇ ಶಾಲೆಗೆ ಬರುತ್ತಿದ್ದರು..

ನಂತರ ಹೋಟೆಲಿಗೆ ಒಂದು ಬೋರ್ಡ್ ಬಂತು..

'ಹೋಟೆಲ್ ಅಲಂಕಾರ್ '. ಉಡುಪಿ ಬ್ರಾಹ್ಮಣರ ಫಲಾಹಾರ ಮಂದಿರ.

ಭಟ್ಟರ ಕುಟುಂಬದವರೆಲ್ಲ ಉದ್ಯೋಗಗಳತ್ತ ಮುಖ ಮಾಡಿದರು. ಭಟ್ಟರ ಹೋಟೆಲಿನಲ್ಲಿ ದುಡಿಯುತ್ತ ಓದಿದವವರೂ ಬೇರೆ ಬೇರೆ ಉದ್ಯೋಗ ಹಿಡಿದರು..

ಭಟ್ಟರಿಗೆ ಹೋಟೆಲ್ ಸಾಕೆನಿಸಿತು...

ಭಟ್ಟರು ತಮ್ಮ ಹೋಟೆಲನ್ನು ಮಾರಾಟ ಮಾಡಿದರು.

ಹಾಗೆ ಕೊಟ್ಟದ್ದು ತಮ್ಮ ಆಪ್ತರಾಗಿದ್ದ ಹಾನುಬಾಳಿನ ಇಬ್ರಾಹಿಂ ಅವರಿಗೆ..

ಹೋಟೆಲಿನ ಬೋರ್ಡ್ "ಹೋಟೆಲ್ ಅಲಂಕಾರ್ ಉಡುಪಿ ಬ್ರಾಹ್ಮಣರ ಫಲಾಹಾರ" ಹಾಗೇ ಉಳಿಯಿತು. ಕೆಳಗಡೆ ಮಾಲೀಕರು ಇಬ್ರಾಹಿಂ ಎಂದು ಸೇರಿತು. ಹೋಟೆಲ್ ಮುಂದಿನ ಕೆಲವು ವರ್ಷ ಯಶಸ್ವಿಯಾಗಿ ನಡೆಯಿತು. ಹೋಟೆಲಿಗೆ ಬೋರ್ಡ್ ಇದ್ದರೂ ಅದು ಪರ ಊರವರಿಗೆ ಮಾತ್ರ.. ಊರವರ ಬಾಯಲ್ಲಿ

ಅದು ಬಟ್ರೋಟ್ಲಾಗಿಯೇ ಮುಂದುವರಿಯಿತು.

ಇಬ್ರಾಹಿಂ ಅವರಿಗೆ ಇಬ್ರಾಯಿ ಬಟ್ಟರು ಎನ್ನುವ ಅಭಿದಾನ ಪ್ರಾಪ್ತವಾಯಿತು.

ಕೆಲವು ವರ್ಷಗಳ ನಂತರ ಇಬ್ರಾಯಿ ಬಟ್ಟರ ಹೋಟೆಲಿಗೆ ಸಹಾಯಕರಾಗಿ ದ.ಕ ಜಿಲ್ಲೆಯ ಶಶಿಧರ ಭಟ್ ಅವರನ್ನು ಸಹಾಯಕರಾಗಿ ಕರೆತಂದರು. ಕೆಲಕಾಲದ ನಂತರ ಇಬ್ರಾಹಿಂ ಅವರು ನನಗಿನ್ನು ಸಾಕು ಎಂದು ಹೋಟೆಲನ್ನು ಶಶಿಧರ ಭಟ್ ಅವರಿಗೇ ವಹಿಸಿಕೊಟ್ಟರು. ಇಬ್ರಾಹಿಂ ಅವರು ಈಗ ಹಾನುಬಾಳನ್ನು ಬಿಟ್ಟು. ಸಕಲೇಶಪುರದ ಆನೆಮಹಲ್ ಬಳಿ ನೆಲೆಸಿದ್ದಾರೆ.

ನಂತರ ಹೋಟೆಲಿನ ಹೆಸರು ನ್ಯೂ ಅಲಂಕಾರ್ ಹೋಟೆಲ್ ಆಯಿತು...

ಶಶಿಧರ್ ಭಟ್ ಅವರೊಂದಿಗೆ ಅವರ ತಮ್ಮ ರಮೇಶ್ ಭಟ್ ಕೂಡಿಕೊಂಡರು..

ಈಗ ಹಾನುಬಾಳಿನ ನ್ಯೂ ಅಲಂಕಾರ್ ಹೋಟೆಲ್ ರಮೇಶ್ ಭಟ್ ಅವರಲ್ಲಿದೆ.

ರಮೇಶ್ ಗಾಯಕರು. ಆರ್ಕೆಸ್ಟ್ರಾಗಳಲ್ಲಿಯೂ ಹಾಡುತ್ತಾರೆ. ಬೇರೆ ಕಾರ್ಯಕ್ರಮಗಳಲ್ಲಿಯೂ ಹಾಡುತ್ತಾರೆ.

ಈಗ ಸದ್ಯ ಅವರು ತಮ್ಮ ಗೆಳೆಯರೊಂದಿಗೆ ಸೇರಿ ರಚಿಸಿಕೊಂಡ ಹಾನುಬಾಳು ಮೆಲೊಡೀಸ್ ತಂಡವಿದೆ.

ರಮೇಶ್ ಸಾಕ್ಷರತಾ ಜಾಥಾದ ನಾಟಕಗಳಿಗೂ ಹಾಡಿದ್ದಾರೆ.

ಹೋಟೆಲ್ ನಡೆಸುವವರು ಗಾಯಕರಾದರೆ ಹೇಗೆ.. ಊರೂರು ಸುತ್ತುವ ರಮೇಶ್ ಅವರ ಸಹಾಯಕ್ಕೆ ಸುಮಾರು

ಹತ್ತು ವರ್ಷಗಳಿಂದ ಬಾವು ಬ್ಯಾರಿಗಳಿದ್ದಾರೆ. ಸುಲೈಮಾನ್, ಸತೀಶ್, ಇದ್ದಾರೆ. ಇಸ್ಮಾಯಿಲ್ ಬರುತ್ತಾರೆ. ರಮೇಶರ ಪತ್ನಿ ಸವಿತ ಇದ್ದಾರೆ. ರಮೇಶರ ಜೊತೆ ಹಾಡುವ ಸುಚೇತನ್ ಕೂಡ ಇರುತ್ತಾರೆ. ಎಲ್ಲರೂ ಒಂದು ಕುಟುಂಬವಾಗಿ ಕೆಲಸ ಮಾಡುತ್ತಾರೆ..

ಯಾರೇ ತಪ್ಪು ಮಾಡಿದರೂ ಬಾವು ಅವರು ಮಾತಿನ ಚಾಟಿ ಬೀಸುತ್ತಾರೆ.

ಹೀಗೆ ಹಾನುಬಾಳಿನ ನ್ಯೂ ಅಲಂಕಾರ್ ಹೋಟೆಲ್ ಉಡುಪಿ ಬ್ರಾಹ್ಮಣರ ಸಸ್ಯಾಹಾರಿ ಹೋಟೆಲ್ ಹಾನುಬಾಳಿನಲ್ಲಿ ಆರು ದಶಕಗಳಿಗೂ ಮೀರಿದ ಸೌಹಾರ್ದದ ಸಂಕೇತವಾಗಿ ಮುಂದುವರೆದಿದೆ.

ಹಾನುಬಾಳಿನ ಇಬ್ರಾಯಿ ಬಟ್ಟರ ಕಥಾನಕವು: ಇಬ್ರಾಹಿಂ ಅವರ ಹಿರಿಯರು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಬಳಿಯ ಸಂಟ್ಯಾರಿನವರು ಅಲ್ಲಿ ಅವರಿಗೆ ಸಣ್ಣ ಅಡಿಕೆ ತೋಟ, ಮನೆ ಇತ್ತಂತೆ.

ಇಬ್ರಾಹಿಂ ಅವರ ತಂದೆ ಅಬ್ಬು ಕುಂಞ ಬ್ಯಾರಿಗಳು ತಾಯಿ ಅಮೀನ.

ಇವರಿಗೆ ಎರಡು ಹೆಣ್ಣು ನಾಲ್ವರು ಗಂಡು ಮಕ್ಕಳು.

ಇವರಲ್ಲಿ ಇಬ್ರಾಹಿಂ ಮೂರನೆಯವರು.

ವ್ಯಾಪಾರ ಬ್ಯಾರಿಗಳ ಕುಲಕಸುಬು. ಬ್ಯಾರ ಅಂದರೆ ತುಳು ಭಾಷೆಯಲ್ಲಿ ವ್ಯಾಪಾರ. ಅಬ್ಬು ಬ್ಯಾರಿಗಳಿಗೂ ಅಡಿಕೆ ಯಾಲಕ್ಕಿ ಮತ್ತಿತರ ವ್ಯಾಪಾರ ಇತ್ತು. ವ್ಯಾಪಾರಕ್ಕಾಗಿ ಹಾಸನ ಜಿಲ್ಲೆಗೂ ಬರುತ್ತಿದ್ದರು.

ಪುತ್ತೂರಿನಲ್ಲಿ ಇವರಿಗೆ ಹತ್ತಿರದಲ್ಲೇ ಇದ್ದ ಮರಿಕೆ ಕುಟುಂಬದ

ಸುಬ್ಬಯ್ಯ ಭಟ್ಟರು ಇವರ ಆಪ್ತರು. ಕಷ್ಟ ಸುಖಗಳಲ್ಲಿ ಜೊತೆಗಾರ. ಇವರು ಇಂಗ್ಲಿಷ್ ಕಾದಂಬರಿಕಾರ ಚಾರ್ಲ್ಸ್ ಡಿಕನ್ಸ್‌ನ 'ಡೇವಿಡ್ ಕಾಪರ್ಫೀಲ್ಡ್' ಕಾದಂಬರಿಯನ್ನು ಕನ್ನಡಕ್ಕೆ ಅನುವಾದ ಮಾಡಿದ ಎ.ಪಿ. ಸುಬ್ಬಯ್ಯ.

ಅಬ್ಬು ಕುಂಞಿ ಬ್ಯಾರಿಗಳಿಗೆ ವ್ಯಾಪಾರದಲ್ಲಿ ನಷ್ಟವಾಗಿ ಕೊನೆಗೆ ತೋಟವನ್ನು ಶೆಟ್ಟರೊಬ್ಬರಿಗೆ ಅಡವಿಟ್ಟರು.. ಅದೂ ಕೈಸಾಗದೆ ಕೊನೆಗೆ ಸುಬ್ಬಯ್ಯನವರ ನೆರವು ಪಡೆದು ಶೆಟ್ಟರಿಗೇ ಅದನ್ನು ಮಾರಾಟ ಮಾಡಿ ಸಾಲ ತೀರಿಸಿದರು. ಉಳಿದ ಒಂದಷ್ಟು ಹಣವನ್ನು ಹಿಡಿದುಕೊಂಡು ಕುಟುಂಬ ಸಮೇತ ಘಟ್ಟ ಹತ್ತಿದರು..

ಹಾಗೆ ಅಬ್ಬು ಕುಂಞ ಬ್ಯಾರಿಗಳು ಹೇಗಾದರೂ ದುಡಿದು ಬದುಕೋಣ ಸಕಲೇಶಪುರ ತಾಲ್ಲೂಕಿನ ಹಾನುಬಾಳಿಗೆ ಬಂದರು.

ಹಾನುಬಾಳಿನಲ್ಲಿ ಆಗ "ಬಟ್ರೋಟ್ಟಿನ" ಮಾಲೀಕರಾಗಿದ್ದವರು ಮುದ್ದು ಭಟ್ಟರು. ವ್ಯಾಪಾರಕ್ಕಾಗಿ ಈ ಕಡೆಗೆ ಬರುತ್ತಿದ್ದ ಅಬ್ಬು ಕುಂಞ ಬ್ಯಾರಿಗಳಿಗೆ ಮುದ್ದುಭಟ್ಟರ ಪರಿಚಯ ಮೊದಲೇ ಇತ್ತು.

ಮುದ್ದು ಭಟ್ಟರು ಈ ಐದು ಮಕ್ಕಳ ಸಂಸಾರವನ್ನು ಕಟ್ಟಿಕೊಂಡು ಏನು ಮಾಡುತ್ತೀರಿ, ಸದ್ಯಕ್ಕೆ ಇಲ್ಲೇ ಇರಿ ಎಂದು ಅವರದ್ದೇ ಒಂದು ಹಳೆಯ ಮನೆಯನ್ನು ಅಬ್ಬು ಕುಂಞಿ ಬ್ಯಾರಿಗಳಿಗೆ ವಾಸಕ್ಕೆ ಕೊಟ್ಟರು. ಅಷ್ಟೇ ಅಲ್ಲ. ಅಲ್ಲೇ ಸರ್ಕಲ್ ಪಕ್ಕದಲ್ಲಿ ಒಂದು ತಗಡಿನ ಗುಡಿಸಲು ಕಟ್ಟಿ ಅಲ್ಲಿ ಹೋಟೆಲ್ ಹಾಕಲು ವ್ಯವಸ್ಥೆ ಮಾಡಿಕೊಟ್ಟರು. ಅದು ಹಾನುಬಾಳು ಅಜ್ಜೇಗೌಡರ ಜಾಗ.

ಹಾಗೆ ಅಲ್ಲಿ ಅಬ್ಬು ಕುಂಞಿ ಬ್ಯಾರಿಗಳ ಮೀನೂಟದ ಹೋಟೆಲ್ ಹಾನುಬಾಳಿನಲ್ಲಿ ಸ್ಥಾಪಿತವಾಯಿತು. ಹಾನುಬಾಳಿನ ಸರ್ಕಲ್ ಪಕ್ಕದಲ್ಲಿ ಆಗ ಒಂದು ಮಾರ್ವಾಡಿ ಅಂಗಡಿ ಇತ್ತಂತೆ, ನಂತರ ಅಲ್ಲಿ ಹಾನುಬಾಳಿನ ದೊಡ್ಡ ಅಂಗಡಿ "ಅಜ್ಜೇಗೌಡರ" ಅಂಗಡಿ

ಬಂತು. ಆ ಕಾಲದಲ್ಲಿ ಅಜ್ಜೇಗೌಡರ ಅಂಗಡಿಯೇ ಹಾನುಬಾಳಿನ ಸರ್ವ ಸರಕಿನ ಮಳಿಗೆ.

ಅಜ್ಜೇಗೌಡರು ಕಾಂಗ್ರೆಸಿಗರು. ಮೊದಲು ಹಾನುಬಾಳು ಪಂಚಾಯತ್ ಛೇರ್ಮನ್, ನಂತರ ತಾಲ್ಲೂಕು ಬೋರ್ಡ್ ಅಧ್ಯಕ್ಷರೂ ಆಗಿದ್ದರು..

ಅಜ್ಜೇಗೌಡರು, ಕರ್ನಾಟಕ ಸರ್ಕಾರದಲ್ಲಿ ಹಿರಿಯ ಅಧಿಕಾರಿಗಳಾಗಿದ್ದ ಐ.ಎಂ.ವಿಠ್ಠಲಮೂರ್ತಿ ಅವರ ಮಾವ.

ಹಾನುಬಾಳಿಗೆ ಬರುವಾಗ ಇಬ್ರಾಹಿಂ ಅವರು ಸುಮಾರು ಹನ್ನೆರಡು- ಹದಿನಾಲ್ಕು ಪ್ರಾಯದವರಂತೆ ಅಂದರೆ ಹಾನುಬಾಳಿನ ಬಟ್ರೋಟ್ಟಿನ ಇತಿಹಾಸ ಐವತ್ತರ ದಶಕದ ಪ್ರಾರಂಭದ ದಿನಗಳಿಗೆ ಹೋಗುತ್ತದೆ.

ಅಬ್ಬು ಬ್ಯಾರಿಗಳು ತೀರಿಕೊಂಡರು. ಹೆಣ್ಣು ಮಕ್ಕಳಿಗೆ ಮದುವೆಯಾಗಿತ್ತು ಗಂಡು ಮಕ್ಕಳೆಲ್ಲ ಅಲ್ಲಲ್ಲಿ ವ್ಯಾಪಾರದಲ್ಲಿ ತೊಡಗಿದರು.

ಕೆಲವು ಕಡೆಗಳಲ್ಲಿ ಭೂಮಿ ಖರೀದಿಸಿ ಕೃಷಿಕರೂ ಆದರು.

ಅಬ್ಬು ಕುಂಞಿ ಬ್ಯಾರಿಗಳ ನಂತರ ಅವರ ಮೀನೂಟದ ಹೋಟೆಲ್ ಮುಚ್ಚಿತ್ತು.

ಇಬ್ರಾಹಿಂ ಅವರು ಯಾಲಕ್ಕಿ ವ್ಯಾಪಾರ ಮಾಡುತ್ತಿದ್ದರು..

ಹಾನುಬಾಳಿನಲ್ಲಿ ಅಲಂಕಾರ್ ಫುಟ್‌ವೇರ್ ಎನ್ನುವ ಚಪ್ಪಲಿ, ಕೊಡೆ, ಬ್ಯಾಗು ಇತ್ಯಾದಿಗಳ ಅಂಗಡಿ ಪ್ರಾರಂಭವಾಯಿತು.

ಈ ವೃತ್ತಾಂತದ ಲೇಖಕನಾದ ನಾನು ಪ್ರಾಥಮಿಕ ಶಾಲೆಗೆ ಹೋಗುತ್ತಿದ್ದಾಗ ನಡೆದ ಘಟನೆಯಿದು. ನಮ್ಮ ಮನೆಗೆ ಒಂದು

ಪ್ರವಾಸ ಹೋಗುವಾಗ ಹಿಡಿದುಕೊಳ್ಳುವಂತಹ ಜಿಪ್ ಇರುವ ಕಿಟ್‌ಬ್ಯಾಗ್ ಬೇಕಾಗಿತ್ತು. ಅದು ಇಬ್ರಾಹಿಂ ಅವರ ಅಂಗಡಿಯಲ್ಲಿ ಇತ್ತು. ನಾನು ಅದನ್ನು ಮನೆಗೆ ತೆಗದುಕೊಂಡು ಹೋಗಿ ನಂತರ ಹಣ ತಂದು ಕೊಡುತ್ತೇನೆ ಎಂದು ಹೇಳಿ ಇಬ್ರಾಹಿಂ ಅವರ ಅಂಗಡಿಯಿಂದ ತಂದಿದ್ದೆ ಮತ್ತು ಅವರು ಪ್ರೈಮರಿ ಶಾಲೆ ಹುಡುಗನ ಮಾತನ್ನು ನಂಬಿ ಸಾಲ ಕೊಟ್ಟಿದ್ದರು!

ಇಂತಹ ಹಲವು ಪ್ರಸಂಗಗಳು ಅನೇಕರ ಅನುಭವದಲ್ಲಿ ಇದೆ.

ಇಬ್ರಾಹಿಂ ಅವರು ನಂತರದ ದಿನಗಳಲ್ಲಿ ಸಕಲೇಶಪುರದಲ್ಲಿ ಒಂದು ಅಲಂಕಾರ್ ಫ್ಯಾನ್ಸಿ ಸ್ಟೋರ್ ಮತ್ತು ಕೊಡಗಿನ ಕೊಡ್ಲಿ ಪೇಟೆಯಲ್ಲಿ ಹೋಟೆಲ್ ಅಲಂಕಾರ್ ಎಂಬ ಸಸ್ಯಾಹಾರಿ ಹೋಟೆಲ್ ಪ್ರಾರಂಭಿಸಿದರು.

ಕೊಡ್ಲಿಪೇಟೆಯ ಇವರ ಅಲಂಕಾರ್ ಹೋಟೆಲ್‌ಗೆ ರಾಜಕಾರಣಿ ಗುಂಡೂರಾವ್ ಅವರು ಬರುತ್ತಿದ್ದರಂತೆ..

ನಂತರ ಗುಂಡೂರಾಯರು ಕರ್ನಾಟಕದ ಮುಖ್ಯಮಂತ್ರಿ-ಗಳಾದರು. ಆಗ ಹಲವಾರು ಜನರಿಗೆ ಅಲ್ಲಿ ಮನೆ ನಿವೇಶನ ಹಂಚಿದ್ದರು. ಗುಂಡೂರಾಯರು 'ಇಲ್ಲೇ ನೀವೊಂದು ಮನೆ ಕಟ್ಟಿಕೊಳ್ಳಿ' ಎಂದು ಇಬ್ರಾಹಿಂ ಅವರಿಗೂ ಒಂದು ನಿವೇಶನ ಕೊಟ್ಟಿದ್ದರಂತೆ.

ಇಬ್ರಾಹಿಂ ಅವರು ಅದನ್ನು ನೋಡಲೂ ಹೋಗದೆ ಅದು ಎಲ್ಲಿದೆಯೋ ಎಂದು ಅವರಿಗೆ ತಿಳಿಯದು. ಆದರೆ ಹಕ್ಕುಪತ್ರವನ್ನು ಮಾತ್ರ ಈಗಲೂ ಇಟ್ಟುಕೊಂಡಿದ್ದಾರಂತೆ !!

ಅಬ್ಬು ಕುಂಞಿ ಬ್ಯಾರಿಗಳಿಗೆ ಹಾನುಬಾಳಿನಲ್ಲಿ ನೆಲೆ

ಮಾಡಿಕೊಟ್ಟ ಮುದ್ದುಭಟ್ಟರೊಂದಿಗಿನ ಒಡನಾಟ ಇಡೀ ಕುಟುಂಬದಲ್ಲಿ ಹಾಗೆಯೇ ಮುಂದುವರೆದಿತ್ತು. ಮುದ್ದು ಭಟ್ಟರ ನಂತರ ಅವರ ಅಳಿಯ ಶ್ರೀನಿವಾಸ ಭಟ್ಟರೂ ಇಬ್ರಾಹಿಂ ಅವರ ಆ ಆಪ್ತರಾಗಿದ್ದರು.

ಅಂದಿನ ಜಗನ್ನಾಥ ಕೆಫೆ ಉಡುಪಿ ಬ್ರಾಹ್ಮಣರ ಹೋಟೆಲು ಎನ್ನುವ ಬಟ್ರೋಟ್ಟಿನ ಕಟ್ಟಡ ಅವರ ಸ್ವಂತದ್ದಲ್ಲ, ಅದು ಹಾನುಬಾಳಿನ ಹಿರಿಯ ಕಾಫಿ ಬೆಳೆಗಾರ ಹಾಗೂ ರಾಜಕಾರಣಿ ನಾರಾಯಣ ಗೌಡರದ್ದು. ಇಂದೂ ಅವರದ್ದೇ. ಶ್ರೀನಿವಾಸ ಭಟ್ಟರು ನನಗಿನ್ನು ಹೋಟೆಲ್ ಸಾಕು ಇಬ್ರಾಹಿಂ ಅವರೇ, ನಿಮಗೆ ಹೇಗೂ ಅನುಭವ ಇದೆ. ನೀವೇ ನಡೆಸಿ ಎಂದು ಹೋಟೆಲನ್ನು ಇಬ್ರಾಹಿಂ ಅವರಿಗೆ ಕೊಟ್ಟರು.

ಹಾಗೆ ಇಬ್ರಾಹಿಂ ಅವರ ಹೋಟೆಲ್ ಅಲಂಕಾರ್ ಉಡುಪಿ ಬ್ರಾಹ್ಮಣರ ಫಲಾಹಾರ ಮಂದಿರ ಆಯಿತು.

ಇಬ್ರಾಹಿಂ ಅವರು ಗೆಳೆಯರಿಗೆ ಇಬ್ರಾಯಿ ಭಟ್ಟರಾದರು.

ಹಾನುಬಾಳಿಗೆ ಮೊದಲು ಟೆಲಿಫೋನ್ ಬಂದದ್ದು ಇಬ್ರಾಹಿಂ ಅವರ ಅಂಗಡಿಗೆ. ಅದು ಅವರಿಗೆ ಮಾತ್ರ ಅಲ್ಲ ಇಡೀ ಊರಿಗೇ ತುರ್ತು ಸೇವೆಗೆ ಬಳಕೆಯಾಗುತ್ತಿತ್ತು. ಇಬ್ರಾಹಿಂ ಅವರಿಂದ ಉಪಕಾರ ಪಡೆದವರು ಹಲವಾರು, ಅಗತ್ಯ ಸಮಯದಲ್ಲಿ ಹಣ, ಮನೆ ಕಟ್ಟುವವರಿಗೆ ಸಹಾಯ ಹೀಗೆ ಇಂದಿಗೂ ಹಲವಾರು ಜನರು ಅವರ ಉಪಕಾರವನ್ನು ನೆನೆಯುತ್ತಾರೆ.

ಇಬ್ರಾಹಿಂ ಅವರಿಗೆ ಯಾಲಕ್ಕಿ ವ್ಯಾಪಾರವೂ ಇತ್ತು. ವ್ಯಾಪಾರ ನಿಮಿತ್ತ ಅವರು ರಾಯಚೂರು, ಹಾವೇರಿ ಮುಂತಾದ ಕಡೆಗಳಿಗೆ ಹೋಗುತ್ತಿದ್ದರು.

ಆಗ ಇಬ್ರಾಯಿ ಭಟ್ಟರು ಹೋಟೆಲ್ ನಡೆಸಲು ಸಹಾಯಕರ ಅಗತ್ಯ ಕಂಡಿತು. ಅವರು ಪುತ್ತೂರಿನಿಂದ ಶಶಿಧರ ಭಟ್ ಎಂಬವರನ್ನು ಕರೆತಂದರು. ನಂತರದ ದಿನಗಳಲ್ಲಿ ಇಬ್ರಾಹಿಂ ಅವರು ಹೋಟೆಲನ್ನು ಶಶಿಧರ ಭಟ್ಟರಿಗೇ ವಹಿಸಿ ಕೊಟ್ಟರು..

ಮುಂದಿನ ದಿನಗಳಲ್ಲಿ ಇಬ್ರಾಹಿಂ ಅವರಿಗೆ ಕೃಷಿ ವ್ಯಾಪಾರ ಸಾಕೆನಿಸಿತು.

ಎಲ್ಲವನ್ನೂ ಮಾರಾಟ ಮಾಡಿ ಸಕಲೇಶಪುರದ ಬಳಿ ಆನೆ ಮಹಲ್‌ನಲ್ಲಿ ಒಂದಷ್ಟು ಜಮೀನು ಖರೀದಿಸಿ ಹೋಟೆಲ್, ಅಂಗಡಿ ಮಳಿಗೆಗಳನ್ನು ಕಟ್ಟಿಸಿದರು. ಪಕ್ಕದಲ್ಲಿರುವ ದಾರುಲ್ ಉಲೂಮ್ ಮದರಸಕ್ಕೂ ಒಂದಷ್ಟು ಸ್ಥಳ ದಾನ ಮಾಡಿದರು.

ಇಬ್ರಾಹಿಂ ಅವರ ಕಟ್ಟಡದಲ್ಲಿ ಈಗ ಹೋಟೆಲ್ ಸಾಮ್ರಾಟ್ ಗ್ರ್ಯಾಂಡ್ ಹಾಸನ ಮಂಗಳೂರು ಹೈವೇ ಪಕ್ಕದಲ್ಲಿ ಪ್ರವಾಸಿಗರನ್ನು ಆಕರ್ಷಿಸುತ್ತಿದೆ.

ಸಕಲೇಶಪುರದಲ್ಲಿ ಹಲವು ಕಾಲದಿಂದ ಹೋಟೆಲ್ ಉದ್ಯಮಿಗಳಾಗಿರುವ ಆಳ್ವ ಕುಟುಂಬದವರು ಇದನ್ನು ನಡೆಸುತ್ತಿದ್ದಾರೆ.

ಎಂಬತ್ತನಾಲ್ಕರ ಹರೆಯದ ಸ್ನೇಹ ಜೀವಿ..ಇಬ್ರಾಯಿ ಭಟ್ಟರು, ಹಳೆಯ ಸೌಹಾರ್ದದ ಮಾದರಿಯ ನೆನಪಾಗಿ, ವಿಶ್ರಾಂತ ಜೀವನ ನಡೆಸುತ್ತಿದ್ದಾರೆ.

ಅಪ್ಪಸ್ವಾಮಿ ಗೌಡರು: ಹಾಸನ ಜಿಲ್ಲೆಯ ಹೆತ್ತೂರಿನ ಅಪ್ಪಸ್ವಾಮಿ ಗೌಡರ ತಂದೆಯದು ದೊಡ್ಡ ಸಂಸಾರ ಮನೆತುಂಬ ಮಕ್ಕಳು. ಹಾಗಾಗಿ ಮಗನನ್ನು ಓದಿಸಲು ಕಷ್ಟವಿತ್ತು. ಆದ್ದರಿಂದ ಅಪ್ಪಸ್ವಾಮಿ ಗೌಡರು ಓದನ್ನು ನಿಲ್ಲಿಸಿ ಏನಾದರೂ ಉದ್ಯೋಗ

ಮಾಡಬೇಕೆಂದುಕೊಂಡು ಟೈಲರಿಂಗ್ ಕಲಿಯಲು ಪ್ರಾರಂಭಿಸಿದರು. ಸ್ವಲ್ಪ ಸಮಯ ದುಡಿದು ನಂತರ ಓದು ಮುಂದುವರೆಸುವ ಹಂಬಲ ಅವರದು. ಉಚ್ಚಂಗಿಯಲ್ಲಿ ಒಬ್ಬರ ಬಳಿ ಟೈಲರಿಂಗ್ ಕಲಿತರು. ಆದರೆ ಮುಂದೆ ಕೆಲಸ ಮಾಡಲು ಹೊಲಿಗೆ ಯಂತ್ರ ಬೇಕಿತ್ತು. ಹಣವಿಲ್ಲ. ಆಗ ಸಹಾಯಕ್ಕೆ ಬಂದವರು ಕೋಗರವಳ್ಳಿ ಕೃಷ್ಣಮೂರ್ತಿಯವರು. ಅವರು ಅಪ್ಪಸ್ವಾಮಿಗೌಡರಿಗೆ ಹೊಲಿಗೆ ಯಂತ್ರ ಕೊಳ್ಳಲು ಎಂಟುನೂರು ರೂಪಾಯಿಗಳನ್ನು ಕೊಟ್ಟರಂತೆ. ಆ ಎಂಟುನೂರು ರೂಪಾಯಿಗಳಿಂದ ಅಪ್ಪಸ್ವಾಮಿ ಗೌಡರು ಹೊಲಿಗೆ ಯಂತ್ರವನ್ನು ಕೊಂಡು ಸಕಲೇಶಪುರದಲ್ಲಿ ಸ್ವಂತ ಉದ್ಯೋಗ ಪ್ರಾರಂಭಿಸಿದರು. ಅದರೊಂದಿಗೆ ಅವರ ವಿದ್ಯೆಯೂ ಮುಂದುವರಿಯಿತು. ಹೊಲಿಗೆ ವೃತ್ತಿ ಮಾಡುತ್ತಲೇ ವಿದ್ಯಾಭ್ಯಾಸ ಮುಂದುವರೆಸಿ ವೈದ್ಯಕೀಯ ಪದವಿ ಪಡೆದರು. ನಂತರ ಅಪ್ಪಸ್ವಾಮಿ ಗೌಡರು ವೈದ್ಯಕೀಯದಲ್ಲಿ ಉನ್ನತಾಭ್ಯಾಸ ಮಾಡಿದರು. ಅಮೆರಿಕಾಕ್ಕೆ ಹೋಗಿ ನೆಲೆಸಿದರು. ಅಮೆರಿಕಾದಲ್ಲಿ ವೈದ್ಯರಾಗಿ ಬಹಳ ಪ್ರಖ್ಯಾತರಾದರು. ಉನ್ನತ ಸ್ಥಾನವನ್ನು ತಲುಪಿದರು.

ಒಮ್ಮೆ ಸಾರ್ವಜನಿಕ ಸಭೆಯೊಂದರಲ್ಲಿ ಅಪ್ಪಸ್ವಾಮಿ ಗೌಡರು

"ಅಂದು ಕೋಗರವಳ್ಳಿ ಕೃಷ್ಣಮೂರ್ತಿಯವರು ಕೊಟ್ಟ ಎಂಟುನೂರು ರೂ. ನನಗೆ ಎಂಟು ಕೋಟಿ ರೂಪಾಯಿಗಳಿಗೆ ಸಮ" ಎಂದು ಹೇಳಿ ಅವರ ಸಹಾಯವನ್ನು ನೆನಪು ಮಾಡಿಕೊಂಡರು.

ನಂತರ ಅವರು ಮುಂದುವರಿದು "ನಾನು ಆ ಎಂಟುನೂರು ರೂಪಾಯಿಗಳ ಋಣವನ್ನು ಈಗಲೂ ತೀರಿಸುತ್ತಾ ಇದ್ದೇನೆ. ಹೇಗೆಂದರೆ ನಾನು ಭಾರತಕ್ಕೆ ಬಂದಾಗೆಲ್ಲ ಊರಿಗೆ ಬರುತ್ತೇನೆ. ಹಾಗೆ ಬಂದಾಗ ಇಲ್ಲಿ ಯಾರಿಗೆ ಅಗತ್ಯವಿದೆಯೋ ಅಂಥವರಿಗೆ

ಹೊಲಿಗೆ ಯಂತ್ರಗಳನ್ನು ಕೊಡಿಸುತ್ತೇನೆ" ಎಂದರು.

ಅಪ್ಪಸ್ವಾಮಿ ಗೌಡರು ಹೀಗೆ ಉಚಿತವಾಗಿ ಹಂಚಿದ ಹೊಲಿಗೆ ಯಂತ್ರಗಳು ನೂರಾರು. ಅವರು ಇದನ್ನೊಂದು ವ್ರತದಂತೆ ನಡೆಸಿಕೊಂಡು ಬಂದಿದ್ದಾರೆ.

ಹಲವಾರು ಶಾಲೆಗಳಿಗೆ ಕಟ್ಟಡ ನಿರ್ಮಾಣಕ್ಕೆ ಕೊಡುಗೆ ನೀಡಿದ್ದಾರೆ, ಪರಿಕರಗಳು ಮುಂತಾದವನ್ನು ದಾನ ಮಾಡಿದ್ದಾರೆ. ಹತ್ತಾರು ವಿದ್ಯಾಸಂಸ್ಥೆಗಳಿಗೆ ಲಕ್ಷಾಂತರ ರೂ.ಗಳ ಪುಸ್ತಕಗಳನ್ನು ಕೊಟ್ಟಿದ್ದಾರೆ.

ದಟ್ಟ ಮಲೆನಾಡಿನಲ್ಲಿ ಹುಟ್ಟಿದ ಅಪ್ಪಸ್ವಾಮಿ ಗೌಡರ ಪರಿಸರ ಪ್ರೇಮವೂ ಮುಖ್ಯವಾದದ್ದು. ಗುಂಡ್ಯ ಜಲವಿದ್ಯುತ್ ಯೋಜನೆಯ ವಿರೋಧದ ಹೋರಾಟಕ್ಕೆ ಬೆಂಬಲ ಮತ್ತು ಧನಸಹಾಯ ಮಾಡಿದ್ದಲ್ಲದೆ. ಇಂದಿಗೂ ಮಲೆನಾಡನ್ನು ಉಳಿಸುವ ಎಲ್ಲ ಹೋರಾಟಗಳಿಗೆ ಬೆಂಬಲಿಗರಾಗಿದ್ದಾರೆ.

ಪರಿಸರ ಹೋರಾಟಗಳಿಗೆ ಬೆಂಬಲ ನೀಡುವುದು ನಿಮ್ಮ ಕರ್ತವ್ಯ ಎಂದು ಆದಿಚುಂಚನಗಿರಿಯ ಬಾಲಗಂಗಾಧರನಾಥ ಸ್ವಾಮಿಗಳಿಗೂ ಪತ್ರ ಅವರು ಬರೆದಿದ್ದರು. ಮಠ ಮಾನ್ಯಗಳು ಪರಿಸರ ಉಳಿಸುವಲ್ಲಿ ಮಹತ್ತರ ಕಾರ್ಯ ನಿರ್ವಹಿಸಬೇಕೆಂದು ಅಪ್ಪಸ್ವಾಮಿಗೌಡರ ಖಚಿತ ಅಭಿಪ್ರಾಯ.

ವೆಂಕಟದಾಸರು: ವೆಂಕಟಯ್ಯ ಮೂಲತಃ ಬೇಲೂರು ತಾಲ್ಲೂಕಿನವರು. ಅಲ್ಲೇ ಇವರ ಹಿರಿಯರಿಗೆ ಸ್ವಲ್ಪ ಜಮೀನು ಇತ್ತಂತೆ. ಆದರೆ ಆಗಿನ್ನೂ ನೀರಾವರಿ ಆಗಿರಲಿಲ್ಲ. ಆದ್ದರಿಂದ ಕಾಲಕ್ಕೆ ಸರಿಯಾಗಿ ಮಳೆಯಾದರೆ ಮಾತ್ರ ಬೆಳೆ. ಇವರು ಬೋವಿ ಜನಾಂಗದವರು. ಇವರ ಮನೆಯ ಉಳಿದವರೆಲ್ಲ ಬೆಳೆಯಿಲ್ಲದ ಕಾಲದಲ್ಲಿ ಮಲೆನಾಡಿಗೆ ಹೋಗಿ ಕೆರೆ, ಕುಂಟೆ, ಗದ್ದೆ ಮಾಡುವುದು,

ಕಾಲುವೆ ತೋಡುವುದು ಇತ್ಯಾದಿ ಮಣ್ಣು ಕೆಲಸ ಮಾಡುತ್ತಿದ್ದರು.

ವೆಂಕಟಯ್ಯ ಶಾಲೆ ಕಲಿತಿರಲಿಲ್ಲ. ಆದರೆ ಬಾಲ್ಯದಲ್ಲೇ ಚೆನ್ನಾಗಿ ಹಾಡುತ್ತಿದ್ದುದರಿಂದ ಅರಸೀಕೆರೆ ಕಡೆಯ ಹರಿಕಥೆದಾಸರೊಬ್ಬರು ಕರೆದೊಯ್ದು ತಮ್ಮ ಮನೆಯಲ್ಲಿ ಕೆಲಸಕ್ಕೆ ಇಟ್ಟುಕೊಂಡಿದ್ದರಂತೆ. ಅವರು ಹಳ್ಳಿಯ ಕಡೆ ಕಥಾಕಾಲಕ್ಷೇಪಕ್ಕೆ ಹೋಗುವಾಗ ಈ ವೆಂಕಟಯ್ಯನನ್ನು ಜೊತೆಯಲ್ಲಿ ಹಾಡಲು, ಹಾರ್ಮೋನಿಯಂ ಶ್ರುತಿ ಹಿಡಿಯಲು ಕರೆದೊಯ್ಯುತ್ತಿದ್ದರಂತೆ. ಹೀಗೇ ವೆಂಕಟಯ್ಯನೂ ಹರಿಕಥೆ ಕಲಿತರು. ನಂತರ ವೆಂಕಟದಾಸರಾದರು.

ವೆಂಕಟದಾಸರು ಹಾಸನ ಜಿಲ್ಲೆಯಲ್ಲೆಲ್ಲ ಸುತ್ತಾಡಿ ಹಳ್ಳಿಗಳಲ್ಲಿ ಹರಿಕಥೆ ಮಾಡುತ್ತಿದ್ದರು. ಕೆಲವು ದಿನ ಅಲ್ಲೇ ಇರುತ್ತಿದ್ದರು. ಇದರಿಂದಾಗಿ ಅವರು ಖಾಯಂ ಸಂಚಾರಿ, ಎಲ್ಲಿ ಇರುತ್ತಿದ್ದರೋ ಅದೇ ಅವರ ಊರಾಗಿತ್ತು. ಬೇಸಿಗೆ ಕಾಲದಲ್ಲಿ ಮಲೆನಾಡಿನ ಕಡೆಗೂ ಬರುತ್ತಿದ್ದರು.

ಇದೆಲ್ಲ ನಡೆಯುತ್ತಿದ್ದುದು ಸಾವಿರದ ಒಂಬೈನೂರಾ ಐವತ್ತರಿಂದ ಎಂಬತ್ತನೆಯ ಇಸವಿಯ ಕಾಲಘಟ್ಟದಲ್ಲಿ..

ಎಂಬತ್ತನೇ ಇಸವಿ ಸುಮಾರಿಗೆ ನಮ್ಮೂರಿನ ಬಳಿ ವೆಂಕಟದಾಸರ ಹರಿಕಥೆಯಿತ್ತು.

ಅದು ಮಹಾಭಾರತದ ಒಂದು ಪ್ರಸಂಗ. ಮಹಾಭಾರತದಲ್ಲಿ ಪಾಂಡವರು ಐವರೂ ದ್ರೌಪದಿಯೊಡನೆ ಕಾಡಿನಲ್ಲಿ ಸಂಚರಿಸುವಾಗ ಅವರಿಗೆ ಹಸಿವಾಯಿತು. ಕಣ್ವ ಋಷಿಯ ಆಶ್ರಮದ ಮರವೊಂದರಲ್ಲಿ ಒಂದು ದೊಡ್ಡ ಜಂಬುನೇರಳೆ ಹಣ್ಣನ್ನು ಅವರು ಕಂಡರು. ಆತನ ಅಪ್ಪಣೆಯಿಲ್ಲದೆ ಆ ಹಣ್ಣನ್ನು ಕಿತ್ತರು. ಕಣ್ವ ಋಷಿ ತಪಸ್ಸಿಗೆ ಕುಳಿತವನು ವರ್ಷಕ್ಕೊಮ್ಮೆ ಮಾತ್ರ ಎದ್ದು ಆ ಹಣ್ಣನ್ನು ತಿಂದು ಮತ್ತೆ ತಪಸ್ಸಿಗೆ ಕೂರುತ್ತಿದ್ದ. ಈ ವಿಚಾರವನ್ನು ತಿಳಿದ ಪಾಂಡವರಿಗೆ

ತಾವು ತಪ್ಪು ಮಾಡಿದ್ದೇವೆ, ಋಷಿ ಶಾಪ ಕೊಟ್ಟರೇನು ಗತಿ ಎಂಬ ಭಯವುಂಟಾಯಿತು.

ಆಗ ಪಾಂಡವರು ಕೃಷ್ಣನಲ್ಲಿ ಪರಿಹಾರಕ್ಕಾಗಿ ಪ್ರಾರ್ಥಿಸಿದರು. ಆಗ ಕೃಷ್ಣ ಪ್ರತಿಯೊಬ್ಬರೂ ಅವರವರ ಜೀವನದ ಒಂದು ಪ್ರಮುಖ ಸತ್ಯವನ್ನು ಹೇಳಿದರೆ ಆ ಹಣ್ಣು ಮತ್ತೆ ಹೋಗಿ ಮರಕ್ಕೆ ಅಂಟಿಕೊಳ್ಳುತ್ತದೆ ಎಂದು ಪರಿಹಾರವನ್ನು ಸೂಚಿಸಿದ. ಅದರಂತೆ ಒಬ್ಬೊಬ್ಬರೂ ಒಂದೊಂದು ಸತ್ಯವನ್ನು ಹೇಳಿದಾಗ ಹಣ್ಣು ಮೇಲೇರುತ್ತಾ ಹೋಯಿತು. ಕೊನೆಗೆ ದ್ರೌಪದಿ ತನಗೆ ಐವರು ಪತಿಯರಿದ್ದರೂ ಕರ್ಣನನ್ನು ಇಷ್ಟಪಟ್ಟಿದ್ದೆನೆಂದು ಹೇಳಿದಳು. ಆಗ ಹಣ್ಣು ಪುನಃ ಮರಕ್ಕೆ ತಗುಲಿಕೊಂಡಿತೆಂಬುದು ಕಥಾ ಸಾರಾಂಶ.

ನನಗೆ ವೆಂಕಟದಾಸರನ್ನು ಒಂದೆರಡು ಸಲ ಭೇಟಿಯಾಗಿ ಪರಿಚಯವಿತ್ತು. ಆ ಸಲಿಗೆಯಲ್ಲಿ ನಾನು ಮಾತನಾಡುತ್ತಿದ್ದೆ. ಆ ದಿನ ಅವರೊಂದಿಗೆ ಮಾತಿಗಿಳಿದೆ. ಸಂಭಾಷಣೆ ಹೀಗೆ ಸಾಗಿತು.

"ನಿಮ್ಮ ಕಥೆಯ ಬಗ್ಗೆ ನನ್ನ ತಕರಾರಿದೆ. ಇದು ಮಹಿಳೆಯರು ನಂಬಿಕೆಗೆ ಅರ್ಹರಲ್ಲ ಎಂದು ಹೇಳುತ್ತದೆ" ನಾನೆಂದೆ.

ಅದಕ್ಕವರು "ನಿನಗೆ ಮದುವೆಯಾಗಿದೆಯೆ? ಎಂದರು.

"ಇಲ್ಲ"

"ಹಾಗಾದರೆ ನಿನಗೆ ತಿಳಿಯದು, ನಿನಗೆ ಜೀವನಾನುಭವ ಇಲ್ಲ"

"ಸರಿ ಹಾಗಾದರೆ ನೀವೇ ಹೇಳಿ"

"ಈಗ ಹೇಳು, ಗಂಡಿಗೆ ಎಷ್ಟು ಜನ ತಾಯಂದಿರು"

"ಇಬ್ಬರು, ಒಬ್ಬಳು ಹೆತ್ತ ತಾಯಿ, ಇನ್ನೊಬ್ಬಳು ಸಾಕಿದ

ತಾಯಿ" ನಾನೆಂದೆ.

"ಅದಕ್ಕೇ ನಿನಗೆ ಅನುಭವ ಇಲ್ಲ ಅಂದಿದ್ದು, ನೋಡು ಗಂಡಿಗೆ ಮೂವರು ತಾಯಂದಿರು, ಮೊದಲಿಗೆ ಹೆತ್ತ ತಾಯಿ, ಎರಡನೆಯವಳು ಹೆಂಡತಿ, ಆಕೆಯೂ ತಾಯಿಯೇ, ಮೂರನೆಯವಳು ಮಗಳು. ವೃದ್ಧಾಪ್ಯದಲ್ಲಿ ಮಗಳು ಕೂಡಾ ತಾಯಿಯೇ" ಎಂದರು.

"ಸರಿ ಅದಕ್ಕೂ ದ್ರೌಪದಿಯ ಕಥೆಗೂ ಏನು ಸಂಬಂಧ?"

"ಅದೇ ಹೇಳ್ತೀನಿ ಕೇಳು, ದ್ರೌಪದಿಗೆ ಐದು ಜನ ಗಂಡಂದಿರು, ಒಂದರ್ಥದಲ್ಲಿ ಐದು ಜನ ಪಾಂಡವರೂ ಆಕೆಯ ಮಕ್ಕಳು. ದ್ರೌಪದಿಗೆ ಹಾಗೆ ಬೇರೊಬ್ಬನನ್ನು ಇಷ್ಟಪಡುವುದಾದರೆ ಎಷ್ಟೆಷ್ಟೋ ಜನ ರಾಜಪುತ್ರರಿದ್ದರು. ಕೌರವರಲ್ಲೇ ಆದರೂ ದುರ್ಯೋಧನ ದುಶ್ಶಾಸನರಂತವರು ಇದ್ದರು. ಆದರೆ ಅವರೆಲ್ಲರನ್ನೂ ಬಿಟ್ಟು ದ್ರೌಪದಿ ಸೂತನ ಮಗನಾದ ಕರ್ಣನನ್ನು ಯಾಕೆ ಇಷ್ಟಪಟ್ಟಳು ಯೋಚನೆ ಮಾಡು? ದ್ರೌಪದಿಯ ತಾಯಿ ಕರುಳಿಗೆ ಐವರು ಪಾಂಡವರ ಜೊತೆ ಕರ್ಣನೂ ಇವರದ್ದೇ ಕುಡಿ ಎಂದು ಭಾಸವಾಗಿದೆ. ಬುದ್ಧಿ ಅರಿಯದ್ದನ್ನು ಹೃದಯ ಅರಿತಿದೆ. ಆದ್ದರಿಂದ ದ್ರೌಪದಿ ಬೇರೆಲ್ಲರ ಬಗೆಗೆ ಯೋಚನೆ ಕೂಡಾ ಮಾಡದೆ ಕರ್ಣನನ್ನು ಇಷ್ಟಪಟ್ಟಳು. ಇದು ತಾಯ್ತನದ ಮಹಿಮೆಯ ಕಥೆ. ನೀನು ಹೇಳಿದಂತೆ ಹೆಣ್ಣಿನ ಬಗೆಗಿನ ಅನುಮಾನದ, ಅವಮಾನದ ಕಥೆಯಲ್ಲ" ಎಂದರು.

ನಾನು ಮೊದಲ ಬಾರಿಗೆ ತಾಯ್ತನದ ಬಗೆಗಿನ ಇಂತಹ ಹೊಸ ಒಳನೋಟವೊಂದನ್ನು ಕೇಳಿದ್ದೆ.

ವೆಂಕಟದಾಸರು ಸ್ವಲ್ಪ ಮುಂಗೋಪಿ, ಅನಕ್ಷರಸ್ಥರು. ಆದರೆ ಅವರಲ್ಲಿ ಇಂತಹ ಹಲವು ಜೀವಪರ ಒಳನೋಟಗಳಿದ್ದವು. ಅವರ

ಹರಿಕಥೆಗಳಲ್ಲಿ ಇಂತಹ ಹಲವು ಪ್ರಸಂಗಗಳನ್ನು ಹೇಳುತ್ತಿದ್ದರು. ಆ ಕಥೆಗಳೆಲ್ಲ ನಿಜವಾದ ಮಣ್ಣಿನ ಮತ್ತು ಕಾಯಕದ ಸಂಸ್ಕೃತಿಯಾಗಿದ್ದವು.

ಮಳಲಿ ಮಾದೇವ: ಮಳಲಿ ಮಾದೇವ ಗ್ರಾಮ ಪಂಚಾಯತ್ ಅಧ್ಯಕ್ಷರಾಗಿದ್ದರು. ಒಮ್ಮೆ ಸಕಲೇಶಪುರದಲ್ಲಿ ಅವರು "ಬನ್ನಿ ಒಂದ್ಸಲ ಸ್ಟೇಷನ್ ಕಡೆ ಹೋಗಿ ಬರೋಣ" ಎಂದು ನನ್ನ ಬೈಕಿನ ಹಿಂಬದಿಯಲ್ಲಿ ಕುಳಿತರು. ಬೈಕು ಪೊಲೀಸ್ ಸ್ಟೇಷನ್ ಕಡೆ ಸಾಗಿತು.

ಸ್ಟೇಷನ್ನಿನಲ್ಲಿ ಕೆಲವರು ದಲಿತ ಹುಡುಗರು ಇದ್ದರು. ಪಕ್ಕದ ಹಳ್ಳಿಯ ಸಣ್ಣ ಗುಡಿಯೊಂದರ ಐನೋರನ್ನು (ಅರ್ಚಕ) ಪೊಲೀಸರು ಕರೆತಂದು ನಿಲ್ಲಿಸಿಕೊಂಡಿದ್ದರು. ಆತನ ಮೇಲೆ ದಲಿತರ ಮೇಲೆ ಜಾತಿನಿಂದನೆಯ ದೂರು ಇತ್ತು.

ಈ ಅರ್ಚಕನೂ ಅದೇ ಊರಿನ ಅತಿ ಸಣ್ಣ ರೈತ. ಗುಡಿ ಪೂಜೆಯನ್ನೂ ಮಾಡುತ್ತಿದ್ದ.

ಅರ್ಚಕ ಈ ಹುಡುಗರ ಬಳಿ ಸ್ವಲ್ಪ ಹಣವನ್ನು ಸಾಲ ತೆಗೆದುಕೊಂಡು ವಾಪಸ್ ಕೊಟ್ಟಿರಲಿಲ್ಲ. ಅದನ್ನು ಕೇಳಿ ಕೇಳಿ ಸಾಕಾಗಿ ಹುಡುಗರು ಗುಡಿಯ ಬಳಿ ಹೋಗಿ ಗಲಾಟೆ ಮಾಡಿದ್ದಾರೆ. ಅರ್ಚಕ ಇವರಿಗೆ ಬಾಯಿಗೆ ಬಂದಂತೆ ಬೈದು ಇವರ ಸೊಕ್ಕು ಮುರಿಯುವ ಮಾತಾಡಿದ್ದಾನೆ. ಸೊಕ್ಕು ಮುರಿಯುತ್ತೇನೆ ಎನ್ನುವ ಅರ್ಚಕನೋ ಜೋರಾಗಿ ಗಾಳಿ ಬಂದರೆ ಹಾರಿ ಹೋಗುವಂತಿದ್ದ!

ದಲಿತ ಹುಡುಗರು ಕಂಪ್ಲೇಂಟ್ ಮಾಡಿದ್ದರು ಮತ್ತು ಮಾದೇವರಿಗೂ ಫೋನ್ ಮಾಡಿ ತಿಳಿಸಿದ್ದರು. ಅರ್ಚಕನನ್ನು ಕೇಳಿದಾಗ, ನಾನು ದುಡ್ಡು ತೆಗೆದುಕೊಂಡಿರುವುದು ನಿಜ. ಆದರೆ "ನನ್ನ ಬಗ್ಗೆ ಇವರಿಗೆ ಗೌರವನೇ ಇಲ್ಲ. ಗುಡಿ ಹತ್ರ ಬಂದು ಏಕವಚನದಲ್ಲಿ ಕರೀತಾರೆ" ಎಂದು ಮತ್ತಷ್ಟು ಬೈದ. ಆಗ ಅಲ್ಲಿದ್ದ

ಪೊಲೀಸರು "ನೀನು ಇಲ್ಲೂ ಅದೇ ಕೆಟ್ಟ ಮಾತಾಡುತ್ತಿದ್ದೀಯ ನಿನ್ನನ್ನು ಒದ್ದು ಒಳಗೆ ಹಾಕುತ್ತೇನೆ" ಎಂದು ಎಚ್ಚರಿಸಿದರು.

ಆಗ ಹುಡುಗರು, "ನಿಂಗೆತ ಮರ್ಯಾದಿ. ನಮ್ಜೊತೆಲೇ ಎಣ್ಣೆ ಹಾಕ್ತೀಯ, ಬೀಡಿ ಇಸ್ಕಂಡ್ ಸೇತ್ತೀಯ, ಅವಾಗ ಜಾತಿ ಎಲ್ಲೋಗಿತ್ತು" ಎಂದರು.

ನಂತರ ಮಾದೇವ ಮಾತಿಗಿಳಿದರು. ಮೊದಲು ಅರ್ಚಕನಿಗೆ ಒಂದಷ್ಟು ಬುದ್ಧಿ ಹೇಳಿದರು, ಸ್ವಲ್ಪ ಹೊತ್ತು ವಾದ ಮಾಡಿದ ಆತ ಕೊನೆಗೆ ತಪ್ಪೊಪ್ಪಿಕೊಳ್ಳುವುದಾಗಿ ಹೇಳಿದ. ನಂತರ ಮಾದೇವ ಹುಡುಗರಿಗೆ "ನೋಡಿ ನಮಗೆ ಈ ದೇಶದ ಸಂವಿಧಾನದಲ್ಲಿ ಜಾತಿನಿಂದನೆ ಕಾನೂನನ್ನು ಕೊಟ್ಟಿರುವುದು ಒಂದು ಬ್ರಹ್ಮಾಸ್ತ್ರ. ಅದನ್ನು ಸರಿಯಾಗಿ ಉಪಯೋಗಿಸಿದರೆ ಅದಕ್ಕೆ ಸಮಾಜವನ್ನು ತಿದ್ದುವ, ಬದಲಾಯಿಸುವ ಹಾಗೂ ದಲಿತರಿಗೆ ರಕ್ಷಣೆ ನೀಡುವ ಎಲ್ಲ ಶಕ್ತಿ ಇದೆ. ಅದನ್ನು ಸರಿಯಾಗಿ ಯೋಚನೆ ಮಾಡಿ ಬಳಸಬೇಕು ಇಲ್ಲವಾದಲ್ಲಿ ಅದರ ಶಕ್ತಿಯೂ ಕುಂದುತ್ತದೆ.

ಈತ ಒಂದು ಗುಬ್ಬಿ, ಜೊತೆಗೆ ಅಜ್ಞಾನಿ. ಈತನ ಮೇಲೆ ಅದರ ಪ್ರಯೋಗ ಬೇಡ. ಸರಿಯಾದ ಎಚ್ಚರಿಕೆ ಮತ್ತು ತಿಳುವಳಿಕೆ ಕೊಟ್ಟರೆ ಸಾಕು. ಇನ್ನು ಮುಂದೆ ಈತ ಹೀಗೆ ಮಾಡಲಾರ ಅನ್ನಿಸುತ್ತದೆ. ಈತನನ್ನು ಕ್ಷಮಿಸಿ ನಾವು ದೊಡ್ಡವರಾಗೋಣ ಯೋಚನೆ ಮಾಡಿ ಎಂದರು. ಹುಡುಗರು ದೂರನ್ನು ವಾಪಸ್ ಪಡೆದರು.

ಹಲವು ಕಡೆಗಳಲ್ಲಿ ಇಂತಹ ಸಮಾಧಾನ ಚಿತ್ತದ, ವಿವೇಚನೆಯ ಸಂಗತಿಗಳು ನಡೆಯುತ್ತಲೇ ಇವೆ. ಅವುಗಳಲ್ಲಿ ಹೆಚ್ಚಿನವು ಬೆಳಕಿಗೆ ಬಾರವು. ಆದರೆ ಅದು ಸಮಾಜದಲ್ಲಿ ಬೇಸಗೆಯಲ್ಲಿನ ತಂಗಾಳಿಯಂತೆ. ಅಲ್ಲಲ್ಲಿ ಬೀಸಿ ತಂಪು ಮಾಡುತ್ತಿರುತ್ತದೆ.

ಒಂದೆರಡು ಜನಪದ ಸಾಮರಸ್ಯದ ಚುಕ್ಕಿ-ನಕ್ಷತ್ರಗಳಂತಹ ಉದಾಹರಣೆಗಳು ಕಮ್ಮಾರಗಟ್ಟೆ ಮತ್ತು ಕಮ್ಮರಿಗೆ.

ಕಮ್ಮಾರಗಟ್ಟೆ: ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ಒಂದು ಹಳ್ಳಿ ಕಮ್ಮಾರಗಟ್ಟೆ. ನೂರಕ್ಕೆ ನೂರು ಮುಸ್ಮಿಮರೇ ವಾಸಿಸುವ ಹಳ್ಳಿ. ಅವರು ಯಾವ ಕಾಲದಲ್ಲಿ ಬಂದರು ಅಥವಾ ಇಡೀ ಊರೇ ಹೇಗೆ ಮುಸ್ಲಿಮರ ವಾಸಸ್ಥಾನವಾಯಿತು ಎನ್ನುವುದಕ್ಕೆ ಯಾವುದೇ ಇತಿಹಾಸ ದೊರೆಯುವುದಿಲ್ಲ. ಆದರೆ ಇಲ್ಲಿ ಹೆಚ್ಚಿನ ಮುಸ್ಲಿಂ ಕುಟಂಬದವರು ಕೃಷಿಕರು.

ಜೊತೆಗ ಸಣ್ಣ ಪುಟ್ಟ ವ್ಯಾಪಾರವನ್ನು ಅವಲಂಬಿಸಿದ್ದಾರೆ. ಮರದ ವ್ಯಾಪಾರ, ಕುರಿಗಳ ವ್ಯಾಪಾರ, ಹಬ್ಬ ಹರಿದಿನಗಳಲ್ಲಿ ಮಾಂಸದ ವ್ಯಾಪಾರ, ಚರ್ಮದ ವ್ಯಾಪಾರ ಮಾಡುತ್ತಾರೆ.

ಇಲ್ಲಿನ ಅಸ್ಲಿ ಬುದೀನ್ ಎನ್ನುವವರೊಬ್ಬರು ಬೀಡಿ ಕಟ್ಟಿಸಿ ಮಾರುತ್ತಿದ್ದರು. ಇದು ಮಂಗಳೂರು ಬೀಡಿ ಅಲ್ಲ. ಸ್ವಲ್ಪ ಉದ್ದ ಹೆಚ್ಚಿರುವ ನಾಟಿ ಬೀಡಿ. ಅದಕ್ಕೆ ನಾಟಿ ಬೀಡಿ ಇಲ್ಲವೇ ಬುದೀನ್ ಬೀಡಿ ಎಂದು ಹೆಸರಿತ್ತು. ಇದಕ್ಕಾಗಿ ಇಲ್ಲೇ ಪಕ್ಕದಲ್ಲಿದ್ದ ಭಾಗೇಶ್ವರ ಕಾಡಿನಲ್ಲಿ ಹಾಗೂ ಬಸವಾಘಟ್ಟದ ಕಾಡಿನಲ್ಲಿ ಸಿಗುವ ತೂಪರದ ಎಲೆಯನ್ನು ಬಳಸುತ್ತಿದ್ದರು. ಆಗ ಕಮ್ಮಾರಗಟ್ಟೆಯ ಪ್ರತಿ ಮನೆಯಲ್ಲಿಯೂ ಬೀಡಿ ಕಟ್ಟುತ್ತಿದ್ದರು. ಸುಮಾರು ನಲುವತ್ತು ಐವತ್ತು ವರ್ಷಗಳಿಂದ ನಡೆದು ಬಂದಿತ್ತು ಈಗ ಈ ಬುದೀನ್ ಬೀಡಿ ಈಗ ನಿಂತು ಹೋಗಿದೆ.

ಯಾವುದೇ ಹಬ್ಬ ಹರಿದಿನವಾಗಲೀ ಈ ಅಸ್ಲಿ ಬುದೀನ್ ಅವರ ಮನೆಯಲ್ಲಿ ಎಲ್ಲರನ್ನೂ ಊಟಕ್ಕೆ ಕರೆಯುತ್ತಿದ್ದರು. ಅವರ ಮನೆಯನ್ನು ಬೀಡಿ ಫ್ಯಾಕ್ಟರಿ ಎನ್ನುವರು. ಅಕ್ಕಪಕ್ಕದ ಹಳ್ಳಿಗಳ ಹಿಂದೂಗಳೂ ಅಲ್ಲಿಗೆ ಊಟಕ್ಕೆ ಹೋಗುವರು. ಅವರ ಎಲ್ಲ

ಹಬ್ಬಗಳೂ ಮಾಂಸದೂಟದ ಹಬ್ಬವೇ ಆದುದರಿಂದ ಬಿರಿಯಾನಿ ಊಟ ಇದ್ದೇ ಇರುತ್ತಿತ್ತು.

ಆ ಊರಿನ ಎಲ್ಲಾ ಮುಸ್ಲಿಮರೂ ಪರಿಚಯದ ಎಲ್ಲಾ ಹಿಂದೂಗಳನ್ನು ಅಕ್ಕ ಅಣ್ಣ, ಭಾವ ನೆಂಟ, ಚಿಕ್ಕಪ್ಪ, ಮಾವ ಎಂದೇ ಮಾತಾಡಿಸುವರು. ಆ ಊರಿನಲ್ಲಿ ಆಗಲೀ ಅಕ್ಕಪಕ್ಕದಲ್ಲಿ ಆಗಲೀ ಇದುವರೆಗೂ ಯಾವುದೇ ಗಲಾಟೆಯಾಗಲಿ, ಜಗಳವಾಗಲಿ ನಡೆದ ದಾಖಲೆ ಇಲ್ಲ. ಪಕ್ಕದ ನಗರ ಪ್ರದೇಶದಲ್ಲಿ ಗಲಾಟೆಯಾದಾಗಲೂ ಈ ಹಳ್ಳಿಯ ಜನರು ಶಾಂತವಾಗಿ ಸೌಹಾರ್ದದಲ್ಲೇ ಇದ್ದಾರೆ.

ಕಮ್ಮರಿಗೆ: ಹಾಸನ ಜಿಲ್ಲೆ ದುದ್ದ ಹೋಬಳಿ ಬಳಿ ಇರುವ ಗ್ರಾಮ ಕಮ್ಮರಿಗೆ, ಸುಮಾರು ನೂರೈವತ್ತು ಮನೆಗಳಿರುವ ಸಂಪೂರ್ಣವಾಗಿ ಹಿಂದೂಗಳೇ ಇರುವ ಗ್ರಾಮ. ಈ ಊರಿನ ಮುಂಭಾಗದಲ್ಲಿಯೇ ಒಂದು ದರ್ಗಾ ಇದೆ. ಅದನ್ನು ಸಾಬರ ಗುಡಿ ಎಂದು ಕರೆಯುತ್ತಾರೆ. ವರ್ಷಕ್ಕೊಮ್ಮೆ ಊರವರೆಲ್ಲ ಸೇರಿ ಗುಡಿಗೆ ಸುಣ್ಣ ಬಣ್ಣ ಬಳಿದು ಹಬ್ಬ ಮಾಡುತ್ತಾರೆ. ಪಕ್ಕದ ಯೋಗಿಹಳ್ಳಿ ಎಂಬ ಹಳ್ಳಿಯಿಂದ ಹತ್ತು ಮುಸ್ಲಿಮರನ್ನು ಕರೆತಂದು ಅವರಲ್ಲಿ ಪೂಜೆ ಮಾಡಿಸುತ್ತಾರೆ. ಇದು ಹಿಂದೆ ಈ ಊರಿನಲ್ಲಿ ಮುಸ್ಲಿಮರು ಇದ್ದ ಕುರುಹಾಗಿರಬಹುದು.

ಒಮ್ಮೆ ಇಲ್ಲಿ ಯಾಕೆ ಮುಸ್ಲಿಮರ ಗುಡಿ ಇರಬೇಕು ಎಂದು ತೆಗೆಸಲು ನೋಡಿದರಂತೆ ಅವರು ಏನೋ ಕಾರಣದಿಂದ ಅಕಾಲ ಮರಣ ಹೊಂದಿದರಂತೆ, ಆದ್ದರಿಂದ ಈ ಆಚರಣೆಯನ್ನು ಮುಂದುವರೆಸಿಕೊಂಡು ಬಂದಿದ್ದೇವೆ ಎಂದು ಸ್ಥಳಿಯರು ಹೇಳುತ್ತಾರೆ.

ಪಕ್ಕದ ಯೋಗಿಹಳ್ಳಿಯಲ್ಲಿಯೂ ಅರ್ಧದಷ್ಟು ಜನರು

ಮುಸ್ಲಿಮರಿದ್ದರು. ಅವರೆಲ್ಲ ಕೃಷಿಕರಾಗಿದ್ದರು. ಆದರೆ ಈಗ ಹೆಚ್ಚಿನವರು ಕೃಷಿಯನ್ನು ಬಿಟ್ಟು ಬೇರೆ ಉದ್ಯೋಗ ಹಿಡಿದು ಬೇರೆ ಬೇರೆ ಕಡೆ ಹಂಚಿ ಹೋಗಿದ್ದಾರೆ. ಇಲ್ಲಿನ ಎಲ್ಲಾ ಮುಸ್ಲಿಮರೂ ಚೆನ್ನಾಗಿ ಕನ್ನಡ ಮಾತನಾಡುತ್ತಾರೆ. ಎಲ್ಲರೊಂದಿಗೆ ಸೌಹಾರ್ದ ಸಂಬಂಧದಿಂದ ಚೆನ್ನಾಗಿದ್ದಾರೆ. ಎಲ್ಲರೊಂದಿಗೆ ಹಬ್ಬ ಹರಿದಿನ ಮದುವೆ ಸಮಾರಂಭಗಳಲ್ಲಿ ಭಾಗವಹಿಸುತ್ತ ಅಕ್ಷರಸ್ಥರು ಅರಿತುಕೊಳ್ಳಬೇಕಾದ ಸಂದೇಶವನ್ನು ನೀಡುತ್ತಿದ್ದಾರೆ.

ಕೊನೆಯ ಹನಿಗಳು: ಇಂತಹ ನೂರಾರು ಹಳ್ಳಿಗಳನ್ನು ನಾವಿಂದೂ ಕೂಡ ಅಲ್ಲಲ್ಲಿ ಗುರುತಿಸಬಹುದು, ಅರಕಲಗೂಡು ತಾಲ್ಲೂಕಿನ ಹಂಡ್ರಂಗಿ ಎಂಬ ಗ್ರಾಮವೂ ಹೀಗೇಯೇ. ಅಲ್ಲಿನ ಮುಸ್ಲಿಮರು ಗುಡಿಯೊಂದಕ್ಕೆ ಎಷ್ಟೋ ವರ್ಷಗಳಿಂದ ನಂದಾದೀಪ ಹಚ್ಚುವ ಪದ್ಧತಿಯಿದೆ.

ಅರಸೀಕೆರೆ ತಾಲ್ಲೂಕಿನ ಜಾವಗಲ್ ನ ಹಜರತ್ ಖಲಂದರ್ ಷಾ ದರ್ಗಾ ಹಿಂದೂ ಮುಸ್ಲಿಂ ಸಾಮರಸ್ಯದ ಸೂಫಿ ಸಂತರ ದೊಡ್ಡ ಕೇಂದ್ರವಾಗಿ ಪ್ರಸಿದ್ಧವಾಗಿದೆ. ಮುಸ್ಲಿಮರಂತೆ ಅಲ್ಲಿಗೆ ನೂರಾರು ಜನ ಹಿಂದೂಗಳೂ ಕೂಡಾ ಹರಕೆ-ಕಾಣಿಕೆ ಸಲ್ಲಿಸುತ್ತಾರೆ.

ಹಾಸನ ಜಿಲ್ಲೆಯ ಹೆಚ್ಚಿನ ಎಲ್ಲಾ ಜಾತ್ರೆಗಳಲ್ಲಿ ಮುಸ್ಲಿಮರಿಂದ ಅನ್ನದಾನ ಪಾನಕ ಸೇವೆ ಇರುತ್ತದೆ. ಗಣಪತಿ ಉತ್ಸವ ಸಮಿತಿಗಳಲ್ಲಿಯೂ ಮುಸ್ಲಿಮರು ಇರುತ್ತಾರೆ. ಇಂತಹ ಸಂಗತಿಗಳು ಹಿಂದೆ ನಿಜವಾದ ಸೌಹಾರ್ದದ ನಡವಳಿಕೆಗಳೇ ಆಗಿದ್ದು, ಇತ್ತೀಚಿನ ದಿನಗಳಲ್ಲಿ ಕೆಲವು ಸಂದರ್ಭಗಳಲ್ಲಿ ಒಂದು ರೀತಿಯ ಶುಷ್ಕ ಆಚರಣೆಗಳಂತೆಯೂ ಭಾಸವಾಗುತ್ತವೆ.

ಏನೇ ಆದರೂ ಹಾಸನ ಜಿಲ್ಲೆಯ ಸಾಮರಸ್ಯದ ನೆಲಗಟ್ಟು

ಇನ್ನೂ ಭದ್ರವಾಗಿ ಉಳಿದಿದೆ ಎನ್ನಲು ಅಡ್ಡಿಯಿಲ್ಲ. ಆದರೆ ಕೊನೆಗೂ ಹೇಳಲೇ ಬೇಕಾದ ಒಂದು ವಿಷಾದದ ಸಂಗತಿಯೆಂದರೆ. ಹಿಂದೂ ಮುಸ್ಲಿಂ ಕ್ರೈಸ್ತ ಅಥವಾ ಇನ್ನಾವುದೇ ಜಾತಿಗಳ ನಡುವಿನ ಸಾಮರಸ್ಯ ಮತ್ತು ಸೌಹಾರ್ದದ ಬಗ್ಗೆ ನಾವು ಮಾತನಾಡಿದಷ್ಟು ಧೈರ್ಯವಾಗಿ ದಲಿತ ಸಮುದಾಯಗಳ ಬಗೆಗಿನ ಸಾಮರಸ್ಯದ ಬಗ್ಗೆ ಮಾತನಾಡಲು ಸಾಧ್ಯವಾಗುವುದಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷ ಕಳೆದ ನಂತರವೂ ಆ ವಿಚಾರದಲ್ಲಿ ನಾವಿನ್ನೂ ಅಪರಾಧೀ ಭಾವದಲ್ಲಿ ಮುದುಡುವಂತಹ ಸನ್ನಿವೇಶದಲ್ಲೇ ಇದ್ದೇವೆಂದು ಹೇಳಲು ವಿಷಾದವಾಗುತ್ತದೆ.

ಆ ಕಾರಣದಿಂದಲೇ ಈ ಬರಹಗಳಲ್ಲಿ ಪ್ರಸ್ತಾಪವಾಗಿರುವ ಗೊರೂರು ರಾಮಸ್ವಾಮಿ ಐಯ್ಯಂಗಾರ್, ಎಚ್.ಬಿ. ಜ್ವಾಲನಯ್ಯ, ಹಾರ್ಲೆ ಗಣಪಯ್ಯ, ಎನ್.ಜಿ. ರವೀಂದ್ರನಾಥ್ ಅಂತವರು ಒಂದಷ್ಟು ಹೆಚ್ಚು ಜೀವಪರರಾಗಿ ಕಾಣಿಸುತ್ತಾರೆ.

ಹೊಯ್ಸಳರ ಕಾಲವೇ ಹೆಚ್ಚು ಜನಪರವಾಗಿ ಕಾಣಿಸುತ್ತದೆ. ಕನ್ನಡದ ಹಿರಿಯ ಲೇಖಕಿ ಶ್ರೀಮತಿ ಹೆಚ್. ಆರ್. ಸುಜಾತಾ ಅವರು ಹಾಸನ ಜಿಲ್ಲೆಯ ಅರೆ ಮಲೆನಾಡಿಗೆ ಸೇರಿದ ಆಲೂರು ತಾಲೂಕಿನಿಂದ ಎರಡು ಮೈಲಿ ದೂರವಿರುವ ಮರಸು ಹೊಸಹಳ್ಳಿಯನ್ನು ಕೇಂದ್ರವಾಗಿರಿಕೊಂಡು ಮಣಿಬಾಲೆ ಎಂಬ ಕಾದಂಬರಿಯನ್ನು ಬರೆದಿದ್ದಾರೆ. ಅದರಲ್ಲಿ ಅವರು ಬರೆದ ಕೆಲವು ಸಾಲುಗಳನ್ನು ಈ ಕೆಳಗಿನಂತಿವೆ–

‘ಈ ಜಾಗ ಅಂಬೋದು ದೇವೇಂದ್ರನ ಇಂದ್ರವನಕ್ಕಿಂತಲೂ ವೈನಾಗೈತೆ. ಕೆಳಗಿರೋ ಗಾಳಿ ಗದ್ದೆ ಹಳ್ಳ ಹಾದು ಗದ್ದೆ ಬದಿನ ಮೇಲಾಸಿ ಒಂದರ ಮೇಲೊಂದಿರೋ ಹತ್ತಾರು ಗದ್ದೆ ಹರಿಯ ಹತ್ಕಂಡು ಬಂದು ನಡುಮಧ್ಯಕ್ಕೆ ನಿಂತ್ಕಂಡ್ರೆ... ಬಲಗಡೆ ಹಳೆಮರಸಿನ

ಕೆರೆ, ಎಡಗಡಿಕೆ ದೊಡ್ಡ ಕೆರೆ ಸಿಕ್ಕವು. ಹಳೇ ಮರಸಿನ ಕೆರೇಲಿ ಬಿಳಿ ಅಮಲದ ಹೂವು. ಏರಿ ಮ್ಯಾಲೆ ಗೀಜಗನ ಗೂಡು ಮಸ್ತಾನಾಗಿ ನೇತು ಹಾಕ್ಕಂಡಿದ್ರೆ, ಮುತ್ತುಗದ ಮರ, ಹುಣಸೆ, ಕಾಡು ಸೀಗೆ ಸೊಪ್ಪಿನ ಬಳ್ಳಿನೂ ಹೊದ್ಕಂಡಿದ್ವು. ಅದೇ ದೊಡ್ಡಕೆರೆ ಏರಿ ಮೇಲೆ ಹ್ವಾದ್ರೆ ಕ್ಯಾದಿಗೆ, ತಾಳೆ ಹಿಂಡ್ಲು, ಏರಿ ಮೇಲೆ ದೊಡ್ಡ ದೊಡ್ಡ ಮರ, ಅದರ ತುಂಬ ಜೇನು ಒಟ್ಲು, ಇವೆರಡರ ನಡುಮಕೆ ಇನ್ನೊಸಿ ಮೇಲೆ ಹತ್ತಕೊಂಡೋದ್ರೆ ಬಲಕ್ಕೆ ಕ್ವಾಣನಕಟ್ಟೆ, ಮಕ್ಕಳಕಟ್ಟೆ, ಗರಿಕೆ ಕಟ್ಟೆ, ಮತ್ತಾಲಕನ ಕಟ್ಟೆ ಇದ್ವು. ಈ ನಾಕೂ ಕಟ್ಟೆಗಳು, ಎರಡು ಕೆರೆಗಳು, ಊರು ಸುತ್ತಕ್ಕೂ ಇದ್ದು ಚೌಕಮನೆ ಬರದು ಅದಕ್ಕೆ ನಾಕೂ ಕಡಿಕೆ ಹಣ್ಣಿನ ಮನೆಯ ಕೊರದಂಗೆ ಕಾಣ್ತಿದ್ವು. ಅದರ ಸುತ್ತಕು ಕಾಯಿ ನಡಸೋ ಮನೆಗಳಂಗೆ ಊರಗದ್ದೆ, ಬಯಲು, ಕೆರೆ ದಾಟಿ ಮೇಗಡಿಕೆ ಹೋದಂಗೆ, ಹೋದಂಗೆ ದನ ಮೇಯೋ ಕಾವಲು, ಮಠದ ತೋಪು, ಬಾರೆ ಕಾಣ್ಸಕಳವು. ದನ ಮೇಯೋ ಕಾವ್ಲನೂ ಅಲಲ್ಲೇ ಕೆತ್ತಿ ಕೊರದು ಉತ್ತು ಹೊಲಗಾಡು ಮಾಡ್ಕಂಡವ್ರೂ ಇದ್ರು.

ಕೆರೆಕಟ್ಟೆ ಬಿಟ್ಟು, ಇನ್ನೊಸಿ ಹತ್ಕಂಡು ಬಂದ್ರೆ ಚೌಕಾಬಾರದಲ್ಲಿ ಹಣ್ಣುಮಾಡೋ ಮನೆಯಂಗೆ ಊರು ಮೈಚಾಚಿತ್ತು. ಹತ್ರದಲ್ಲೇ ಸೇದೋ ಕೈಬಾವಿ. ಹಳೆಮರಸಿನ ಕೆರೆ ಕಡಿಂದ ಬಂದ್ರೆ ಹಳೆಮರಸಿನ ಕೇರಿ. ನಡುಮಧ್ಯಕ್ಕೆ ಅವರ ಭೂತಪ್ಪನ ದೇವಸ್ಥಾನ. ದೊಡ್ಡ ಕೆರೆ ಕಡಿಂದ ಬಂದ್ರೆ ಏರಿ ದಾಟಿ ಅಲ್ಲಿರೊ ಸಂಪಿಗೆ ಘಮಲ ಮೂಗಿಗೇರ್ಸಿ, ಕೆಳಕೇರಿ ಹಿತ್ಲು ದಾಟ್ಕಂಡು ಬಂದ್ರೆ ಅಲ್ಲೊಂದು ಬಾವಿ. ಅದೇ ಹೊಸಳ್ಳಿ ಕೇರಿ. ಬಾವಿ ತೆಗ್ಗಲ್ಲಿ ದ್ಯಾವಯ್ಯನ ಮನೆ. ಇನ್ನೂ ತೆಗ್ಗಲ್ಲಿ ಅವ್ರ ಉಡುಸ್ಲಮ್ಮನ ಗುಡಿ. ಆ ಬಾವಿ ಸುತ್ತ ಹೊಸಳ್ಳಿ ಕೇರಿಯ ಆರು ಮನೆ. ಈ ಊರಿಗೆ ರಂಗು ತುಂಬಲು ಯಾರ್ಯಾರೋ ಊರ ಹೊರಗಿನಿಂದ ಬರುತ್ತಾರೆ. ಊರ ಭವಿಷ್ಯ

ಹೇಳಿ ಥೂ...ಪಟ್... ಎಂದು ಕಣ್ಕಟ್ಟಿನಾಟ ತೋರುವ ಕರೀಕೋಟಿನ ಹಾಲಕ್ಕಿಯುವವನು, ಬಳೆ ತೊಡಿಸುವ ಬಳೆಗಾರ, ಮಠದ ಅಯ್ಯನವರು, ಹೆಂಡತಿ ಮಕ್ಕಳ ಜೊತೆ ಬರುವ ಪುಂಗಿದಾಸ, ಕುದುರೆ. ಹಕ್ಕಿಪಂಜರ, ಕೌದಿ, ಪಾತ್ರೆ, ಸಮಸ್ತವನ್ನೂ ಹೊತ್ತು, ದಂಡು ಬಂದಂತೆ ಊರೊಳಕ್ಕೆ ಬರುವ ಗೊಂಬೆರಾಮಯ್ಯ, ಊರೊಳಗೆ ಬಂದು ವಾಲೆ, ಕಡಕು, ಸೊಂಟಪಟ್ಟಿ, ಕಾಲಂದುಗೆ, ಕಪ್ಪ, ಕಡಗ, ಬೇಸರಿ, ಹಾಲುಮಣಿ, ಕಟ್ಟಿನ ಕರಿಮಣಿ, ಕೈಕಡಕು, ಮೂಗುನತ್ತು, ಸಣ್ಣಗುಂಡು, ದೊಡ್ಡುಗುಂಡು, ಹರಳೋಲೆ, ಪಿಲ್ಲಿ, ಕಾಲ್ಗೆಜ್ಜೆ, ಬುಲಾಕು, ಜಡೆಬಿಲ್ಲೆ, ನಾಗರ, ರಾಗಟೆ, ವಂಕಿಯುಂಗರ ಮಾಡಿಕೊಟ್ಟು ಲಾಭ ಮಾಡಿಕೊಳ್ಳುವ ಆಚಾರ್ರು ಹೀಗೆ..'

ಇಂಥ ಊರಲ್ಲಿ ಜಾತಿಧರ್ಮಗಳು ಮನುಷ್ಯರಿಗೆ ಯಾವುದೇ ತಡೆಗೋಡೆಯನ್ನು ಒಡ್ಡುವುದಿಲ್ಲ.

ಹಾಸನ, ಹಾಸನವನ್ನು ಒಳಗೊಂಡ ಕರ್ನಾಟಕ, ಕರ್ನಾಟಕವನ್ನು ಒಳಗೊಂಡ ಭಾರತ ಬದುಕಿದ್ದೇ ಹೀಗೆ.

ಕನ್ನಡ ಸಾಮರಸ್ಯದ ನೆಲೆಗಳು ಮಾಲಿಕೆ
ಇದುವರೆಗೆ ಪ್ರಕಟವಾದ ಪುಸ್ತಕಗಳ ಪಟ್ಟಿ

ಕ್ರ.ಸಂ.	ಪುಸ್ತಕದ ಹೆಸರು	ಲೇಖಕರ ಹೆಸರು
೧.	ಸಾಮರಸ್ಯದ ಒಡಲು: ಉಡುಪಿ	ಲಕ್ಷ್ಮೀ ಮಚ್ಚಿನ
೨.	ಸಾಮರಸ್ಯದ ನೆಲೆಯಾಗಿ ಶ್ರವಣಬೆಳಗೊಳ	ಕೆ. ಪಿ. ಮಹಾದೇವಿ
೩.	ಹಾಸನ ಜಿಲ್ಲೆಯ ಸಾಮರಸ್ಯದ ನೆಲೆಗಳು	ಪ್ರಸಾದ್ ರಕ್ಷಿದಿ ಚಲಂ ಹಾಡ್ಲಹಳ್ಳಿ
೪.	ಉತ್ತರ ಕನ್ನಡ ಜಿಲ್ಲೆಯ ಸಾಮರಸ್ಯದ ನೆಲೆಗಳು ದೇವಿ ಮತ್ತು ಬಂಗಾರ	ಎಂ. ಜಿ. ಹೆಗಡೆ
೫.	ಅತ್ತೂರು ಸಾಂತ್ ಮಾರಿ	ಮಿತ್ರಪ್ರಭಾ ಹೆಗ್ಡೆ
೬.	ಹಾಜಿ ಅಬ್ದುಲ್ಲಾ ಸಾಹೇಬರು	ಏ.ಕೆ. ಕುಕ್ಕಿಲ
೭.	ದಕ್ಷಿಣ ಕನ್ನಡ ಜಿಲ್ಲೆಯ ಭಾಷಾ ಸಾಮರಸ್ಯ ಮತ್ತು ಸಾಂಸ್ಕೃತಿಕ ವೈವಿಧ್ಯ	ಜೆಸ್ಸಿ ಪಿ.ವಿ.
೮.	ತುಳುನಾಡಿನ ದೈವಾರಾಧನೆ	ಡಾ. ಪೂವಪ್ಪ ಕಣಿಯೂರು
೯.	ಮಂಟೇದಯ್ಯ	ಡಾ. ಪ್ರಕಾಶ್ ಮಂಟೇದ
೧೦.	ಮಲೆಯ ಮಹದೇಶ್ವರ	ಶಿಲ್ಪಾ ಎಸ್
೧೧.	ಸಾಮರಸ್ಯದ ಸುಧಾಕರ: ಶಿರಹಟ್ಟಿ ಶ್ರೀ ಫಕೀರೇಶ್ವರ	ಈಶ್ವರ ಮೆಡ್ಲೇರಿ
೧೨.	ಭಾವೈಕ್ಯತೆಯ ಬೆಳಗು ಬಾಗಲಕೋಟೆ	ಶ್ರೇಯಾಂಶ ಜ ಕೋಲ್ವಾರ
೧೩.	ಇಂಚಗೇರಿ ಮಠ	ಅನಿತಾ ಕಾರಾಜನಗಿ
೧೪.	ಚಿತ್ರದುರ್ಗ ಜಿಲ್ಲೆಯ ಸಾಮರಸ್ಯದ ನೆಲೆಗಳು	ಮೋದೂರು ತೇಜ
೧೫.	ಆರ್. ಗೋಪಾಲಸ್ವಾಮಿ ಐಯ್ಯರ್: ಜೀವನ ಮತ್ತು ಸಾಧನೆ	ಡಾ. ಪದ್ಮಶ್ರೀ ಟಿ

೧೬. ಅವಿಭಜಿತ ಹುನಗುಂದ ಪರಿಸರದ ಸಾಮರಸ್ಯದ ನೆಲೆಗಳು — ಅಶೋಕ ವಿ ಬಳ್ಳಾ

೧೭. ವಿಜಯಪುರ ಜಿಲ್ಲೆಯ ಸೌಹಾರ್ದ ಪಥ — ಡಾ. ಎಂ.ಎಸ್. ಮಾಗಣಗೇರಿ

೧೮. ಕುದ್ಮುಲ್ ರಂಗರಾಯರು — ಸುಲೋಚನ ಪಚ್ಚಿನಡ್ಕ

೧೯. ಕೆಳದಿ ರಾಜ್ಯ ದಕ್ಷಿಣ ಭಾರತದ ಸಂಪತ್ತಿನ ಕಣಜ — ಡಾ. ಕೆ. ಜಿ. ವೆಂಕಟೇಶ್

೨೦. ಸಗರನಾಡು — ಡಾ. ಕರೆಣ್ಣ ದೇವಪುರ

೨೧. ರಾಯಚೂರು ಜಿಲ್ಲೆಯ ಸಾಮರಸ್ಯದ ನೆಲೆಗಳು — ಡಾ. ಚನ್ನಬಸವಯ್ಯ ಹಿರೇಮಠ

೨೨. ಮೈಲಾರಲಿಂಗ: ಸಾಮರಸ್ಯದ ನೆಲೆಗಳು — ಡಾ. ಚನ್ನಮ್ಮ ಎನ್ ಅಲ್ಲಾಬ

೨೩. ತಿಂಥಣಿ ಮೌನೇಶ್ವರ — ಡಾ. ಲಕ್ಷ್ಮೀಕಾಂತ ಪಂಚಾಳ

೨೪. ಝುಟ್‌ಪಟ್ ಬೀಬಿ ಮತ್ತಿತರ ಸೂಫಿ ಸಾಧಕಿಯರು — ಡಾ. ಪರ್ವಿನ ಸುಲ್ತಾನಾ

೨೫. ಸೂಫಿ ಸಂತ ಖ್ವಾಜಾ ಬಂದೇನವಾಜ್ — ಬಿ.ಎಚ್. ನಿರಗುಡಿ

೨೬. ಯಾದಗಿರಿ ಜಿಲ್ಲೆಯ ಸೌಹಾರ್ದ ನೆಲೆಗಳು — ಡಾ. ಶೈಲಜಾ ಎನ್ . ಬಾಗೇವಾಡಿ

೨೭. ಸಾವಳಗಿ ಶಿವಲಿಂಗೇಶ್ವರರು — ಡಾ. ರಾಜಶೇಖರ ಬಿರಾದಾರ

೨೮. ಹಾಲುಮತ ಸಂಸ್ಕೃತಿ ಮತ್ತು ಬೀರಪ್ಪ ಪರಂಪರೆ — ಡಾ. ನಿಂಗಮ್ಮ ಗದಗ

೨೯. ದೇವುಗಾನಿಕೆ ದೊಡ್ಡಮ್ಮ (ಕಾವಲ್ಲಮ್ಮ) — ಕಾಂತರಾಜು ಗುಪ್ಪಟ್ಣ

೩೦. ರಾಜಾ ಕುರಂಗರಾಯ — ಡಾ. ರವಿಕುಮಾರ್ ನೀಹ

೩೧. ಕಡಲೆಕಾಯಿ ಪರಿಷೆ — ಡಾ.ಶಿವರಾಜ ಬ್ಯಾಡರಹಳ್ಳಿ

೩೨. ಕೈವಾರ ತಾತಯ್ಯ — ಡಾ. ಸಿ.ಎಸ್ ದ್ವಾರಕನಾಥ್

೩೩. ಕರ್ನಾಟಕ ಗೋವ	ಡಾ ಆನಂದಕುಮಾರ ಎಂ. ಜಕ್ಕಣ್ಣವರ
೩೪. ಗುರುನಾನಕರು	ಡಾ. ರಘುಶಂಖ ಭಾತಂಬ್ರಾ
೩೫. ಮಹಮೂದ್ ಗವಾನ್	ಡಾ. ರಣಧೀರ
೩೬. ಕಾಯಕಯೋಗಿ ಚರಬಸವರು	ಡಾ ಸಿದ್ಧರಾಮ ಹೊನ್ಕಲ್
೩೭. ತತ್ವಪದ ಸಾಹಿತ್ಯ	ಡಾ. ಸುಮಂಗಲಾ ಎನ್. ರೆಡ್ಡಿ
೩೮. ಸಾಮರಸ್ಯಕ್ಕೆ ದುಡಿದ ಸಂತರು	ಡಾ ಬಸು ಬೇವಿನಗಿಡದ
೩೯. ದಕ್ಷಿಣ ಪ್ರಸ್ಥಭೂಮಿಯ ಸೌಹಾರ್ದ ನೆಲೆಗಳು	ಶಕೀಲ್ ಐ.ಎಸ್
೪೦. ಬೈಲುಕುಪ್ಪೆಯ ಬೌದ್ಧರು	ಮೇಜರ್ ಡಾ. ಕುಶ್ವಂತ್ ಕೋಳಿಬೈಲು
೪೧. ನಾಥ ಪರಂಪರೆ	ಡಾ. ಡಿ.ಸಿ. ರಾಮಚಂದ್ರ

******

ಕುವೆಂಪು ಅವರು ಕರ್ನಾಟಕವನ್ನು 'ಸರ್ವಜನಾಂಗದ ಶಾಂತಿಯ ತೋಟ' ವೆಂದು ಕರೆದರು. ಕನ್ನಡ ನಾಡಿನ ವಿವಿಧ ಜನ ಸಮುದಾಯಗಳು ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಮೃದ್ಧವಾಗಿ ಬೆಳೆಸಿವೆ. ಈ ಕಾರಣಕ್ಕೆ ನಮ್ಮದು ಬಹು ಮಾದರಿಯ ಬಹುತ್ವದ ವ್ಯವಸ್ಥೆ. ಇದನ್ನು ಗಮನದಲ್ಲಿರಿಸಿಕೊಂಡು ಕರ್ನಾಟಕ ಸರಕಾರವು ಸರ್ವರನ್ನೂ ಒಳಗೊಂಡಿರುವ, ಸರ್ವರನ್ನೂ ಬೆಸೆಯುವ ಮತ್ತು ಸರ್ವರಿಗೂ ಸಮಪಾಲು-ಸಮಬಾಳು ನೀಡುವ, ಸರ್ವೋದಯ ತತ್ವದ ಅಭಿವೃದ್ಧಿ ಮಾದರಿಯನ್ನು ಅಳವಡಿಸಿಕೊಂಡಿದೆ. ಇದನ್ನು ನಾನು 'ಕರ್ನಾಟಕ ಅಭಿವೃದ್ಧಿ ಮಾದರಿ' ಎಂದು ಹೆಮ್ಮೆಯಿಂದ ಕರೆಯುತ್ತೇನೆ.

ಇದಕ್ಕೆ ಪೂರಕವಾಗಿ, ನಾಡಿನ ಸಂಸ್ಕೃತಿಯ ಬಗ್ಗೆ ಜನರ ತಿಳಿವಳಿಕೆಯನ್ನು ಹೆಚ್ಚಿಸಲು ಕನ್ನಡ ಅಭಿವೃದ್ಧಿ ಪ್ರಾಧಿಕಾರವು 'ಕನ್ನಡ ಸಾಮರಸ್ಯದ ನೆಲೆಗಳು' ಯೋಜನೆಯಡಿಯಲ್ಲಿ ವಿಶೇಷ ಪುಸ್ತಕ ಮಾಲಿಕೆಗಳನ್ನು ಹೊರತರುತ್ತಿದೆ. ಈ ಪುಸ್ತಕಗಳು ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಹಾಗೂ ಜನಸಾಮಾನ್ಯರಿಗೆ ಸಂಗ್ರಹಯೋಗ್ಯ ಕೃತಿಗಳಾಗಲಿ ಹಾಗೂ ಈ ಪುಸ್ತಕಗಳು ನಾಡಿನ ಕುರಿತಾದ ನಮ್ಮ ಅರಿವನ್ನು ಹೆಚ್ಚಿಸಲಿ ಎಂದು ಆಶಿಸುತ್ತೇನೆ.

ಸಿದ್ದರಾಮಯ್ಯ
ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ



ಕನ್ನಡ ಅಭಿವೃದ್ಧಿ ಪ್ರಾಧಿಕಾರ ಎರಡನೇ ಮಹಡಿ
ವಿಧಾನಸೌಧ, ಬೆಂಗಳೂರು - ೫೬೦೦೦೧ | ಬೆಲೆ:ರೂ.100/-